


ಪ್ರಾಣಿ ಪರಿಸರ

ಕೃಷ್ಣಾನಂದ ಕಾಮತ

ಮನೋಹರ ಗ್ರಂಥಮಾಲಾ
ಧಾರವಾಡ

ಪ್ರಾಣಿಪರಿಸರ

[ವಿಜ್ಞಾನದ ತಿಳಿವಳಿಕೆಗೆ ಬರೆದದ್ದು]

ಬರೆದವರು :
ಕೃಷ್ಣಾನಂದ ಕಾಮತ

೧೯೭೯

ಮನೋಹರ ಗ್ರಂಥಮಾಲಾ
ಲಕ್ಷ್ಮೀಭವನ, ಸುಭಾಸರಸ್ತೆ
ಧಾರವಾಡ – ೫೮೦ ೦೦೧

PRANI-PARISARA : (Kannada) A Writing to understand Science
by Krishnand Kamat

Published by Manohara Grantha Mala, Dharwad - 1
Printed at Grantha Mudrana, Dharwad - 1 (Karnatak State)
Second Edition : July 1979: Copies : 1000 Pages : 112
Price : Rs. 4-00 Ordinary

 ೨ನೇ ಮುದ್ರಣ 1979
(I ಬಿಎಸ್‌ಸಿ ವರ್ಗಕ್ಕೆ ಮೊದಲ ಸೆಮಿಸ್ಟರ್ ಪಠ್ಯವಾಗಿ

ಸಂಪಾದಕ-ಪ್ರಕಾಶಕ: ಜಿ. ಬಿ. ಜೋಶಿ
ಸಾಹಿತ್ಯ-ಸಲಹೆಗಾರ : ಕೆ. ಡಿ. ಕುರ್ತಕೋಟಿ
ಹೊದಿಕೆ ಚಿತ್ರ: ಕೃಷ್ಣಾನಂದ ಕಾಮತ

ಬೆಲೆ : ೪-೦೦

ಮುದ್ರಣ: ಗ್ರಂಥ-ಮುದ್ರಣ, ಧಾರವಾಡ -೧

ಪ್ರಕಾಶನ : ಮನೋಹರ ಗ್ರಂಥಮಾಲಾ, ಧಾರವಾಡ - ೧

ಮೊದಲ ಮಾತು:

ಶಿಲ್ಪದಲ್ಲಿ ಮೂಡಿಬಂದಿರುವ ಪ್ರಾಣಿಗಳನ್ನು ಅಭ್ಯಸಿಸಿ ಒಂದು ಪುಸ್ತಕವನ್ನು ಬರೆಯಲು ಶ್ರೀ. ಜಿ. ಬಿ. ಜೋಶಿಯವರು ಸೂಚಿಸಿದಾಗ ಜೀವಶಾಸ್ತ್ರ ವಿದ್ಯಾರ್ಥಿಗೆ ಇದೇನು ಮಹಾ ಎಂದು ಕೂಡಲೇ ಒಪ್ಪಿಕೊಂಡೆ. ಆದರೆ ಕಾರ್ಯೋನ್ಮುಖಿಯಾದಾಗ, ಇದು ಧರ್ಮಗ್ರಂಥಗಳು, ಇತಿಹಾಸ. ಶಿಲ್ಪಕಲೆ ಮತ್ತು ಪ್ರಾಣಿ-ಶಾಸ್ತ್ರ-ತಜ್ಞರೆಲ್ಲ ಸೇರಿ ಆಳವಾಗಿ ಅಭ್ಯಾಸಮಾಡಬೇಕಾದ ಗಹನವಾದ ವಿಷಯ ಎಂದು ಅರಿವಾಯಿತು. ಪಶು-ಪಕ್ಷಿಲೋಕದಲ್ಲಿ ಅರ್ಧ-ನಾರೀಶ್ವರ, ಗಂಡಭೇರುಂಡ, ಕಿನ್ನರ, ಗಂಧರ್ವ, ನಾಗರ ಸ್ಥಾನಮಾನ ಅರಿಯದೆ ದಿಙ್ಮೂಢನಾದೆ. ನನ್ನಿಂದಾಗದು ಎಂದರೆ ಪ್ರಕಾಶಕರು ವಿವಿಧ ತಜ್ಞರಿಂದಲೇ ಬರೆಯಿಸಿ ಪ್ರಕಟಿಸುತ್ತಿದ್ದರೋ ಏನೋ! ಇಂತಹ ಕೃತಿಗಳು ಆಯಾ ತಜ್ಞರಿಗಷ್ಟೇ ಸೀಮಿತವಾಗಬಹುದಾದ್ದರಿಂದ, ಜನಸಾಮಾನ್ಯರಿಗೆ ಅರ್ಥವಾಗಬಹುದಾದಂತಹ ಪುಸ್ತಕ ಬರೆಯಲು ಬೇಕಾಗುವಷ್ಟು ಪುರಾಣಗ್ರಂಥ-ಪರಿಚಯ, ಶಿಲ್ಪಕಲೆ, ಇತಿಹಾಸಗಳನ್ನೂ ಅಭ್ಯಸಿಸಿ, ಅರ್ಥವಾಗುವಷ್ಟನ್ನು ತಿಳಿಯಮಾಡಿ ಸರಳವಾಗಿ ವಿವರಿಸಲು

ಯತ್ನಿಸಿದ್ದೇನೆ. ಆದರೂ ತಜ್ಞರು ವಿಷಯವನ್ನು ತೀರಾ ತಿಳಿ ಮಾಡಲಾಗಿದೆ ಎಂದೂ, ಇತರರು ತೀರ ಗಡುಚಾಗಿದೆ ಎಂದೂ ಆಪಾದಿಸಿದರೆ ಆಶ್ಚರ್ಯವಿಲ್ಲ.

ಹಿಂದೆಂದೂ ಇಲ್ಲದಷ್ಟು ಇಂದು ಮಾನವನು ಸಂಕುಚಿತ ದೃಷ್ಟಿಯುವ ಮತ್ತು ಸ್ವಾರ್ಥಿಯಾಗಹತ್ತಿದ್ದಾನೆ. ಅಂತೆಯೆ ತನ್ನ ಸಂತತಿಯಿಂದ ಜಗತ್ತೆಲ್ಲವನ್ನು ಕಿಕ್ಕಿರಿಯುವಂತೆ ತುಂಬಿ ಅವರ ಅನ್ನ-ಬಟ್ಟೆಗಾಗಿ ಪರಿಸರವನ್ನೆಲ್ಲ ಕಲುಷಿತವನ್ನಾಗಿ ಮಾಡಿದ್ದಾನೆ. ಅವನ ಯಂತ್ರಗಳು, ವಾಹನಗಳು, ಕಾರ್ಖಾನೆಗಳು ಎಡಬಿಡದ ಹೊಗೆ ಕಾರುತ್ತಿದ್ದರೆ, ಆತನ ಧಾನ್ಯ, ಹಣ್ಣು-ಹಂಪಲುಗಳ ರಕ್ಷಣೆಗಾಗಿ ಅತ್ಯಂತ ವಿಷಕಾರಿ ರಸಾಯನಗಳು ಭೂ-ಜಲ-ವ್ಯೋಮಗಳಲ್ಲಿ ಹರಡುತ್ತಿವೆ. ತೊಗಲು, ನೆಣ, ಮಾಂಸಗಳಿಗಾಗಿ ಕೊಂದು ನಿರ್ನಾಮ ಮಾಡುತ್ತಿರುವ ಪ್ರಾಣಿಗಳಿಗಂತೂ ಲೆಕ್ಕವಿಲ್ಲ. ಇದೇ ಸ್ಥಿತಿ ಮುಂದುವರಿದರೆ ನಮ್ಮ ಪರಿಸರದ ಪ್ರಾಣಿಗಳು ಹೆಚ್ಚು ಕಾಲ ನಮ್ಮೊಂದಿಗೆ ಇರಲಾರವು ಎಂದು ವಿಜ್ಞಾನಿಗಳು ಹೌಹಾರಿದ್ದಾರೆ. ಪ್ರಾಣಿ ರಕ್ಷಣೆಯ ಹೆಸರಿನಲ್ಲಿ ರಾಜ್ಯ, ಕೇಂದ್ರ, ಅಂತರ್ರಾಷ್ಟ್ರೀಯ ಸಂಸ್ಥೆಗಳು ಹಣದ ಹೊಳೆಯನ್ನೆ ಹರಿಸಿದರೂ ಪ್ರಾಣಿವಧೆ ಯಥಾಪ್ರಕಾರ ನಡೆದೇ ಇದೆ.

ನಮ್ಮ ಪೂರ್ವಜರು ಪ್ರಾಣಿಗಳನ್ನು ತಮ್ಮಂತೆ ನಿಸರ್ಗದ ಅಂಗವೆಂದು ತಿಳಿದು ಅವುಗಳನ್ನು ಸಾಕಿದರು, ಪ್ರೀತಿಸಿದರು, ಪೂಜಿಸಿದರು. ಜನಸಾಮಾನ್ಯರಿಗೆ ಅವುಗಳ ಮಹತ್ವ ತಿಳಿಯಲೆಂದು ಅವಕ್ಕೆ ದೇವ-ದೇವತೆಗಳ ಸ್ಥಾನ ಕೊಟ್ಟರು. ದೈವೀವಾಹನಗಳನ್ನಾಗಿಸಿದರು. ಪ್ರಾಣಿರೂಪದಲ್ಲಿ ದೇವರ ಅವತಾರವಾಗುವ ದೆಂದರು. ರಾಜ-ಮಹಾರಾಜರು ಪ್ರಾಣಿ-ಚಿಹ್ನಗಳನ್ನು ಲಾಂಛನವಾಗಿ ಸ್ವೀಕರಿಸಿ ದರು. ವಿವಿಧ ಪ್ರಾಣಿಗಳಿಗಾಗಿಯೇ ಹಬ್ಬ-ಹುಣ್ಣಿಮೆಗಳನ್ನು ಮೀಸಲಿಟ್ಟರು. ಕಥೆಗಳಲ್ಲಿ ಪಶು-ಪಕ್ಷಿಗಳಿಗೆ ಅಗ್ರಸ್ಥಾನ ಕೊಟ್ಟು, ಮಕ್ಕಳಿಗೂ ಅವುಗಳ ಬಗ್ಗೆ ಗೌರವಾದರ ಹುಟ್ಟುವಂತೆ ಮಾಡಿದರು. ಆಳರಸರು ಭಿತ್ತಿಚಿತ್ರ, ವಾಸ್ತುಶಿಲ್ಪ, ಇನ್ನಿತರ ಕಲೆಗಳಲ್ಲಿ ಅವುಗಳಿಗೆ ಸ್ಥಾನವೊದಗಿಸಿದರು. ದುರ್ದೈವದಿಂದ ಇಂದು ನಾವು ಪರಂಪರಾಗತವಾಗಿ ಬಂದ ಪ್ರಾಣಿಗಳ ನೆನಪಿನ ಹಬ್ಬಗಳನ್ನು ಮಾಡು ತ್ತಿದ್ದರೂ ಅವುಗಳ ಬಗ್ಗೆ ಆದರ, ಪ್ರೀತಿಗಳನ್ನು ತಾಳಿಲ್ಲ. ಇತ್ತ ಪಾಶ್ಚಾತ್ಯರಂತೆ ನಮ್ಮ ಸುಖಮಯ ಜೀವನಕ್ಕೆ ಅವುಗಳ ಕೊಡುಗೆ ಏನು ಎಂದು ಅರಿಯಲೂ ಯತ್ನಿಸದೇ ಬದುಕುತ್ತಿದ್ದೇವೆ. ಕಲೆ, ಧರ್ಮ, ವಿಜ್ಞಾನ ಯಾವ ದೃಷ್ಟಿಯಿಂದ ನೋಡಿದರೂ ನಮ್ಮ ಸಹ-ಪ್ರಾಣಿಗಳನ್ನು ಹೆಚ್ಚೆಚ್ಚಾಗಿ ತಿಳಿದುಕೊಂಡು ಬೇಕಾದಾಗ

ಅವನ್ನು ರಕ್ಷಿಸಿ, ಬೇಡಾದವುಗಳನ್ನು ಶಿಕ್ಷಿಸಿ, ನಿಸರ್ಗದಲ್ಲಿ ಸಮತೋಲವನ್ನು ಕಾಯುವದು ಅವಶ್ಯ. ಇಲ್ಲಿ ಈ ದೃಷ್ಟಿಕೋನ ಮೂಡಿಸಲು ಯತ್ನಿಸಿದ್ದೇನೆ. ಇದರಿಂದ ಓದುಗರಿಗೆ ಪರಿಸರದ ಪ್ರಾಣಿಗಳ ಬಗ್ಗೆ ಪ್ರೀತಿ, ಆದರ, ಅರಿವುಗಳು ಕಿಂಚಿತ್ತಾದರೂ ಹೆಚ್ಚಾಗುವಂತಾದರೆ ಈ ನನ್ನ ಯತ್ನ ಸಾರ್ಥಕವಾಗುವದು.

ಪೆಡಂಭೂತಗಳನ್ನು ಬಿಟ್ಟು ಈ ಗ್ರಂಥದಲ್ಲಿ ಸೇರಿಸಿದ ಎಲ್ಲ ಚಿತ್ರಗಳು ಉಬ್ಬು-ಚಿತ್ರ ಮತ್ತು ಶಿಲ್ಪಗಳನ್ನು ಆಧಸಿಯೇ ಬಿಡಿಸಿದ್ದೇನೆ. ಮುಖಪುಟ, ಬೇಲೂರಿನ ಅಪೂರ್ವ ಶಿಲ್ಪವೊಂದನ್ನು ಪ್ರತಿನಿಧೀಕರಿಸಿದರೆ, ಹಿಂಪುಟದ ಚಿತ್ರಗಳು ಲೇಪಾಕ್ಷಿಯ ಉಬ್ಬು-ಚಿತ್ರವನ್ನು ಆಧರಿಸಿವೆ. ನೋಡಿ ಮೆಚ್ಚಿದ ಎಲ್ಲಶಿಲ್ಪಗಳನ್ನೂ ಸೇರಿಸಬೇಕು ಎನ್ನುವ ಹಂಬಲವಿತ್ತಾದರೂ ವ್ಯಾವಹಾರಿಕವಲ್ಲದ್ದರಿಂದ ಹಾಗೆ ಮಾಡಲಿಲ್ಲ.

ದುಡಿಯಲು ಹಚ್ಚಿ, ಪ್ರಕಾಶನ ಕಷ್ಟಸಾಧ್ಯವಾದ ಈ ದಿನಗಳಲ್ಲಿಯೂ ಪುಸ್ತಕವನ್ನು ಬಲು ಬೇಗ ಅಂದವಾಗಿ ಮುದ್ರಿಸಿದ ಶ್ರೀ. ಜಿ. ಬಿ. ಜೋಶಿಯವರಿಗೆ ಕೃತಜ್ಞತೆಗಳು, ಉಪನಿಷತ್ತು, ಕಾವ್ಯ, ಪುರಾಣಗಳಲ್ಲಿ ಬರುವ ಪ್ರಾಣಿವಿವರಗಳನ್ನು ಸಂಗ್ರಹಿಸಲು ಸಹಾಯ ಮಾಡಿದ ಶ್ರೀ. ಗಣೇಶ ಬುರ್ಡೆಯವರಿಗೂ ಉಪಕೃತನಾಗಿದ್ದೇನೆ.

೩೦-೧೧-೧೯೭೪

ಕೃಷ್ಣಾನಂದ ಕಾಮತ

ಎರಡನೆಯ ಆವೃತ್ತಿಗೆ

ಅರಿಕೆ :

'ಪ್ರಾಣಿಪರಿಸರ'ವನ್ನು ಕರ್ನಾಟಕ ವಿಶ್ವವಿದ್ಯಾಲಯದವರು ಮೊದಲ ಆವೃತ್ತಿಯ ಕೊನೆಯ (೮೬ ಪುಟಗಳನ್ನು ಕಡಿಮೆ ಮಾಡಿ) ಬಿ. ಎಸ್‌ಸಿ. II ವರ್ಗಕ್ಕೆ ಪ್ರಥಮ ಸೆಮಿಸ್ಟರಿಗೆ (೧೯೭೯–೮೦ ಮತ್ತು ೧೯೮೦–೮೧) ಈ ವರ್ಷಗಳಿಗೆ ಪಠ್ಯಪುಸ್ತಕವನ್ನಾಗಿ ನಿಯಮಿಸಿದ್ದರಿಂದ ಆವಷ್ಟೇ ಪುಟಗಳ ಈ ಗ್ರಂಥವನ್ನು ಈಗ ಪ್ರಕಟಿಸಲಾಯಿತು. ಇದಕ್ಕೆ ತಮ್ಮ ಅನುಮತಿಯನ್ನಿತ್ತ ಲೇಖಕರಾದ ಶ್ರೀ. ಕೃಷ್ಣಾನಂದ ಕಾಮತರನ್ನೂ, ಪಠ್ಯಪುಸ್ತಕವನ್ನಾಗಿ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸ ಮಂಡಳದ ಸದಸ್ಯರನ್ನೂ ಬೇಗ ಮುದ್ರಿಸಿ ಕೊಟ್ಟ ಗ್ರಂಥ ಮುದ್ರಣದವರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

– ಜಿ. ಬಿ. ಜೋಶಿ

ಪ್ರಕಾಶಕ

ಶಿ ಲೆ ಯ ಲ್ಲಿ

'ಪ್ರಾಣ-ಪ್ರಪಂಚ' ಕೊನರಿಸಿದ

ಶಿಲ್ಪವರ್ಯರ ನೆನಪಿಗೆ –

ಪರಿವಿಡಿ :

ಒಂದು: ಪ್ರಾಣಿಗಳ ವಿಕಾಸ

ಗಿಡ, ಬೀಜ ಇವೆರಡರಲ್ಲಿ ಮೊದಲು ಯಾವುದು ಅಸ್ತಿತ್ವದಲ್ಲಿ ಬಂದಿತು ಎಂಬುದು ಬಿಡಿಸಲಾಗದ ಸಮಸ್ಯೆಯಾದ್ದರಿಂದ ಮಾನವನು ಪೃಥ್ವಿಯ ಮೇಲೆ ಹೇಗೆ ಬಂದ ಎಂಬುದಕ್ಕೆ ಬೇರೆ ಬೇರೆ ಧರ್ಮಗ್ರಂಥಗಳಲ್ಲಿ ಬೇರೆ ಬೇರೆ ವ್ಯಾಖ್ಯೆ ಕೊಟ್ಟಿದ್ದಾರೆ. ಬಾಯ್‌ಬಲ್ಲಿನಲ್ಲಿ ದೇವರು ತನ್ನ ಪ್ರತಿಕೃತಿಯಾಗಿ ಆದಮ್ ಮತ್ತು ಈವ್‌ರನ್ನು ನಿರ್ಮಿಸಿ, ಅವರು ನಿಷೇಧಿತ ಹಣ್ಣನ್ನು ತಿನ್ನುವಂತೆ ಆಗಿ ಮಾನವ ಕೋಟಿ ಅವರ ಸಂತಾನವಾಗಿ ಪರಿಣಮಿಸಿತು ಎಂದು ಹೇಳಿದೆ. ಅಂದರೆ ಮಾನವನಿಗೆ ಬುದ್ಧಿಪೂರ್ವಕವಾಗಿಯೇ ಜನ್ಮ ಕೊಟ್ಟು, ಆತನ ಸೌಲಭ್ಯಕ್ಕಾಗಿ ಉಳಿದ ಸಕಲ ಪ್ರಾಣಿ-ಸಸ್ಯಗಳನ್ನು ದೇವರೇ ನಿರ್ಮಿಸಿದ. ಕುರಾಣದಲ್ಲಿ ಪುರುಷವರ್ಗಕ್ಕೇ ಪ್ರಾಧಾನ್ಯ ಕೊಟ್ಟು ಸ್ತ್ರೀ ಮತ್ತು ಉಳಿದ ಜೀವಕೋಟಿಯನ್ನು ಈ ವರ್ಗದ ಸುಖ-ಜೀವನಕ್ಕೆ ನಿರ್ಮಾಣಮಾಡಲಾಗಿದೆ. ಭಾರತದ ವೇದ-ಪುರಾಣಗಳಲ್ಲಿ ಮಾನವನ ಉತ್ಪತ್ತಿಯ ಬಗ್ಗೆ ಒಮ್ಮತವೇನೂ ಇಲ್ಲ. ಆದರೆ ಪ್ರತಿಯೊಂದು ಪ್ರಾಣಿ-ಗುಂಪಿಗೆ ಒಬ್ಬೊಬ್ಬ ಪಿತಾಮಹನನ್ನು ಗುರುತಿಸಲಾಗಿದೆ. ಬ್ರಹ್ಮನ ಮೊಮ್ಮಗಳಾದ,

ದಕ್ಷಪುತ್ರಿ ಕದ್ರು, ಕಶ್ಯಪಮುನಿಯ ಪತ್ನಿ. ಸರ್ಪಲೋಕಕ್ಕೆ ಅವಳೇ ತಾಯಿ. ವಿವಸ್ವಾನ್ ಮತ್ತು ಸರನ್ಯೂರ ಅವಳಿ ಮಕ್ಕಳು ಯಮ ಮತ್ತು ಯಮಿಯರು. ಇವರ ಸಂತಾನವೇ ಮಾನವರು ಎಂದು ಹೇಳಲಾಗಿದೆ. ಇದರಂತೆ ಕಾಡುಮೃಗಗಳ ಜನಕರೇ ಬೇರೆ; ಸಸ್ಯವರ್ಗವು ನಿರ್ಮಿತವಾದ ವಿಧಾನವೇ ಬೇರೆ, ಮತ್ಸ್ಯವರ್ಗ ನಿರ್ಮಿತವಾದ ವಿಧಾನವೇ ಬೇರೆ. ಅಂದರೆ ಇಂದಿನ ಜೀವಕೋಟಿ, ದೇವರ ಮಾಯಾವಿದ್ಯೆಯಿಂದ ಒಮ್ಮೆಲೆ ನಿರ್ಮಾಣವಾಗದೆ ವಿವಿಧ ಯುಗಗಳಲ್ಲಿ ಬೇರೆ ಬೇರೆ ಮೂಲ-ವಂಶದಿಂದ ಭೂಮಿಯಲ್ಲಿ ರೂಪಗೊಂಡಿದೆ ಎಂದಂತಾಯಿತು. ಇದೇ ಮಾತನ್ನು ಡಾರ್‌ವಿನ್ ಮತ್ತು ಸಮಕಾಲೀನ ವಿಜ್ಞಾನಿಗಳು ಸೂಚಿಸಿದಾಗ, ಚರ್ಚಿನ ಅಧಿಕಾರಿಗಳು ಅವರ ವಿಚಾರಗಳನ್ನು ಖಂಡಿಸಿದರಲ್ಲದೇ ಹಲವರನ್ನು ಶಿಕ್ಷೆಗೂ ಗುರಿಪಡಿಸಿದರು. ಇದರಿಂದ ಎಚ್ಚೆತ್ತ ವಿಜ್ಞಾನಿವರ್ಗ ಜೀವಕೋಟಿಯನ್ನು ಕೂಲಂಕಷವಾಗಿ ಅಭ್ಯಸಿಸಿ, ಪ್ರಾಣಿಗಳು ವಿಕಾಸಹೊಂದುತ್ತ ಒಂದರಿಂದ ಇನ್ನೊಂದು ಹುಟ್ಟಿಬಂದಿವೆ ಎಂದು ತೋರಿಸಿದ್ದಾರೆ. ವಾನರರು ನರರ ಆದಿ ಪುರುಷರು ಎಂಬುದನ್ನು ಈ ಅರ್ಥದಲ್ಲೇ ಬಳಸಲಾಗುತ್ತಿದೆ.

ಮಾನವರು 'ಮಂಗತನ' ಬಿಟ್ಟು ಮರದಿಂದ ಕೆಳಗಿಳಿದು ನಗ್ನರೂಪದಲ್ಲಿ ಕಾಡುಮೇಡುಗಳಲ್ಲಿ ಅಲೆದಾಡಿ ಬೇಟೆಯಾಡುವ ದಿನಗಳನ್ನು ಪ್ರಾರಂಭಿಸಿ ತನ್ನ ಜೀವನ ವಿಕಾಸಗೊಳಿಸುತ್ತ ಬಿಲ್ಲು-ಬಾಣಗಳಿಂದ ಬೇಟೆಯಾಡುತ್ತ ಬೆಂಕಿಯನ್ನು ಶೋಧಿಸಿ, ಗೋವುಗಳನ್ನು ಸಾಕಿ, ಕೃಷಿ ಮಾಡಿ, ಭೂಮಿಯ ಖನಿಜಸಂಪತ್ತನ್ನು ಸೂರೆಗೊಂಡು ಕೊನೆಗೆ ಚಂದ್ರಲೋಕಪ್ರಯಾಣ ಮಾಡಿಬಂದ ಸಾಹಸದ ಕಥೆ ರಮ್ಯವಾಗಿರುವಂತೆ ವಾನರನಿಂದ ನರನಾಗಲು ಈ ಜೀವ ಪಟ್ಟ ಸಾಹಸದ ಘಟ್ಟಗಳು ಸೋಜಿಗಪಡುವಂತಹವೂ ಆಗಿವೆ.

ತೀರ ಪುರಾತನವೆಂದು ತಿಳಿಯಲಾದ ಏಕ-ಜೀವ-ಕಣ-ಪ್ರಾಣಿಗಳು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿವೆ. ಅವುಗಳಲ್ಲಿಯೇ ದೊಡ್ಡದಾದ ಅಮೀಬಾ ಒಂದು ಬಿಂದುವಿನ ಗಾತ್ರದ್ದು ! ಒಂದು ಚೌರಸ್ ಇಂಚಿನಲ್ಲಿ ನಗರದ ಹತ್ತು ಸಾವಿರ ಅಮೀಬಗಳ ಸಂಖ್ಯೆ ಒತ್ತಟ್ಟಿಗೆ ಸೇರಿ ಸಭೆಯಾಗಬಹುದು. ಅವಕ್ಕೆ ಕಣ್ಣು, ಕಾಲು, ಕೈ ಎಂಬ ಭೇದ ಇಲ್ಲದಂತೆ ಲಿಂಗಭೇದವೂ ಇಲ್ಲ. ಹರಟೆಯಲ್ಲಿ ತೊಡಗಿದಾಗ ಹೆಣ್ಣಾದರೆ, ವೈರಿಯೊಡನೆ ಕಾದಾಟದಲ್ಲಿ ತೊಡಗಿದಾಗ ಗಂಡಾಗುತ್ತವೆ. ಅವು ದೊಡ್ಡದಾಗಿ ಬೆಳೆದು ಚಟುವಟಿಕೆಗೆ ತೊಂದರೆಯಾದಾಗ ಎರಡು ಭಾಗವಾಗಿ

ಜೋಡಿ-ಮರಿ ಅಮೀಬಿಯಾಗಿಬಿಡುತ್ತವೆ. ಮಾನವನಲ್ಲಿಯೂ ಈ ಸಾಮರ್ಥ್ಯ ಉಳಿದುಕೊಂಡಿದ್ದರೆ, ವರ ಹುಡುಕುವ, ವರದಕ್ಷಿಣೆ ಕೊಡುವ, ಮಕ್ಕಳು-ಮರಿಗಳನ್ನು ಸಲಹುವ ತೊಂದರೆಯೇ ಇರುತ್ತಿರಲಿಲ್ಲ!

ವಿಕಾಸದ ಎರಡನೇ ಘಟ್ಟದಲ್ಲಿ ತಾಯಿಯಿಂದ ಉತ್ಪನ್ನವಾದ ಮರಿ ತನ್ನದೇ ಬೇರೊಂದು ಸಂಸಾರ ಹೂಡುವದಕ್ಕಿಂತ ತಾಯಿಯೊಡನೆ ಸಹಜೀವನಪ್ರಾರಂಭಿಸಿ ಸಂಘಟನೆ ಮಾಡಿಕೊಂಡು ವಾಸಿಸಲು ಪ್ರಾರಂಭಿಸಿತು. ಇಂಥ ಸಂಘಗಳಿಗೆ ಆಹಾರಸಂಶೋಧನೆಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಿದಾಡಲು ಅಸಾಧ್ಯವಾದ ಮಾತಾದ್ದರಿಂದ ತಾವು ಜೀವಿಸುವ ನೀರಿನಲ್ಲಿ ಸಿಗುವ ಆಹಾರವನ್ನೇ ತಿಂದು ತೇಗಿದವು. ಕಡಲಿನಲ್ಲಿ ಜೀವಿಸುವ 'ಸ್ಪಂಜ್' ಈ ಜಾತಿಗೆ ಸೇರಿದ್ದು. ಸಂಘಜೀವಕ್ಕೆ ದುಂಬಾಲು ಬಿದ್ದು ಇದ್ದಲ್ಲಿಯೇ ಇದ್ದು ಬೇಸರಪಟ್ಟ ಪ್ರಾಣಿಗಳು ಬಹು-ಜೀವ-ಕಣ-ಪ್ರಾಣಿಯಲ್ಲಿ ಪರಿವರ್ತನೆ ಹೊಂದಿದವು. ಇಂಥ ಜೀವವರ್ಗ ಸ್ವೇಚ್ಛಾಚಾರಿಯಾಗಿ ತಿರುಗಬಲ್ಲವು. ಇಲ್ಲವೇ ಒಂದೆಡೆ ಸ್ಥಾಯಿಯಾಗಿರಬಲ್ಲವು. ಹ್ಯಾಡ್ರಾ ಈ ವರ್ಗದ ಒಳ್ಳೆಯ ಉದಾಹರಣೆ. ಈ ಜೀವಿಗಳು ಉರಿಬಿಸಿಲು, ಮಳೆ-ಗಾಳಿ, ಆರ್ದ್ರತೆ ಮುಂತಾದ ವಾತಾವರಣದ ಆಗು-ಹೋಗುಗಳಿಗೆ ಹೊಂದಿಕೊಳ್ಳುವದರಲ್ಲಿ ಅಪಾರ ಕಷ್ಟ-ನಷ್ಟ ಅನುಭವಿಸಿದ್ದರಿಂದ ಪ್ರಾಣಿವಿಕಾಸದ ಮುಂದಿನ ಹಂತ ಬೇರೆಯ ಹಾದಿಯನ್ನೇ ಹಿಡಿಯಿತು. ಹೊರಜಗತ್ತಿನ ತೊಂದರೆಗಳಿಂದ ಸಂರಕ್ಷಣೆ ಪಡೆಯಲು ಈ ಪ್ರಾಣಿಗಳು ಭೂಗರ್ಭದಲ್ಲಿ ಜೀವಿಸಲು ನಿಶ್ಚಯಿಸಿದ್ದರಿಂದ, ಅವು ಉದ್ದ ಹುಳದ ಆಕೃತಿ ತಳೆದು ಒಂದು ರೂಪ ಪಡೆದವು. ಭೂಮಿಯನ್ನು ಅಗೆದು ಮಾಡಿದ ಕೊಳವೆಗಳನ್ನು ತಮ್ಮ ಗೂಡುಗಳನ್ನಾಗಿ ಬಳಸಿದ್ದರಿಂದ ಅದಕ್ಕೆ ಬೇಕಾಗುವ ಕಣ್ಣು, ಸ್ಪರ್ಶೇಂದ್ರಿಯಗಳು ಬೆಳೆದುಬಂದವು. ಆಹಾರವನ್ನು ಒಂದು ತುದಿಯಿಂದ ಸ್ವೀಕರಿಸಿ ಇನ್ನೊಂದು ತುದಿಯಿಂದ ಮಲವನ್ನು ವಿಸರ್ಜಿಸಲು, ತಲೆಯುಳ್ಳ ಶಿರೋಭಾಗ, ಗುದದ್ವಾರ ಇರುವ ಬಾಲದಿಂದ ಬೇರೆಯಾಯಿತು. ಹ್ಯಾಡ್ರಾ ತನ್ನ ಶರೀರದಲ್ಲಿ ಬೆಳೆದ ಒಂದು ಅಂಗವನ್ನೇ ಮೈಕೈಯಾಗಿ ಬಳಸಿ ಅದರಿಂದ ಮರಿಗೆ ಜನ್ಮ ಕೊಟ್ಟರೆ, ಕ್ರಮೇಣ ಈ ಹುಳಗಳಲ್ಲಿ ಗಂಡು-ಹೆಣ್ಣು ಜನನೇಂದ್ರಿಯಗಳು ಬೇರೆ ಬೇರೆ ರೂಪ ತಳೆದವು. ಒಂದೇ ಜೀವಿಯಲ್ಲಿ ಈ ಎರಡೂ ಅಂಗಗಳಿದ್ದರೂ, ಇನ್ನೊಂದರೊಡನೆ ಸಂಯೋಗವಾಗದೇ ಸಂತಾನೋತ್ಪತ್ತಿ ಆಗಲಾರದು. ಮಳೆಗಾಲದಲ್ಲಿ ಕಾಣಬರುವ ಎರೆಹುಳ ಇದಕ್ಕೆ

ಒಳ್ಳೆ ಉದಾಹರಣೆ.

ವೈರಿಗಳಿಲ್ಲದ ಬಿಲಗಳಲ್ಲಿ ನೆಮ್ಮದಿಯ ಬಾಳಿನಿಂದ ತೃಪ್ತಿ ಪಡೆದ ಪ್ರಾಣಿಗಳು ಮುಂದಿನ ವಿಕಾಸದ ಹಂತದಲ್ಲಿ ಸುಲಭವಾಗಿ ಆಹಾರ ದೊರಕಿಸುವ ಏರ್ಪಾಡು ಮಾಡಿಕೊಂಡವು. ಆದ್ದರಿಂದ ಈ ಗುಂಪಿನವು ಪರಪುಷ್ಟ ಪ್ರಾಣಿಗಳಾಗಿ ಜೀವಿಸಲಾರಂಭಿಸಿದವು. ಆಹಾರ, ಸಂರಕ್ಷಣೆ, ಚಲನೆ ಮುಂತಾದವುಗಳಿಗಾಗಿ ಪರಾವಲಂಬಿಗಳಾಗಿದ್ದರಿಂದ, ಇವಕ್ಕಾಗಿ ಬಳಸುವ ಅಂಗಾಂಗಗಳು ಕುಂಠಿತವಾದವು. ತದ್ವಿರುದ್ಧವಾಗಿ ಜನನೇಂದ್ರಿಯಗಳು ಬೆಳೆದವು. ಉದಾಹರಣೆಗೆ ಹೊಟ್ಟೆಯೊಳಗಿನ ಜಂತು. ಬಿದ್ದಲ್ಲಿಯೇ ಬಿದ್ದು ತಿಂದು ತೇಗುವದು ಸರಿಬರಲಿಲ್ಲವೋ ಏನೋ ಅಥವಾ ಅನ್ನದಾತ ಪ್ರಾಣಿಗಳು ಸತ್ತರೆ ತಮ್ಮ ಅಳಿಗಾಲ ಕಟ್ಟಿಟ್ಟದ್ದೇ ಎಂದು ಅಳುಕಿ ತಿರುಗಿ ಪ್ರಾಣಿಗಳು ಸ್ವತಂತ್ರಜೀವನ ನಡೆಸಲು ಯತ್ನಿಸಿದವು. ಇಂಥ ಕೆಲ ಪ್ರಾಣಿಗಳು ಉಷ್ಣತೆಯಿಂದ ಸಂರಕ್ಷಿಸಿಕೊಳ್ಳುವದಕ್ಕಾಗಿ ಮೈತುಂಬ ಜಿಗಟು ಪದಾರ್ಥ ಧರಿಸಿದವು. ಅಲ್ಲದೇ ವೈರಿಗಳಿಂದ ಸಂರಕ್ಷಿಸಿಕೊಳ್ಳಲು ಸಿಂಪುಗಳನ್ನು ಬಳಸಿದವು. ಗಟ್ಟಿಸಿಂಪಿನೊಳಗಿರುವ ಅದರ ದೇಹ ಮಾತ್ರ ತೀರ ಮೃದು. ಶಂಖದ ಹುಳ ಒಳ್ಳೆಯ ಉದಾಹರಣೆ.

ಮೈಯೆಲ್ಲ ಸಿಂಬಳ ಹೊತ್ತು ತಿರುಗುವದು ಒಗ್ಗಲಿಲ್ಲವೆಂದು ತೋರುತ್ತದೆ. ಅಂತೆಯೇ ನಂತರದ ಘಟ್ಟದಲ್ಲಿ ಅವು ಷಟ್‌ಪಾದಿ ಕೀಟಗಳಾಗಿ ರೂಪ ತಳೆದವು. ಸ್ಪರ್ಶಕ್ಕಾಗಿ ಜೋಡಿ ಮೀಸೆ, ದೂರದ ವೈರಿಗಳನ್ನು ನೋಡಲು ಸಂಯುಕ್ತ ಕಣ್ಣುಗಳು, ಆಹಾರವನ್ನು ಜಗಿದು ತಿನ್ನಲು ಹರಿತವಾದ ಹಲ್ಲುಗಳು, ವೇಗವಾಗಿ ಓಡಲು ಆರು ಕಾಲುಗಳು, ಹಾರಲು ಎರಡು ಜೋಡಿ ರೆಕ್ಕೆಗಳು ಕಾಣಿಸಿಕೊಂಡವು. ಗಂಡು-ಹೆಣ್ಣು ಸ್ಪಷ್ಟ ಬೇರೆ ಬೇರೆ ರೂಪ ತಾಳಿದವು. ಹೆಣ್ಣನ್ನು ಆಕರ್ಷಿಸಲು ಬಣ್ಣ, ವಾಸನೆ, ಸಿಳ್ಳು, ಹಾಡು ಮುಂತಾದವನ್ನು ಬಳಸುತ್ತವೆ, ಗಂಡುಗಳು,ಸಂಘಜೀವನಕ್ಕೆ ಕೀಟಗಳಷ್ಟು ಹೆಸರುವಾಸಿ ಪ್ರಾಣಿವರ್ಗ ಇನ್ನೊಂದು ಇಲ್ಲ. ಅವು ತಮ್ಮ ವಂಶಕ್ಕಾಗಿ ಎಂಥ ವೈಯಕ್ತಿಕ ತ್ಯಾಗಮಾಡಲೂ ಸಿದ್ಧ. ಜಿರಳೆ, ಮಿಡತೆ, ಇರುವೆಗಳು ಈ ವರ್ಗಕ್ಕೆ ಸೇರಿದವು. ಹೆಚ್ಚುಕಡಿಮೆ ಇದೇ ವರ್ಗಕ್ಕೆ ಸೇರಿದ ಜೇಡ, ಚೇಳುಗಳಿಗೆ ನಾಲ್ಕು ಜತೆ ಕಾಲುಗಳಿದ್ದು ರೆಕ್ಕೆಗಳು ಇರುವದಿಲ್ಲ. ಈ ವಿಕಾಸದ ದಾರಿಯನ್ನೇ ತುಳಿಯುತ್ತ ಮುಂದೆ ಹೋದವುಗಳು ಕಡಲವಾಸಿ ನಕ್ಷತ್ರ-ಮೀನುಗಳು. ಮೈ ಎಲ್ಲ ಮುಳ್ಳು, ದಪ್ಪ ಕವಚಗಳಿಂದ

ಕೂಡಿದ್ದರಿಂದ ಹೆಚ್ಚಿನ ಓಡಾಟ ಇವುಗಳಿಂದ ಸಾಧ್ಯವಾಗಲಿಲ್ಲ; ಅಂತೆಯೇ ಇದ್ದಲ್ಲಿ ಇದ್ದು ಹೆಚ್ಚಿನ ಪ್ರಗತಿ ಮಾಡಲಾಗಲಿಲ್ಲ. ಆದರೆ ಮುಂದಿನ ಹಂತದ ಬೆನ್ನೆಲವು ಗಳುಳ್ಳ ಪ್ರಾಣಿ ಜನ್ಮ ತಾಳಲು ಇವು ಸಹಕಾರಿಯಾದವು. ಈ ಹಿಂದೆ ವಿವರಿಸಿದ ಕೆಲ ಪ್ರಾಣಿಗಳಿಗೆ ಹೊರ ಕವಚವಿದ್ದರೂ ಒಳಮೈ ಮೃದುವಾದಿತ್ತು. ಈ ಹೊರ ಕವಚ ನಿರ್ಜೀವ ವಸ್ತುವಿನಿಂದ ನಿರ್ಮಿತವಾದ್ದರಿಂದ ಚಲನವಲನಗಳಿಗೆ ಹೆಚ್ಚಿನ ತೊಡಕು ತಂದು ಒಡ್ಡುತ್ತಿದ್ದವು. ಅಂತೆಯೇ ಮುಂದಿನ ವಿಕಾಸದಲ್ಲಿ ಪ್ರಾಣಿಗಳು ತಮ್ಮೊಡನೆಯೇ ಬೆಳೆಯುವ ಅಂತರ್‌ಕವಚ ತಳೆದವು. ಅಂತೆಯೇ ಇವುಗಳಿಗೆ ಬೆನ್ನು-ಹುರಿಯ ಪ್ರಾಣಿಗಳೆಂಬ ಅನ್ವರ್ಥಕ ನಾಮವೂ ಇದೆ. ಮೊದಲಲ್ಲಿ ಬೆನ್ನು ಹುರಿ ಕೋಲಿನಂತೆ ಇದ್ದು, ಚಲನವಲನಗಳಿಗೆ ಆತಂಕವಾಗುತ್ತಿದ್ದುದರಿಂದ ಮೀನುಗಳಲ್ಲಿ ಅವು ಎಲವು-ಜೋಡಣೆಯಿಂದ ತಯಾರಾದವು. ಇವುಗಳಿಗೆ ಹೊಂದಿಸಿದ ಎರಡು ಜೋಡಿ "ಹುಟ್ಟು"ಗಳಿಂದ ನೀರಿನಲ್ಲಿ ಲೀಲಾಜಾಲವಾಗಿ ಓಡಾಡುವಂತಾಯಿತು. ನೀರಿನಲ್ಲಿ ಪ್ರಾಣವಾಯುವಿನ ಪ್ರಮಾಣ ಕಡಿಮೆ ಇರುವದರಿಂದಲೋ ಅಥವಾ ಕ್ರಿಯಾತ್ಮಕ ಜೀವನ ನಡೆಸಲೆಂದೋ ಪ್ರಾಣಿಗಳು ಭೂಮಿಯ ಮೇಲೆ ಜೀವಿಸುವ ಯತ್ನ ಮಾಡಲಾರಂಭಿಸಿದವು. ಆದರೆ ಜಲರಹಿತ ಜೀವನವನ್ನೂ ನಡೆಸಲು ಸಾಧ್ಯವಾಗದೇ ಕಪ್ಪೆಯಂತಹ ಭೂ-ಜಲ-ಪ್ರಾಣಿಗಳು ಆದವು. ತಮ್ಮ ಹೆಚ್ಚಿನ ಜೀವನವನ್ನು ನೆಲದ ಮೇಲೆ ಕಳೆದರೂ ಸಂತಾನೋತ್ಪತ್ತಿಗಾಗಿ ಮಾತ್ರ ತಿರುಗಿ ಜಲದ ಆಶ್ರಯವನ್ನೇ ಪಡೆಯಬೇಕಾಯಿತು.

ಪ್ರಥಮ ಬಾರಿ ನೀರನ್ನು ಸಂಪೂರ್ಣವಾಗಿ ತ್ಯಜಿಸಿ ಬೆನ್ನೆಲುವಿನ ಭೂ-ಪ್ರಾಣಿಯಾಗಿ ಜೀವನ ನಡೆಸಿದ ಶ್ರೇಯಸ್ಸು ಉಡ, ಓತಿಕಾಟದ ಗುಂಪಿಗೆ ಹೋಗುತ್ತದೆ. ಅವು ಮೀನಿನಂತೆ ಈಸಾಡದೇ, ಕಪ್ಪೆಯಂತೆ ಜಿಗಿಯದೇ ಶಕ್ತಿಯುತವಾದ ಚತುಷ್ಪಾದಗಳಿಂದ ತಮ್ಮ ದೇಹವನ್ನು ಭೂಮಿಯಿಂದ ಮೇಲಕ್ಕೆತ್ತಿ ವೇಗವಾಗಿ ಓಡಲು ಕಲಿತವು. ಆದರೆ ಅವುಗಳ ಶರೀರದ ಉಷ್ಣತಾಮಾನ ಪರಿಸರದಂತೆ ಹೆಚ್ಚುಕಡಿಮೆಯಾದ್ದರಿಂದ ಅವುಗಳಿಗೆ ಯಶಸ್ವೀ ಜೀವನ ನಡೆಸುವದು ದುಸ್ತರವಾಯಿತು. ಅಂತೆಯೇ ಅವು ಬಿಸಿರಕ್ತದ ಹಕ್ಕಿಗಳಾಗಿ ಗಗನವನ್ನೆಲ್ಲ ಆಕ್ರಮಿಸಿಬಿಟ್ಟವು. ಈ ಹಕ್ಕಿಗಳ ಜೀವನವೆಲ್ಲ ಸಂರಕ್ಷಣೆ, ಆಹಾರ-ಶೋಧನೆಗಳ ಹಾರಾಟದಲ್ಲಿ ಕಳೆದುಹೋದದ್ದರಿಂದ, ಬಿಸಿರಕ್ತದ ಗುಂಪು ನೆಲದ ಮೇಲೆ ವಾಸಿಸಲು ಪ್ರಾರಂಭವಾಡಿ ಸಸ್ತನಿಗಳಾದವು. ಈ ಗುಂಪು ಕ್ರಮೇಣ ಬುದ್ಧಿ-

ಚಾತುರ್ಯಗಳಿಗೇ ಹೆಸರುವಾಸಿಯಾಗಿ ಸಂಘಜೀವನ ನಡೆಸಿ, ಪ್ರಾಣಿ-ಜಗತ್ತಿನಲ್ಲಿಯೇ ಯಶಸ್ವೀ ವರ್ಗವೆಂದು ಹೆಸರುವಾಸಿಯಾಗಿದೆ. ಮಾನವರೂ ಇದೇ ಗುಂಪಿಗೆ ಸೇರಿದವನು ಎಂದು ಬೇರೆ ಹೇಳಬೇಕಾಗಿಲ್ಲ.

ಸಸ್ತನಿಗಳು ಮೊಟ್ಟೆ ಇಡುವ ಬದಲಾಗಿ ಮರಿ-ಮಗುವಿಗೆ ಜನ್ಮ ಕೊಟ್ಟು ತಮ್ಮ ಹಾಲಿನ ಮೇಲೆ ಲಾಲನೆ-ಪಾಲನೆ ಮಾಡಿ ಬೆಳೆಸುವವು. ಕಾಂಗರೂ ಅರೆ ಬೆಳವಣಿಗೆಯಾದ ಮರಿಗೆ ಜನ್ಮಕೊಡುವದರಿಂದ ಮುಂದೆ ತನ್ನ ಚರ್ಮ-ಚೀಲದಲ್ಲಿಯೇ ಸೇರಿಸಿ ಅದರ ಪೋಷಣೆ ಮಾಡುವದು. ಕಣ್-ಕಪ್ಪಡಿ ಹಕ್ಕಿಯಂತೆ ಹಾರಾಡಿದರೂ ಅದಕ್ಕೆ ರೆಕ್ಕೆ ಇಲ್ಲ. ಬೊಟ್ಟುಗಳ ನಡುವೆ ಇದ್ದ ಪರೆಯಿಂದ ಅದು ಹಾರಾಡುತ್ತದೆ, ಅವೂ ಮೊಲೆಯುಣಿಸುವ ಪ್ರಾಣಿವರ್ಗಕ್ಕೆ ಸೇರಿವೆ. ಇಲಿ, ಇಣಚಿ, ಮೊಲ, ಬೆಕ್ಕು, ಹುಲಿ, ಕರಡಿ, ಆನೆ ಇವುಗಳೆಲ್ಲ ವಿಕಾಸದಲ್ಲಿ ಮಾನವನ ಹತ್ತಿರದ ಸಂಬಂಧಿಗಳು, ಗೋರಿಲ್ಲಾ-ಚಿಂಪಾಂಝಿಗಳಂತೂ ರಕ್ತಸಂಬಂಧಿಗಳಿದ್ದಂತೆ. ಅಷ್ಟೇ ಏಕೆ? ಕಡಲಿನಲ್ಲಿ ಜೀವಿಸುವ ತಿಮಿಂಗಿಲು, ನೀರನಾಯಿ ಡಾಲಫಿನಗಳೂ ನಮ್ಮ ಹತ್ತಿರದ ಜೀವಿಗಳೇ!

ವೈಜ್ಞಾನಿಕವಾಗಿ ಪ್ರತಿಯೊಂದು ಪ್ರಾಣಿಯನ್ನು ಕೂಲಂಕಷವಾಗಿ ಅಭ್ಯಸಿಸಿದಾಗ, ತೀರ ಹತ್ತಿರದವು ಅನಿಸುವ ಮೀನು-ತಿಮಿಂಗಿಲುಗಳಲ್ಲಿ ಬಹು ದೂರದ ನಂಟು ಎಂದು ತಿಳಿದುಬರುವದು. ಅದೇ ಮಾನವ-ಹುಲಿಗಳಲ್ಲಿ ಹತ್ತಿರದ ನಂಟು ಉಂಟೆಂದು ತಿಳಿದುಬರುವದು. ಮಾನವನು ಈ ಪ್ರಾಣಿವರ್ಗದ ಹಾದಿಯನ್ನೇ ತುಳಿದು ಬಂದದ್ದು ವಿಜ್ಞಾನಿಗಳ ಕಲ್ಪನೆಯಲ್ಲ. ಅದಕ್ಕೆ ಹಲವಾರು ಆಧಾರಗಳೂ ಇವೆ.

ತಾಯಿಯ ಉದರದಲ್ಲಿ ನಮ್ಮ ಬೆಳವಣಿಗೆಯಾಗುವಾಗ ಮಾನವವರ್ಗ ಹಾದುಬಂದ ವಿಕಾಸದ ಎಲ್ಲ ಸ್ತರಗಳೂ ಎದ್ದು ಕಾಣುತ್ತವೆ. ಗರ್ಭಧಾರಣವಾದ ಮೇಲೆ ಮಾನವನ ಮೊಟ್ಟೆ ಅತೀ ಸೂಕ್ಷ್ಮವಾಗಿದ್ದು ಏಕ-ಜೀವ-ಅಣುವಿನಿಂದ ಉಂಟಾದಿರುವದರಿಂದ ಅದನ್ನು ಅಮೀಬಾಕ್ಕೆ ಹೋಲಿಸಬಹುದು. ಈ ಮೊಟ್ಟೆ ಬೆಳೆದು ಎರಡಾದಾಗ ಅದನ್ನು ಸ್ಪಂಜಕ್ಕೆ ಹೋಲಿಸಬಹುದು. ಮುಂದೆ ಅದು ಎರಡು ಜೀವಾಣುಗಳ ಥರದಿಂದಾದಾಗ ಹ್ಯಾಡ್ರಾವನ್ನು ಹೋಲಿದರೆ ಮೂರು ಜೀವಾಣು-ಥರದಿಂದಾದ ಎರೆಹುಳದ ಅವಸ್ಥೆ ಪಡೆಯುತ್ತದೆ. ಮರಿ, ತಾಯಿಯ ಉದರದಲ್ಲಿ ಇದ್ದು ಆಹಾರ, ಉಚ್ಛ್ವಾಸ, ಸಂರಕ್ಷಣೆಗಳನ್ನು ಅವಳಿಂದಲೆ

ಪಡೆಯುತ್ತಿದ್ದುದರಿಂದ ಈ ಅವಸ್ಥೆಯಲ್ಲಿ ಅದನ್ನು ಪರಪುಷ್ಟ ಜಂತುವಿಗೆ ಹೋಲಿಸಬಹುದು. ಉತ್ಕ್ರಾಂತಿಯ ಮುಂದಿನ ಅವಸ್ಥೆಗಳು ಅಷ್ಟು ಸ್ಪಷ್ಟವಾಗಿ ಕಂಡುಬಾರದಿದ್ದರೂ, ಮೀನಿನಂತೆ ಪ್ರಾಮುಖ್ಯತೆ ಪಡೆದ ಬಾಲ ಕಂಡುಬರುತ್ತದೆ. ಮೀನಿನಂತೆ ಹೃದಯ ಎರಡು ವಿಭಾಗಗಳಿಂದ ಮಾಡಿದ್ದಾಗಿದ್ದು ಮುಂದೆ ಕಪ್ಪೆಯಂತೆ ಮೂರು ವಿಭಾಗಗಳಲ್ಲಿ ಬೇರ್ಪಡುತ್ತದೆ. ನಂತರ ಓತಿಕಾಟದಂತೆ ಅದು ನಾಲ್ಕು ವಿಭಾಗಗಳಲ್ಲಿ ಹಕ್ಕಿಯಂತೆ ಬಿಸಿರಕ್ತದಿಂದ ತುಂಬುತ್ತದೆ. ಹೀಗೆ ಅಂಗಾಂಗಗಳ ಬೆಳವಣಿಗೆಯ ಇತಿಹಾಸ ಉಳಿದ ಪ್ರಾಣಿವರ್ಗದ ವೈಯಕ್ತಿಕ ಬೆಳವಣಿಗೆಯಲ್ಲೂ ಕಂಡುಬರುತ್ತದೆ. ನೀರಿನಲ್ಲಿ ಇಟ್ಟ ಕಪ್ಪೆಯ ಮೊಟ್ಟೆ ಅಮೀಬದ ಸ್ತರವಾದರೆ, ನೀರಿನಲ್ಲಿ ಕಲ್ಲಿಗಳಿಂದ ಉಸಿರಾಡಿ, ಬಾಲದಿಂದ ಚಲನ-ವಲನ ನಿಯಂತ್ರಿಸುವ ಮರಿಯನ್ನು ನೋಡಿದರೆ ಅದೊಂದು ಮೀನು ಅಲ್ಲ ಎನ್ನುವ ಧೈರ್ಯ ಯಾರಿಗೂ ಬಾರದು. ಅದೇ ಮರಿಗೆ ಮುಂದೆ ಕೈ-ಕಾಲು ಬಂದು ಬಾಲ ಮಾಯವಾಗಿ ಕಪ್ಪೆರಾಜ ನೆಲದಮೇಲೆ ಜಿಗಿಯುತ್ತ ಬಂದಾಗ ಆ ಮೀನುಮರಿಯಿಂದ ಇದು ವರ್ಧಿತ ರೂಪ ಎಂದು ಸಂಶಯ ಬಾರದಷ್ಟು ಭಿನ್ನವಾಗಿರುತ್ತದೆ.

ವಿಕಾಸದ ವಿವಿಧ ಸ್ತರಗಳಲ್ಲಿ ಹತ್ತಿರದ ಸಂಬಂಧಿಗಳ ರಕ್ತ-ಮಾಂಸ, ಶಾರೀರಿಕ ರಸಾಯನಗಳಲ್ಲಿ ಸಾಮ್ಯವಿರುತ್ತದೆ. ಆದ್ದರಿಂದ ನಮ್ಮ ಹತ್ತಿರದ ಸಂಬಂಧಿಯಾದ ಚಿಂಪಾಂಝಿಯ ರಕ್ತ ಮಾನವನದಕ್ಕೆ ತುಂಬ ಹೋಲುತ್ತದೆ. ಇದರಂತೆ ವಿವಿಧ ಪ್ರಾಣಿವರ್ಗಗಳ ತುಲನಾತ್ಮಕ ಅಭ್ಯಾಸದಿಂದ ಅವುಗಳಲ್ಲಿ ಇರುವ ಸೌಮ್ಯ-ಸಂಬಂಧ ಗೋಚರಿಸದೇ ಇರದು. ಮೀನಿಗೆ ಎರಡು ಜೋಡಿ ಈಸುವ ಅವಯವಗಳಿದ್ದಂತೆ ಕಪ್ಪೆಗೆ ಎರಡು ಜೋಡಿ ಜಿಗಿಯುವ ಅವಯವಗಳಿರುತ್ತವೆ. ಉಡ-ವರ್ಗದ ಹಾವಿನಲ್ಲಿ ಇಂತಹ ಅವಯವಗಳು ಕಂಡುಬಾರದಿದ್ದರೂ ಅವುಗಳ ಶೈಶವಾವಸ್ಥೆಯಲ್ಲಿ ಇಂತಹ ಅವಯವಗಳು ಇರುತ್ತವೆ. ಅಲ್ಲದೇ ಪ್ರೌಢಾವಸ್ಥೆಗೆ ಬಂದ ನಂತರವೂ ಹೆಬ್ಬಾವಿನಲ್ಲಿ ಕಾಲು-ಕೈಗಳಿಗೆ ಸಹಾಯ ಮಾಡುವ ಎಲುವುಗಳು ಶರೀರದಲ್ಲಿ ಅಂತರ್ಗತವಾಗಿರುವದನ್ನು ಪತ್ತೆಹಚ್ಚಿದ್ದಾರೆ. ಹಕ್ಕಿಗಳಿಗೆ ಒಂದೇ ಜೋಡಿ ಕಾಲುಗಳಿದ್ದರೂ ರೆಕ್ಕೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ವಿಜ್ಞಾನಿಗಳು, ಅವುಗಳಿಗೆ ನಿಜವಾಗಿ ಕೈಗಳ ರಚನೆಯೇ ಇದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸಸ್ತನವರ್ಗದ ತಿಮಿಂಗಿಲಕ್ಕೆ ಪ್ರೌಢಾವಸ್ಥೆಯಲ್ಲಿ ಕೂದಲುಗಳು ಇಲ್ಲದಿದ್ದರೂ ತಾಯಿಯ ಉದರದಲ್ಲಿ ಬೆಳೆಯುವಾಗ ಅವು ಖಂಡಿತವಾಗಿ ಇರುತ್ತವೆ.

ವಿಕಾಸದ ತಳಹದಿಯ ಮೇಲೆ ಪ್ರಾಣಿಜಗತ್ತನ್ನು ವಿವಿಧ ಜಾತಿ, ಉಪ ಜಾತಿ, ಗುಂಪುಗಳ ಪ್ರಭೇದಗಳಲ್ಲಿ ವರ್ಗೀಕರಿಸಿದ್ದಾರೆ. ಕೆಲವೊಂದು ಗುಂಪುಗಳು ಒಂದರಿಂದ ಇನ್ನೊಂದು ಅಸ್ತಿತ್ವದಲ್ಲಿ ಹೇಗೆ ಬಂದವು ಎಂಬುದನ್ನು ಸುಲಭವಾಗಿ ವಿವರಿಸಲು ಬರುವಂತಿದ್ದರೆ, ಕೆಲವು ಗುಂಪುಗಳಲ್ಲಿಯ ಅನೇಕ ಪ್ರಾಣಿಗಳು ಇಂದು ನಿರ್ನಾಮವಾಗಿ ಹೋಗಿದ್ದರಿಂದ ಅವುಗಳ ವಿಕಾಸದ ಹಂತಗಳನ್ನು ಖಂಡಿತವಾಗಿ ಗುರುತಿಸಲು ಬರುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ವಾದ-ವಿವಾದಗಳೆದ್ದು ವಿವಿಧ ವಿಜ್ಞಾನಿಗಳು ತಮ್ಮ ತಮ್ಮ ವಿಚಾರ-ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಯಾವುದು ಸತ್ಯವಿದ್ದಿರಬಹುದೆಂದು ನಿರ್ಣಯಿಸಲು ಆಧಾರಗಳನ್ನು ನಿರಂತರವಾಗಿ ಹುಡುಕುತ್ತಲೇ ಇದ್ದಾರೆ.

ಎರಡು : ಜೀವೋತ್ಪತ್ತಿ

ಕಣಜ ನಿಸರ್ಗದಿಂದ ಹಿಡಿದು ತಂದ ಹುಳ-ಹುಪ್ಪಡಿಗಳನ್ನು ತನ್ನ ಮಧುರ ಗಾನದಿಂದ ಕಣಜವನ್ನಾಗಿ ಮಾರ್ಪಡಿಸುತ್ತದೆ ಎಂದು ಹಿಂದಿನವರು ಹಾಡಿದರು. ನಿಜ ಸಂಗತಿ ಎಂದರೆ, ಈ ನೊಣ ನುಣುಪಾದ ಮಣ್ಣು ಕಣಗಳನ್ನು ತನ್ನ ದವಡೆಗಳಲ್ಲಿ ಕಚ್ಚಿ ತಂದು ಗೋಡೆ-ಮಾಡುಗಳಿಗೆ ಮಣ್ಣುಮನೆ ಕಟ್ಟುತ್ತದೆ. ಅದರಲ್ಲಿ ತನ್ನ ತತ್ತಿಗಳನ್ನು ಇಟ್ಟು ಅವುಗಳಿಂದ ಹೊರಬರುವ ಮರಿಗಳು ಹಸಿದಿರುವದರಿಂದ ಅವುಗಳ ಆಹಾರಕ್ಕಾಗಿ ತಂದ ಹುಳಗಳನ್ನು ತನ್ನ ಶರೀರದ ರಸಾಯನದಿಂದ ಮೂರ್ಛೆಹೊಂದಿಸಿ ಗೂಡಿನೊಳಗಿಟ್ಟು ಅದರ ದ್ವಾರವನ್ನು ಭದ್ರವಾಗಿ ಮುಚ್ಚಿಬಿಡುತ್ತದೆ. ಮರಿಗಳು ಆ ಆಹಾರವನ್ನು ಭಕ್ಷಿಸಿ ಬೆಳೆದು ನೊಣವಾಗಿಯೇ ಗೂಡಿನಿಂದ ಹೊರಗೆ ಬರುವದರಿಂದ ಹುಳಗಳೇ ಕಣಜಗಳಾದವು ಎಂಬ ನಂಬಿಕೆಗೆ ಅವಕಾಶವಾಯಿತು. ಪಾಶ್ಚಾತ್ಯರೂ ಇಂತಹ ನಂಬಿಕೆಗಳನ್ನು ಬಿಟ್ಟಿಲ್ಲ. ಇಬ್ಬನಿಯಿಂದ ಕೀಟಗಳು ಜನ್ಮತಾಳುವವು; ಮಡುವಿನ ತಳದ ಮೇಲೆ ಸೂರ್ಯಪ್ರಕಾಶ ಬಿದ್ದಾಗ ಕಪ್ಪೆಗಳು ಹುಟ್ಟುವವು; ನೊಣಗಳು ಮಾಂಸದಿಂದ ರೂಪಗೊಳ್ಳುವವು. ಪ್ರಾ-

ಇತ್ಯಾದಿಯಾಗಿ ಅವರೂ ನಂಬಿದ್ದರು. ಆದರೆ ಇಂದು ಜೀವಿಗಳು ಆಕಾಶದಿಂದ ಬೀಳದೆ ಜೀವಿಗಳಿಂದಲೇ ಜೀವನ ಉತ್ಪನ್ನ ಮಾಡಲು ಸಾಧ್ಯವೆಂದು ಜೀವಶಾಸ್ತ್ರಗಳು ಸಿದ್ಧಪಡಿಸಿಕೊಟ್ಟಿವೆ.

ಪ್ರಾಣಿವಿಕಾಸದ ವಿವಿಧ ಹಂತಗಳಲ್ಲಿ ಒಂದರಿಂದ ಇನ್ನೊಂದು ಉತ್ಪನ್ನವಾಯಿತು ಎಂದು ಒಪ್ಪಿಕೊಂಡರೂ ಪ್ರಪ್ರಥಮ ಜೀವಿ ಹೇಗೆ ಉತ್ಪನ್ನವಾಯಿತು ಎಂಬ ಪ್ರಶ್ನೆಗೆ ಇನ್ನೂ ಸಮರ್ಪಕ ಉತ್ತರ ಸಿಕ್ಕಿಲ್ಲ. ಈ ರಹಸ್ಯವನ್ನು ಕಂಡು ಹಿಡಿಯಲು ಅನೇಕ ಜೀವವಿಜ್ಞಾನಿಗಳು ಅವಿಶ್ರಾಂತವಾಗಿ ಸಂಶೋಧನೆ ನಡೆಸಿದ್ದಾರೆ. ಅವರು ಏನು ಸಾಧಿಸಲು ಹೊರಟಿದ್ದಾರೆ ಎಂದು ತಿಳಿಯಲು ಜೀವಿಗಳ ದೇಹರಚನೆ ತಿಳಿದಿರುವದು ಅತ್ಯವಶ್ಯ. ಮಾನವನ ಶರೀರವನ್ನು ಭವ್ಯ ಕಟ್ಟಡಕ್ಕೆ ಹೋಲಿಸಬಹುದು. ಕಟ್ಟಡದಂತೆ ಅದು ಒಂದು ಘಟಕ ಎಂದು ತೋರಿದರೂ ಕಿರಿದಾದ ಇಟ್ಟಂಗಿಗಳ ಸಮೂಹದಿಂದ ಅದು ನಿರ್ಮಿತವಾದಂತೆ, ದೇಹ ಅಸಂಖ್ಯ ಜೀವಾಣುಗಳಿಂದ ನಿರ್ಮಿತವಾಗಿದೆ. ಜೀವಿಗಳ ಗುಟ್ಟು ಈ ಜೀವಾಣುಗಳಲ್ಲಿಯೇ ಹುದುಗಿಕೊಂಡಿದೆ. ದೇಹದಲ್ಲಿ ಇರುವ ಈ ಜೀವಾಣುಗಳ ಅಳತೆ, ರೂಪ, ಕಾರ್ಯ ಮೊದಲಾದವುಗಳು ಬಹುರೂಪಿಯಾದವುಗಳು. ನಮ್ಮ ಮಿದುಳು ಒಂದರಲ್ಲಿಯೇ ೯,೨೦೦,೦೦೦,೦೦೦ ಜೀವಾಣುಗಳು ಇವೆಯೆಂದರೆ ಅವುಗಳ ಸಂಖ್ಯೆಯು ಕಲ್ಪನೆ ಬರುವಂತಿದೆ.

ಪ್ರಾಣಿ ಮತ್ತು ಸಸ್ಯ-ಜೀವಾಣುವಿನಲ್ಲಿ ಮುಖ್ಯವಾದ ಭೇದವೆಂದರೆ ಮೊದಲಿನವರಲ್ಲಿ ಅದು ತೆಳುವಾದ ಪರೆಯಿಂದ ಆವರಣ ಹೊಂದಿದರೆ ಎರಡನೆಯದರಲ್ಲಿ ದಪ್ಪವಾದ ಸಂರಕ್ಷಣಾ-ಕವಚವಿರುತ್ತದೆ. ಪ್ರತಿಯೊಂದು ಜೀವಾಣು ೮೦-೯೦% ವರೆಗೆ ನೀರಿನಿಂದ ಕೂಡಿದ ದ್ರವದಿಂದ ತಯಾರಾಗಿರುತ್ತದೆ. ಈ ದ್ರವವನ್ನು ಮಧ್ಯದಲ್ಲಿ ಇರುವ ಜೀವ-ಕಣ ಮತ್ತು ಅದರ ಸುತ್ತಲು ಇರುವ ದ್ರವವೆಂದು ವಿಭಾಗಿಸಬಹುದು. ಈ ಜೀವ-ಕಣವೇ ವ್ಯಕ್ತಿಯ ಎತ್ತರ, ರೂಪ, ಬುದ್ಧಿಶಕ್ತಿ, ವಂಶಪರಂಪರೆಯಿಂದ ಬರುವ ಸ್ವಭಾವ, ಸಂತತಿನಿರ್ಮಾಣ ಎಲ್ಲವನ್ನೂ ನಿಯಂತ್ರಿಸುತ್ತದೆ. ಜೀವ-ಕಣದಲ್ಲಿರುವ, ಸ್ಪ್ರಿಂಗಿನಂತೆ ಸುತ್ತಿಕೊಂಡಿರುವ ಕ್ರೊಮೊಸೋಮುಗಳು ಈ ಕಾರ್ಯಕ್ಕೆ ಬೇಕಾಗುವ ಸಾಮರ್ಥ್ಯ ಪಡೆದಿರುತ್ತವೆ. ಇವುಗಳ ಸಂಖ್ಯೆ ಒಂದೇ ಪ್ರಾಣಿ ಮತ್ತು ಒಂದೇ ತರದ ಪ್ರಾಣಿವರ್ಗದಲ್ಲಿ ನಿರ್ದಿಷ್ಟವಾಗಿದ್ದರೂ ಬೇರೆ ಬೇರೆ ಪ್ರಾಣಿಗಳಲ್ಲಿ ಅವುಗಳ ಸಂಖ್ಯೆ ಹೆಚ್ಚು ಕಡಿಮೆ ಇರುತ್ತದೆ.

ಮಾನವನಲ್ಲಿ ೨೪ ಜೋಡಿ ಇದ್ದರೆ, ನಮ್ಮ ಉದರದಲ್ಲಿರುವ ಜಂತುವಿನಲ್ಲಿ ಎರಡೇ ಜೋಡಿ ಇರುತ್ತವೆ. ಕೆಲ ಪ್ರಾಣಿಗಳಲ್ಲಿ ಅವು ೮೪ ಜೋಡಿಗಳಿದ್ದ ಉದಾಹರಣೆಯೂ ಇದೆ. ನಮ್ಮ ಶರೀರದ ಯಾವ ಅಂಗದ ಜೀವಾಣು ತೆಗೆದುಕೊಂಡರೂ ಅದರಲ್ಲಿ ೨೪ ಜೋಡಿ ಕ್ರೊಮೊಸೋಮುಗಳಿರುತ್ತವೆ. ಒಂದು ಜೀವಾಣುವಿನಿಂದ ಇನ್ನೊಂದು ಉತ್ಪತ್ತಿಯಾಗುವ ಕಾಲದಲ್ಲಿ ಕ್ರೊಮೊಸೋಮಿನ ಉದ್ದಳತೆ ಹೆಚ್ಚಾಗಿ ನಟ್ಟನಡುವೆ ಇಬ್ಭಾಗವಾಗಿ, ತಾಯಿ-ಜೀವಾಣುವಿನಲ್ಲಿ ೨೪ ಜೋಡಿ ಉಳಿದುಕೊಂಡು, ಅಷ್ಟೆ ಮರಿ-ಜೀವಾಣುವಿನಲ್ಲಿ ಹೋಗುತ್ತದೆ. ಜನನೇಂದ್ರಿಯ ಗಳಲ್ಲಿ ಮಾತ್ರ ಈ ಕಾರ್ಯದಲ್ಲಿ ಸ್ವಲ್ಪ ಬದಲಾವಣೆಯಾಗುತ್ತವೆ. ತಂದೆ-ತಾಯಿ ಗಳಿಂದ ಬರುವ ಜೀವಾಣುಗಳ ಸಂಖ್ಯೆ ಅರ್ಧಕ್ಕೆ ಇಳಿಯುತ್ತದೆ. ಆದ್ದರಿಂದ ಈ ಎರಡು ಜೀವಾಣುಗಳ ಸಂಯೋಗದಿಂದ ಉತ್ಪನ್ನವಾಗುವ ಮಗುವಿನಲ್ಲಿ ತಾಯಿ ಯಿಂದ ಬಂದ ೧೨, ತಂದೆಯಿಂದ ಬಂದ ೧೨ ಜೋಡಿ ಕ್ರೊಮೊಸೋಮುಗಳು ಸೇರಿ ೨೪ ಜೋಡಿಗಳಾಗುತ್ತವೆ.

ಪ್ರತಿಯೊಂದು ಕ್ರೊಮೊಸೋಮವು ೧/೧೦೦೦ ದಿಂದ ೧/೫೦ ಮಿಲಿ ಮೀಟರಿನಷ್ಟು ಉದ್ದವಿದ್ದು ತೆಳುವಾದ ದಾರದಿಂದ ರಚಿತವಾಗಿರುತ್ತದೆ. ಈ ದಾರ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಕೂಡಿದ್ದು ಅವುಗಳಿಗೆ ವಿವಿಧ ಬಣ್ಣ ಹೀರಿಕೊಳ್ಳುವ ಸಾಮರ್ಥ್ಯ ಇರುವದರಿಂದ ಅವುಗಳನ್ನು ಸೂಕ್ಷ್ಮದರ್ಶಕದಲ್ಲಿ ಅಭ್ಯಸಿಸಬಹು ದಾಗಿದೆ. ರಾಸಾಯನಿಕವಾಗಿ ಇವು ಜೀವ-ಕಣ-ಆಮ್ಲದಿಂದ ಕೂಡಿರುತ್ತವೆ. ಈ ಆಮ್ಲದಿಂದ ತಯಾರಾದ ಜೀನ ಎಂಬ ವಸ್ತು, ನಮ್ಮ ವಂಶಪರಂಪರಾಗತವಾಗಿ ಬಂದ ಗುಣಗಳನ್ನು ನಿಯಂತ್ರಿಸುತ್ತದೆ. ಅವುಗಳ ಇರುವಿಕೆ, ಅವು ತೋರಿಸುವ ಪ್ರತಿಕ್ರಿಯೆಯಿಂದ ತಿಳಿದರೂ ಮಾನವನ ಜೀನಗಳು ಎಂತಹ ಪ್ರಖರವಾದ ಸೂಕ್ಷ್ಮದರ್ಶಕದಲ್ಲೂ ಕಂಡುಬರುವದಿಲ್ಲ. ಅಂತೆಯೇ ಜೀವಶಾಸ್ತ್ರಜ್ಞರು ಅವುಗಳ ಕಾರ್ಯವಿಧಾನ ತಿಳಿಯಲು ಅಮೀಬಾದಂತಹ ಏಕ-ಜೀವಾಣು-ಪ್ರಾಣಿ-ಸಸ್ಯ ಗಳತ್ತ ತಮ್ಮ ಲಕ್ಷ್ಯ ಹೊರಳಿಸಿದ್ದಾರೆ. ನೆಗಡಿ-ಶೀತಗಳನ್ನು ತರುವ 'ವೈರಸ್' ಕೂಡ ಏಕ-ಜೀವಾಣು-ಜೀವಿಯಾದರೂ ಅದರ ಶರೀರ ಬರೇ ಜೀನುಗಳಿಂದ ರೂಪಿತ ವಾಗಿದ್ದರಿಂದ, ಮತ್ತು ಕೆಲವೇ ನಿಮಿಷಗಳಲ್ಲಿ ಅವು ಲಕ್ಷಾಂತರ ಸಂಖ್ಯೆಯಲ್ಲಿ ಬೆಳೆಯುವದರಿಂದ ಅವು ಅಭ್ಯಸಿಸಲು ಒಳ್ಳೆ ಜೀವಿಗಳಾಗಿವೆ.

ಇಂತಹವು ಹೆಚ್ಚಾಗಿ ಪರಪುಷ್ಟವಾಗಿರುವದರಿಂದ ಯೋಗ್ಯ ಆತಿಥೇಯ

ಸಿಗದಿದ್ದಾಗ ಜಡವಸ್ತುವಿನಂತೆ ಹವೆಯಲ್ಲಿ ತೇಲಾಡುತ್ತ ಇರುತ್ತವೆ. ಆದರೆ ಒಮ್ಮೆ ಆತಿಥೇಯು ಸಿಕ್ಕ ಕೂಡಲೇ ಕಾರ್ಯೋನ್ಮುಖಿಯಾಗಿ ಕೋಟ್ಯಂತರ ಸಂಖ್ಯೆಯಲ್ಲಿ ಸಂತತಿಯನ್ನು ನಿರ್ಮಿಸಿಬಿಡುತ್ತವೆ. ಅವುಗಳ ಶರೀರ ಯಾವ ಯಾವ ರಸಾಯನದಿಂದ ಉಂಟಾದಿವೆ ಎಂದು ವಿಜ್ಞಾನಿಗಳು ಪ್ರಯೋಗಾಲಯದಲ್ಲಿ ಕಂಡುಹಿಡಿದಿದ್ದಾರೆ. ಆದರೆ ಅಂತಹ ರಸಾಯನಗಳನ್ನು ಒಂದೆಡೆಗೆ ತಂದರೂ ಅವು ವೈರಸ್‌ನಂತೆ ಸಜೀವಿಯಾಗಲೂ ವರ್ತಿಸುತ್ತಿಲ್ಲವಾದ್ದರಿಂದ ಇನ್ನಷ್ಟು ಸಂಶೋಧನ ಮುಂದುವರಿಸಿದ್ದಾರೆ. ಈ ರಸಾಯನಗಳ ಸಮ್ಮಿಶ್ರಣವನ್ನು ಬೇರೊಂದು ಪ್ರಾಣಿಯ ಶರೀರದಲ್ಲಿ ವೈರಸ್ ಜೊತೆಗೆ ಸೇರಿಸಿದಾಗ ಮಾತ್ರ ಅದೆಲ್ಲ ಜೀವಕಳೆಯಿಂದ ತುಂಬಿ ತುಳುಕಿದ್ದರಿಂದ ಜೀವಿಯ ಗುಟ್ಟು ಕಂಡುಹಿಡಿದಿದ್ದೇನೆಂದು ವಿಜ್ಞಾನಿ ಹಿಗ್ಗಿ ಕುಣಿದಾಡಿದ. ಆದರೂ ಮಾನವನು ಅರಿತದ್ದು ಅತ್ಯಲ್ಪ.

ಮೊಟ್ಟಮೊದಲು ಜೀವಿ, ಭೂಮಿಯ ಮೇಲೆ ಅವತರಿಸಿ ಬಂದಾಗ ಇದ್ದ ವಾತಾವರಣ ನಿರ್ಮಿಸಿದರೆ, ಜೀವ ಉತ್ಪತ್ತಿಯಾಗುವದೇ ಎಂದು ಪರೀಕ್ಷಿಸಲು, ಜೀವಿಗಳಲ್ಲಿ ಅತ್ಯವಶ್ಯವಾದಿರುವ ಜಡವಸ್ತುವಿನಿಂದ ತಯಾರಾದ ಅಮಿನೊ ಆಮ್ಲಗಳನ್ನು ಹಿಂದೆ ಪೃಥ್ವಿಯ ಮೇಲೆ ಇದ್ದ ಉಷ್ಣತಾಮಾನ, ಒತ್ತಡ, ಆರ್ದ್ರತೆಗಳನ್ನು ಕೊಟ್ಟಾಗ, ಆ ಆಮ್ಲಗಳು ಜೀವಿಗಳಂತೆ ಬೆಳೆದು, ವಿಭಜನೆಯಾಗಿ ಸಂತಾನೋತ್ಪತ್ತಿಯಲ್ಲಿ ತೊಡಗಿದವು. ತನ್ನಂತೆ ತನ್ನ ಮಕ್ಕಳ ನಿರ್ಮಾಣ ಜೀವಿಗಳಿಗೆ ಮಾತ್ರ ಸಾಧ್ಯವಿದ್ದದರಿಂದ ಪ್ರಪ್ರಥಮ ಜೀವಿ ಜಡವಸ್ತುವಿನಿಂದ ಈ ರೀತಿಯಿಂದಲೇ ಉತ್ಪನ್ನವಾಗಿರಬೇಕು ಎಂದು ನಂಬಲಾಗಿದೆ.

ಕಳೆದ ಒಂದು ದಶಕದಲ್ಲಿ ಜೀವಿಗಳ ರಾಸಾಯನಿಕಗಳ ಬಗ್ಗೆ ಹೆಚ್ಚು ಲಕ್ಷ್ಯ ಪೂರೈಸಲಾಗುತ್ತಿದೆ. ಅವುಗಳಲ್ಲಿಯ ವಿವಿಧ ಅಮಿನೋ-ಆಮ್ಲಗಳು ವಿವಿಧ ರೀತಿಯಿಂದ ಒಂದನ್ನೊಂದು ಸೇರಿಕೊಂಡಾಗ ಆ ಪ್ರಾಣಿ ಅದಕ್ಕೆ ಅನುಗುಣ ವಾದಿ ವರ್ತಿಸುತ್ತದೆ ಎಂದು ಕಂಡುಹಿಡಿಯಲಾಗಿದೆ. ಅಂದರೆ ಧೀಮಂತ, ಕಳ್ಳ, ಸಂಗೀತಗಾರ, ಕಲಾಕಾರ ಮೊದಲಾದ ಗುಣಧರ್ಮಗಳನ್ನು ಪಡೆಯಲು ವ್ಯಕ್ತಿಗಿಂತ ಅವನ ಅಮಿನೋ-ಆಮ್ಲಗಳೇ ಕಾರಣ. ಕೆಲವರ ಜೀನಗಳಲ್ಲಿ ಕೆಲವು ಅಮಿನೋ-ಆಮ್ಲಗಳ ಕೊರತೆ ಇರುವದರಿಂದ ಅಂತಹವರಿಗೆ ಮಧುಮೇಹ, ರಾತ್ರಿ-ಕುರುಡು, ಸತತ ರಕ್ತ-ಸ್ರಾವಗಳಂತಹ ರೋಗಗಳು ಬರುತ್ತವೆ ಎಂದು ಸಿದ್ಧವಾಗಿದೆ. ಭಾರತದಲ್ಲಿ ನೌಕರಿ ಸಿಗದೇ ಅಮೇರಿಕೆಯ ನಾಗರಿಕತ್ವ ಸ್ವೀಕರಿಸಿದ,

ಡಾ। ಖುರಾನಾರು ಪ್ರಥಮವಾಗಿ 'ಜೀನ' ಪ್ರಯೋಗಾಲಯದಲ್ಲಿ ತಯಾರಿಸಿದ್ದರಿಂದ 'ನೊಬೆಲ್' ಪುರಸ್ಕಾರವನ್ನು ಪಡೆದರು. ಈ ತಳಹದಿಯ ಮೇಲೆ ರೋಗಿಗಳಲ್ಲಿ ಕೊರತೆ ಇರುವ ಜೀನಗಳನ್ನು ಕೃತ್ರಿಮವಾಗಿ ಸಿದ್ಧಮಾಡಿ ಶರೀರಕ್ಕೆ ಪೂರೈಸಿದರೆ ಅವನು ಬಳಲುವ ರೋಗದಿಂದ ನಿವಾರಣೆ ಹೊಂದುವನೆಂಬ ಊಹೆ. ಬರೆ ಇಷ್ಟೇ ಸಾಧಿಸಿದ್ದರಿಂದಲೇ ಪತ್ರಿಕಾಕರ್ತರು, ರಾಜಕಾರಣಿಗಳು, ನಾವು ಇಚ್ಛಿಸಿದ ವಿಜ್ಞಾನಿ, ಸಂಗೀತಕಾರ, ಆಟಗಾರ, ಧೀಮಂತ ಪ್ರತಿಭಾಶಾಲಿ ಮಗನನ್ನೋ ಮಗಳನ್ನೋ ಪಡೆಯುವ ದಿನಗಳು ದೂರವಿಲ್ಲವೆಂದು ವಿಶ್ವಕ್ಕೆ ಸಾರಿಬಿಟ್ಟಿದ್ದಾರೆ. ಆದರೆ ಧೀಮಂತ ವಿಜ್ಞಾನಿ ಮಾತ್ರ ಇಂತಹ ಆಶ್ವಾಸನವನ್ನು ಜನತೆಗೆ ಎಂದೂ ಕೊಡಲು ಹೋಗುವದಿಲ್ಲ. ಅಂತಹ ದಿನಗಳು ಇನ್ನು ಒಂದು ಶತಮಾನದ ನಂತರವಾದರೂ ಬಂದರೆ ಆತನಷ್ಟು ಸಂತಸಪಡುವವರು ಇನ್ನಾರೂ ಇರಲಾರರು.

ಸುವರ್ಣವನ್ನು ತಯಾರಿಸಲು ಹೊರಟ ಆಲ್‌ಕೆಮಿಸ್ಟರು ರಸಾಯನಶಾಸ್ತ್ರವನ್ನು ನಿರ್ಮಿಸಿದಂತೆ ಜೀವ-ಉತ್ಪತ್ತಿ ಕಂಡುಹಿಡಿಯಲು ಹೊರಟ ವಿಜ್ಞಾನಿಗಳು ಹಲವಾರು ಮಾನವರಿಗೆ ಉಪಯೋಗಕಾರಿ ಸಂಶೋಧನೆ ಮಾಡಿದ್ದಾರೆ. ಹೃದಯ ಬವಲಿ (ಕಸಿ) ಮಾಡುವದು ಈ ಸಿದ್ಧಾಂತವನ್ನೇ ಅವಲಂಬಿಸಿದೆ. ನಮ್ಮ ಶರೀರ ತನ್ನದಾದ ಅವಯುವ ಬಿಟ್ಟು ಇತರರ ಅಂಗಾಂಗಗಳನ್ನು ಕೂಡಲೇ ತಿರಸ್ಕರಿಸಿ ಬಿಡುತ್ತವೆ. ಆದರೆ ಅವು ಹೊಸ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುವಂತೆ ಪೂರ್ವಯೋಜಿತವಾಗಿ ಬದಲಿಸಲಿರುವ ಅಂಗಕ್ಕೆ ತರಬೇತಿ ಕೊಟ್ಟರೆ, ಅದು ಹೊಸ ಅಂಗವನ್ನು ತಿರಸ್ಕರಿಸುವ ಬದಲಾಗಿ ಅದರೊಡನೆ ಹೊಂದಿಕೊಳ್ಳಲು ಯತ್ನಿಸುತ್ತದೆ. ಜೀವನದಲ್ಲಿಯ ಯಾವ ರಾಸಾಯನಿಕ ಇದಕ್ಕೆ ಕಾರಣೀಭೂತವಾಗಿವೆ ಎಂಬ ಗುಟ್ಟು ತಿಳಿದರೆ ಒಬ್ಬರ ಅವಯುವ ಇನ್ನೊಬ್ಬರಿಗೆ ಬಟ್ಟೆ ಬದಲಿಸಿದಷ್ಟು ಸುಲಭವಾಗಿ ಜೋಡಿಸಬಹುದು. ಆದರೆ ಇಂದಿರಾ ಗಾಂಧಿಯ ಕಣ್ಣುಗಳನ್ನು ಪಡೆದವನು/ಳು ಜಗತ್ತನ್ನು ಅವರ ದೃಷ್ಟಿಯಲ್ಲಿ ಅಳೆಯುತ್ತಾನೋ/ಳೋ ಇಲ್ಲವೇ ತನ್ನ ಸ್ವಂತದ ದೃಷ್ಟಿಯಲ್ಲಿ ಅಳೆಯುತ್ತಾನೋ/ಳೋ ನೋಡಬೇಕು !

ಎಲ್ಲ ಜೀವಿಗಳು ತಮ್ಮ ಜೀವನವನ್ನು ಒಂದೇ ಜೀವಾಣುವಿನಿಂದ ಪ್ರಾರಂಭಿಸುವದರಿಂದ ಶರೀರದ ಯಾವದೇ ಅವಯುವದ ಒಂದು ಜೀವಾಣು ತೆಗೆದು ಅದರ ಬೆಳವಣಿಗೆ ಬೇಕಾಗುವ ರಸಾಯನಗಳನ್ನು ಪೂರೈಸಿದರೆ ಅದು ಬೇರೊಂದು

ಜೀವಿಯಾಗಬಲ್ಲದೇ ಎಂದು ಪ್ರಯೋಗ ನಡೆಸಿದ್ದಾರೆ. ಮೂಲಂಗಿಯ ಒಂದೇ ಒಂದು ಜೀವಾಣು ಬೇರ್ಪಡಿಸಿ ಅದನ್ನು ರಾಸಾಯನಿಕ ದ್ರವದಲ್ಲಿ ಇಟ್ಟಾಗ, ಅದು ಬೆಳೆಯುತ್ತ ವಿಭಾಗವಾಗುತ್ತ ಹೋಗಿ ಒಂದು ಮೂಲಂಗಿಯಾಗಿ ಪರಿವರ್ತನೆ ಹೊಂದಿದಾಗ ವಿಜ್ಞಾನಿಗಳಿಗೆ ಸಡಗರ. ರಾಸಾಯನಿಕದ ಬದಲಾಗಿ ಎಳೆ-ನೀರಿನಲ್ಲಿ ಈ ಜೀವಾಣು ಇಟ್ಟಾಗಲೂ ಅದು ಅದೇ ಪ್ರತಿಕ್ರಿಯೆ ತೋರಿಸಿತು. ಅಂತೆಯೇ ಎರಡನೆಯ ಮಹಾಯುದ್ಧದಲ್ಲಿ ರಕ್ತಪೂರೈಕೆಯಿಲ್ಲದೇ ಸೈನಿಕರು ಸಾಯುತ್ತಿರುವಾಗ ಎಳೆ-ನೀರಿನ ಚುಚ್ಚುಮದ್ದು ಕೊಟ್ಟು ಅವರನ್ನು ಬದುಕಿಸಿಕೊಂಡ ಶ್ರೇಯಸ್ಸು ಸೈನ್ಯದ ಡಾಕ್ಟರಿಗೆ ಸಲ್ಲುತ್ತದೆ.


ಆಧುನಿಕ ಮಾನವನಿಗೆ ಕ್ಯಾನ್ಸರ್ ಒಂದು ಮಹಾಭಿಶಾಪವಾಗಿ ಪರಿಣಮಿಸಿದೆ. ಈ ರೋಗದ ವೈಶಿಷ್ಟ್ಯವೆಂದರೆ ಆಕ್ರಮಿಸಿದ ಜೀವಾಣುಗಳು ತಮ್ಮತನವನ್ನು ಮರೆತು ಅನಿಯಂತ್ರಿತವಾಗಿ ಬೆಳೆಯುತ್ತ ಹೋಗಿ, ಅಂಗಾಂಗಗಳನ್ನು ವ್ಯಾಪಿಸಿ ನಂತರ ರೋಗಿಯನ್ನೇ ಆಹುತಿ ತೆಗೆದುಕೊಳ್ಳುತ್ತವೆ. ತಂಬಾಕು-ಸೇದುವವರಲ್ಲಿ ಪುಪ್ಪುಸ ಆಕ್ರಮಿಸಿದರೆ, ವೀಳ್ಯ ಸೇವಿಸುವವರಲ್ಲಿ ವಸಡು-ನಾಲಿಗೆಗಳಿಗೆ ಪರಿಣಾಮವಾಗುವದುಂಟು. ಕೆಲವರ ಜನನೇಂದ್ರಿಯಗಳಿಗೆ ತಗಲಿದರೆ, ಸ್ತ್ರೀಯರಲ್ಲಿ ಸ್ತನಗಳನ್ನು ಅದು ಆಕ್ರಮಿಸುವದುಂಟು. ಇಷ್ಟಾದರೂ ಆಯಾ ಕ್ರಿಯೆಗಳಿಂದ ಪುಪ್ಪುಸ, ಬಾಯಿಗಳಿಗೆ ಕ್ಯಾನ್ಸರ್ ಆಗುತ್ತದೆ ಎಂದು ವಿಜ್ಞಾನಿಗಳಿಗೆ ಸಿದ್ಧಮಾಡಲು ಇಂದೂ ಸಾಧ್ಯವಾಗಲಿಲ್ಲ. ಯಾಕೆಂದರೆ ಸಿಗರೇಟು, ವೀಳ್ಯ ಸೇವಿಸದವರಲ್ಲೂ ಈ ಅವಯವಗಳು ಆಹುತಿಯಾಗುವದುಂಟು. ಅಲ್ಲದೆ ಪ್ರಯೋಗರೂಪವಾಗಿ ಅನೇಕ ರಾಸಾಯನಿಕಗಳನ್ನು ಇಲಿಗಳ ಶರೀರದಲ್ಲಿ ಸೇರಿಸಿದಾಗಲೂ ಅವುಗಳು ಕ್ಯಾನ್ಸರ್ ರೋಗದಿಂದ ಬಳಲುತ್ತವೆ. ಈ ಅವಯವಗಳಿಂದ ಕೆಲವು ಜೀವಾಣುಗಳನ್ನು ಬೇರ್ಪಡಿಸಿ ಜೀನ-ರಸಾಯನದಲ್ಲಿ ಸೇರಿಸಿದಾಗ ಅವು ಕ್ಯಾನ್ಸರ್ ಪೀಡಿತ ಜೀವಾಣುಗಳಂತೆ ವರ್ತಿಸುತ್ತವೆ. ಅವುಗಳನ್ನು ಬೇರೆ ಪ್ರಾಣಿಗಳ ಅಂಗಾಂಗಗಳಲ್ಲಿ ಸೇರಿಸಿದಾಗ ಅವು ಕ್ಯಾನ್ಸರ್ ಪೀಡಿತವಾಗುತ್ತವೆ. ಪ್ರಾಣಿಗಳಲ್ಲಿ ಕ್ಯಾನ್ಸರ್ ರೋಗ ವಿರೋಧಿಸುವಂತಹ ಜೀನ ಒಂದನ್ನು ತಯಾರಿಸಿ ಶರೀರದಲ್ಲಿ ಸೇರಿಸಲು ಸಾಧ್ಯವಾದ ದಿನ ಈ ರೋಗದಿಂದ ಸಾವು-ನೋವುಗಳು ನಿಂತು ಹೋಗಬಹುದು.

ಉಳಿದ ಪ್ರಾಣಿಗಳಂತೆ ಮಾನವನು ಕುಲುಕುಲು ನಗುತ್ತ ಬಾಲ್ಯ ಕಳೆದು,

ಶೂರನಂತೆ ಯೌವನದಲ್ಲಿ ಕಾಲಿಟ್ಟು, ಬಾಡಿದ ಹೂವಿನಂತೆ ಮುದಿಪ್ರಾಯವನ್ನು ನೂಕುತ್ತಾನೆ. ತಾರುಣ್ಯ ಅಖಂಡವಾಗಿ ಉಳಿಯುವಂತೆ, ಆದರಂತೆ ಸಾವು ಮುಂದೂಡಲು ಸಾಧ್ಯವೇ ಎಂದು ವಿಜ್ಞಾನಿಗಳು ತಲೆ ಕೆರೆದುಕೊಳ್ಳುತ್ತಿದ್ದಾರೆ; ಮುದಿ ಮಾಡುವ ಜೀನಗಳ ಅಧಿಕಾರ ಕುಗ್ಗಿಸಲು ಕೃತಕ ಜೀನಗಳು ಪೇಟೆಯಲ್ಲಿ ಸಿಗುವಂತೆ ಆಗುವಕಾಲ ಬಂದರೆ, ಆಗ ಯಯಾತಿಯಂತೆ ಎಲ್ಲರೂ ಯೌವನವನ್ನು ಖರೀದಿಸಬಹುದು! ಹೆಂಗಳೆಯರು ರೂಪ-ಲಾವಣ್ಯಗಳನ್ನು ಕಾಯ್ದಿಡುವ ಅಮಿನೋ-ಆಮ್ಲಗಳ ಮಿಶ್ರಣವನ್ನು ಸೇವಿಸಿ ತಾವು ಮೊಮ್ಮಗಳೊಂದಿಗೆ ಸ್ಪರ್ಧಿಸಬಹುದು. ಮುದಿತನ ಇಲ್ಲದ್ದರಿಂದ, ಮರಣ ಮುಂದೆ ಹೋದದ್ದರಿಂದ ಮಾನವನ ಸಂತಾನ-ನಿರ್ಮಾಣಕಾರ್ಯದಲ್ಲಿ ಪ್ರಗತಿಯಾಗುವದರಲ್ಲಿ ಸಂದೇಹ ವಿಲ್ಲ. ಶಿಶುಗಳ ಮರಣಸಂಖ್ಯೆ ಇಳಿದಾಗಲೇ ಜನಸಂಖ್ಯೆ ಅಭಿವೃದ್ಧಿಯಾಗುತ್ತಿರುವಾಗ ಅಂತಹ ದಿನಗಳಲ್ಲಿಯ ಸಮಾಜದಲ್ಲಿ ಇರುವ ಬಹುಸಂಖ್ಯಾತ ಯುವಕರಿಗಾಗಿ ಸಿನಿಮಾ ಥಿಯೇಟರ್ ಅಂದಚೆಂದದ ಬಟ್ಟೆ, ಸುಗಂಧ ದ್ರವ್ಯಗಳು, ಆಹಾರ-ಆಚ್ಛಾದನ ಎಷ್ಟು ನಿರ್ಮಿಸಿದರೂ ಕಡಿಮೆಯೇ ಆದೀತು. ವಿಜ್ಞಾನಿಗಳು ಅಂತಹ ದಿನಗಳನ್ನು ಭೂಮಿಗೆ ತರುವ ಸಾಧ್ಯತೆ ಇದೆ ಎಂದು ಹೇಳಿದರೂ ಅದು ಇಂದಿನ ಸಮಾಜದಲ್ಲಿ ಅವಶ್ಯಕವೇ ಎಂದು ರಾಜಕಾರಣಿಗಳು, ಮುಖಂಡರು ತೀರ್ಮಾನಿಸಬೇಕು.

ಜೀವಿಗಳನ್ನು ನಿರ್ಮಿಸುವ, ಅವುಗಳಿಗೆ ಇಚ್ಛಿತ ಆಕಾರ, ರೂಪ, ನಡಾವಳಿಕೆ ಕೊಡುವ ನಿಸರ್ಗದ ಗುಟ್ಟು ಮಾನವನಿಗೆ ಸಂಪೂರ್ಣ ತಿಳಿದರೆ ಅವನು ಅವನ್ನು ಯೋಗ್ಯ ಉಪಯೋಗಿಸಬಹುದೇ ಇಲ್ಲವೇ ದುರಪಯೋಗಮಾಡಿಕೊಳ್ಳಬಹುದೇ ಎಂಬುದು ಕಲ್ಪನೆಗೆ ಸಿಲುಕದ ಮಾತು. ಒಬ್ಬನು ಆಕಾಶದಷ್ಟು ಎತ್ತರವಾಗಿ ಬೆಳೆದರೆ ಇನ್ನೊಬ್ಬನು ಇರುವೆಯಷ್ಟಾಗಬಹುದು. ಓಟಗಾರನು ಜಿರಾಫೆಯಕಾಲುಗಳನ್ನು ಪಡೆದರೆ, ಕುಸ್ತಿಗಾರನು ಆನೆಯ ಶಕ್ತಿ ಪಡೆದಾನು. ಕ್ರಿಕೆಟ್ ಆಟಗಾರನು ಲಕ್ಷ ಓಟಗಳ ಗಟ್ಟಿತನ ಪಡೆದರೆ ಹಾಕಿ ಆಟಗಾರನು ಗಾಳಿಯಲ್ಲಿ ಹಾರಿ ಗೋಲ್ ಹೊಡೆದಾನು. ಹಾಡುಗಾತಿಯರು ಸುಮಧುರ ಕಂಠ ಪಡೆದಾರು. ವಿಜ್ಞಾನಿಗಳೆಲ್ಲ ಡಾ. ಸಿ.ವಿ. ರಾಮನ್ನರ ಬುದ್ಧಿ ಮತ್ತೆ ಪಡೆದು ನೊಬೆಲ್ ಬಹುಮಾನ ಯಾರಿಗೆ ಕೊಡಬೇಕು ಎಂದು ಗೊಂದಲ ಏಳಬಹುದು. ಎಲ್ಲ ರೋಗಗಳಿಗೆ ಜೀವಿ ಔಷಧಿ ಬಳಸುವದರಿಂದ ಡಾಕ್ಟರರೆಲ್ಲ ದಿವಾಳಿ ಎದ್ದು ಹೋದಾರು. ಸ್ತ್ರೀಯರು

ಪ್ರತಿ ಮಾಸದ ಋತುಮತಿಯಾಗುವ ಕಷ್ಟ ನಿಲ್ಲಿಸಿಕೊಂಡು ಐಚ್ಛಿಕ ಸಂತಾನ ಪಡೆದಾರು. ಪುರುಷರು ಹೆಚ್ಚಿನ ಇಂದ್ರಿಯದಿಂದ ಸಾಮರ್ಥ್ಯದಿಂದ ದೀರ್ಘಕಾಲದ ಸುಖ ಪಡೆದಾರು. ಇದಲ್ಲದೇ ಮಾನವನು ತನ್ನ ಕಡು ವೈರಿಗಳಾದ ಗುಂಗಾಡು, ಕ್ರಿಮಿ-ಕೀಟಗಳು, ಹಾವು ಮೊದಲಾದವುಗಳ ಸಂತತಿ-ನಿರ್ಮೂಲನ ಸಾಧ್ಯವಾಗ ದಂತೆ ಮಾಡಿದರೆ ತನ್ನ ಸೇವೆಯಲ್ಲಿರುವ ನಾಯಿ, ಬೆಕ್ಕು, ದನಕರು, ಆನೆ, ಕುರಿ, ಕೋಳಿ, ನವಿಲುಗಳಂತಹ ಪ್ರಾಣಿಗಳನ್ನು ಅಪಾರ ಸಂಖ್ಯೆಯಲ್ಲಿ ಸಾಕಬಹುದು. ಅಲ್ಲದೇ ತನ್ನ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸುವಂತಹ ಹೊಸ ಬಗೆಯ ಪ್ರಾಣಿ ಗಳನ್ನು ಮಾನವನು ಹುಟ್ಟಿಸಬಹುದು. ಆ ಕಾಲ್ಪನಿಕ ಯುಗದಲ್ಲಿ ಮಾನವನು ಕಲ್ಪಿಸಿದ್ದೆಲ್ಲ ಅವನದಾಗಬಹುದು. ಆದರೆ ಅದರಿಂದ ಅವನ ಸಂತೋಷ, ಸುಖ ಹೆಚ್ಚಾಗುವದು ಎಂದು ಮಾತ್ರ ಹೇಳಲಾದೀತೆ?



೧



೨



೩



೪



೫



೬

ಪ್ರಾಣಿ ಲಾಂಛನಗಳು :

೧. ಗಂಗರ ಆನೆ,


೨. ಕದಂಬರ ಸಿಂಹ,

೩. ಮೈಸೂರರಸರ ಗಂಡಭೇರುಂಡ, ೯

೪. ವಿಜಯನಗರದ ವರಾಹ, ೧೮

೫. ಹೊಯ್ಸಳರ ಹೆಬ್ಬುಲಿ, ೧೧

೬. ಯೋಧನ ಥಾಲಿನ ಮೇಲೂ ಲಾಂಛನ, ೪೨



ಪಶು-ಪಕ್ಷಿಗಳ ಶಿಲ್ಪ-ಭಂಗಿಗಳು :

೧. ಸಿಟ್ಟಿಗೆದ್ದ ಆನೆ, ೪೬
೨. ಮರಿಯನ್ನು ಮುದ್ದಿಸುವ ಮಂಗ, ೪೬
೩. ಲಿಂಗಕ್ಕೆ ಹಾಲನ್ನೆರೆದು ತೀರ್ಥ ಸ್ವೀಕರಿಸುವ ಹಸು, ೪೨,
೪. ವಿಶ್ರಮಿಸುವ ಚಿಗರೆ, ೪೬
೫. ಹಣ್ಣು ತಿನ್ನುವ ಹಕ್ಕಿ, ೧೬
೬. ಮತ್ಸ್ಯದ ನಿರೀಕ್ಷೆಯಲ್ಲಿ ಹಂಸ, ೪೬




ದೇವ-ವಾಹನಗಳು :

೧. ನಂದಿ ೧ | ೨. ಶೇಷ, ೧೫ | ೩. ಮೂಷಕ, ೪೭
೪, ಐರಾವತ, ೧೫ | ೫. ಗರುಡ, ೧೧ | ೬. ಮಯೂರ, ೧೨




ದುಷ್ಟಮರ್ದಕ ಶಿಷ್ಟಪರಿಪಾಲಕ :

೧. ಮಹಿಷಾಸುರ-ಮರ್ದಿನಿ, ೫೭
೨. ವರಾಹಾವತಾರ, ೪೦
೩. ಕಾಲಿಯಾಮರ್ದನ, ೧೧
೪. ನಾರಸಿಂಹ, ೧೪
೫. ಗಜಾಸುರ-ಮರ್ದಕ, ೧೨



ಪೆಡಂಭೂತಗಳು :

೧. ಆಕಾರ ಹಿರಿದಾದರೂ ಮಿದುಳು ಕಿರಿದಾಗಿತ್ತು.
೨. ಕೆಲವು ಕಠಿಣ ಹೊರಗವಚಗಳನ್ನು ಹೊಂದಿದ್ದವು.
೩. ಹಲವು ಭೀಕರ ರೂಪ ತಾಳಿದ್ದವು.
೪. ಓತಿಕಾಟದ ನಂಟ.
೫. ನೆಲವನ್ನಾಳಿ ಮರಳಿ ನೀರನ್ನು ಸೇರಿದ ವರ್ಗ.
೬. ಗಗನಮಂಡಲವನ್ನೂ ಆಕ್ರಮಿಸಿದವು.



೧



೨



೩



೪

ಪ್ರಾಣಿತಜ್ಞರಿಗೇ ಸವಾಲಾದಿರುವ ಶಿಲ್ಪಗಳು :

೧. ನಾಗ-ನಾಗಿಣಿ, ೧೨

೨. ಕಿನ್ನರಿಯ ಸರಸ, ೪೭

೩. ಆನೆಮೊಗದ ಗಣಪ, ೧೨

೪. ಅರ್ಧನಾರೀಶ್ವರ, ೪೦



ಸಾಕು-ಪ್ರಾಣಿಗಳು :

೧. ಯುವತಿಯ ಗಿಳಿ, ೩೪

೨. ಗೃಹಿಣಿಯ ಹಕ್ಕಿ, ೩೬

೩. ಹರಿಹರಿ ಗೋವು, ೭

೪. ಪಳಗಿದ ನಾಗ, ೭

೫. ಅಂಕದ ಬಾತುಗೋಳಿ, ೭

೬. ಜೋಡಿ-ನಾಯಿ ೭



ವಿನೋದವೀಯುತ್ತಿದ್ದ ಪಶು-ಪ್ರಾಣಿಗಳು:

೧. ಕೋಳಿ-ಕಾಳಗ, ೫೧

೨. ಟಗರು-ಕಾಳಗ, ೨೮

೩. ಹಾವಾಡಿಗ, ೧೬

೪. ಗೂಳಿಯನ್ನು ಮಣಿಸಿದ್ದು, ೧೫

೫. ಹೆಬ್ಬುಲಿಯನ್ನು ಎದುರಿಸಿದ್ದು, ೭

೬. ಆನೆಯೊಡನೆ ಸೆಣಸಾಟ, ೧೬

ಮೂರು : ಶರೀರರಚನೆ

ಶ್ವೇತಶಿಲೆಯಿಂದ ಕಟ್ಟಿದ ತಾಜಮಹಲು, ಪಾಷಾಣದಿಂದ ನಿರ್ಮಿಸಿದ ಪಿರಾಮಿಡ್‌ಗಳನ್ನು ನೋಡಿ ಸೋಜಿಗಪಡುತ್ತೇವೆ: ಅದ್ಭುತ ಎನ್ನುತ್ತೇವೆ; ವಿಶ್ವ-ವಿಸ್ಮಯಗಳಲ್ಲಿ ಒಂದು ಎಂದು ಸಾರುತ್ತೇವೆ. ಕಲ್ಲಿಗೆ ಕಲ್ಲು ಜೋಡಿಸಿ ಮಾಡಿದ ಈ ಕಟ್ಟಡಗಳೇ ನಮಗೆ ಇಷ್ಟೊಂದು ರಮ್ಯವಾಗಿ ಕಂಡರೆ, ಕೇವಲ ಒಂದೇ ಒಂದು ಜೀವಾಣು ಬಳಸಿ ನಿರ್ಮಿತವಾದ, ಸತತ ಬೆಳೆಯುವ, ಸತತ ದುಡಿಯುವ ಈ ಶರೀರ-ಕಟ್ಟಡದ ಆಗು-ಹೋಗುಗಳ ಗುಟ್ಟು ಅರಿತರೆ ಮಾತಿಲ್ಲದೇ ಮೂಕರಾಗುವ ಪ್ರಸಂಗ ಬರಬಹುದು.

ಪ್ರಾಣಿಗಳಲ್ಲಿ, ಮಾನವನಲ್ಲಿ, ಕಾಮಪ್ರವೃತ್ತಿ ಪ್ರಜೋತ್ಪತ್ತಿಗಾಗಿ ನಿಸರ್ಗ ನಿರ್ಮಿಸಿದ ಪವಾಡ, ಈಪ್ರವೃತ್ತಿಯಿಂದ ಯುದ್ಧಗಳಾಗಿವೆ,ರಾಜ್ಯಸಾಮ್ರಾಜ್ಯಗಳು ಉರುಳಿವೆ. ಮಾನವಚರಿತ್ರೆ ಇಂತಹ ಹಲವಾರು ಘಟನೆಗಳಿಂದ ತುಂಬಿಹೋಗಿದೆ. ಆದರೆ ಈ ಪ್ರವೃತ್ತಿ 'ಮೂಲ ಸಂತಾನೋತ್ಪತ್ತಿಯಲ್ಲಿ ಗಂಡು-ಹೆಣ್ಣಿನ ಪಾತ್ರ ತೀರ ಕಿರಿದು, ಭಾವೀ ಮಗುವಿಗೆ ಬೇಕಾಗುವ ೨೪ ಜೋಡಿ ಕ್ರೊಮೊಸೋಮು

ಗಳಲ್ಲಿ ಅರ್ಧದಷ್ಟು, ಪತಿ ಪತ್ನಿಗೆ ನೀಡುತ್ತಾನೆ. ಅದನ್ನು ಸ್ವೀಕರಿಸಿದ ತಾಯಿ ತನ್ನವಾದ ಹನ್ನೆರಡು ಕ್ರೊಮೊಸೊಮುಗಳನ್ನು ಸೇರಿಸಿದಾಗ ಮುಂದಿನ ಬೆಳವಣಿಗೆ ಸಾಧ್ಯ. ಪುರುಷ-ಜನನ-ಜೀವಾಣು ಅತೀ ಸೂಕ್ಷ್ಮವಾಗಿದ್ದು ಹೆಡೆ ಬಾಲ ಇರುವದರಿಂದ ಹಾವನ್ನು ಹೋಲುತ್ತಿದ್ದು ವೀರ್ಯದ ಒಂದು ತೊಟಕಿನಲ್ಲಿ ಲಕ್ಷಾವಧಿ ಇಂಥವು ಈಜಾಡುತ್ತಿರುತ್ತವೆ. ಯೋನಿಯಲ್ಲಿರುವ ವರ್ತುಲಾಕಾರದ ಒಂದೇ ಒಂದು ಸ್ತ್ರೀ-ಜನನ-ಜೀವಾಣುವಿನೊಡನೆ ಸೇರಿಕೊಳ್ಳಲು ಇವು ತಮ್ಮೊಂದಿಗೆ ಸ್ಪರ್ಧೆ ನಡೆಸುತ್ತ ತಾನು ಮುಂದೆ, ತಾನು ಮುಂದೆ ಎಂದು ಮೇಲಾಡುತ್ತಿರುತ್ತವೆ. ಅವೆಲ್ಲವು ತಮ್ಮ ಗುರಿ ಮುಟ್ಟುವದು ಅತಿವಿರಳ ಘಟನೆ. ಇಲ್ಲದಿದ್ದರೆ ನಾರಿಯೊಬ್ಬಳು ತನ್ನ ಜೀವನದಲ್ಲಿ ಸುಲಭವಾಗಿ ಶಿಶುಮಕ್ಕಳ ತಾಯಿ ಆಗುತ್ತಿದ್ದಳು. ಮತ್ತು ಪುರುಷನೊಬ್ಬ ಲಕ್ಷಾವಧಿ ಮಕ್ಕಳ ತಂದೆಯಾಗುತ್ತಿದ್ದ ಎಂದು ವಿಜ್ಞಾನಿಗಳು ಲೆಕ್ಕಾಚಾರ ಹಾಕಿದ್ದಾರೆ.

ಪ್ರತಿ ಮಾಸದಲ್ಲಿಯೂ ಸ್ತ್ರೀ ಗರ್ಭಧಾರಣೆ ಮಾಡಬಹುದು ಎಂದು ಊಹಿಸಿ ನಿಸರ್ಗ ಅದಕ್ಕಾಗಿ ಸಿದ್ಧತೆ ನಡೆಸುತ್ತದೆ. ಸರ್ವಸಾಧಾರಣವಾಗಿ ಋತುಮತಿಯಾದ ೧೨ರಿಂದ ೧೬ದಿನಗಳ ವರೆಗೆ ಸ್ತ್ರೀ-ಜನನ-ಜೀವಾಣು ತನ್ನ ಸಿದ್ಧತೆ ಮಾಡಿಕೊಂಡು ಗಂಡು-ಜೀವಾಣುವಿಗಾಗಿ ಕಾಯುತ್ತಿರುತ್ತದೆ. ಈ ಅವಧಿಯಲ್ಲಿ ಸ್ತ್ರೀಯ ಶರೀರದ ಉಷ್ಣತೆ ಏರಿರುತ್ತದೆ. ಈ ದಿನಗಳಲ್ಲಿ ಸಂಭೋಗ ನಡೆದು ಸ್ತ್ರೀ-ಪುರುಷ-ಜನನ-ಜೀವಾಣುಗಳ ಮಿಲನವಾದರೆ ಗರ್ಭ ಬೆಳೆಯಲು ಪ್ರಾರಂಭವಾಗುತ್ತದೆ. ಇಲ್ಲದಿದ್ದರೆ ನಿರಾಶೆ ಹೊಂದಿದ ಶರೀರ ಭವಿಷ್ಯದ ಮಗುವಿಗೆ ಸ್ವಾಗತ ನೀಡಲು ಮಾಡಿದ ಎಲ್ಲ ಸಿದ್ಧತೆಯನ್ನೂ ೨೮ರಿಂದ ೩೦ ದಿನಗಳಲ್ಲಿ ಹೊರಹಾಕಿಬಿಡುತ್ತದೆ. ಪುರುಷ-ಜನನ-ಜೀವಾಣುವಿಗೆ ಆರೇಳು ದಿನಗಳ ವರೆಗೆ ಗರ್ಭಧಾರಣಮಾಡುವ ಶಕ್ತಿ ಇರುವದರಿಂದ ಮುಟ್ಟಾದ ೮-೧೦ ದಿನಗಳಲ್ಲಿ ಮಾತ್ರ ಸಂಭೋಗ ನಡೆಸಿದರೂ ಸ್ತ್ರೀ ಗರ್ಭಧಾರಣೆಮಾಡುವ ಸಾಧ್ಯತೆ ಇದೆ ಎಂದು ಮಾತ್ರ ನಾವುಮರೆಯಬಾರದು. ಯೋನಿ ಆಮ್ಲಮಯವಾದಿರುವದರಿಂದ ಅದಕ್ಕೆ ಅನುಗುಣವಾಗಿ ವೀರ್ಯ "ಅಲ್ಕಲಿ" (ಕ್ಷಾರ) ಮಯವಾಗಿರುತ್ತದೆ. ಹಾಗಿಲ್ಲದಿದ್ದರೆ ಜನನ-ಜೀವಾಣುಗಳು ಬದುಕಲಾಗದ್ದರಿಂದ ಅಂಥವರ ಪತ್ನಿ ಗರ್ಭಧಾರಣೆ ಮಾಡಲಾರಳು. ಅದರಂತೆ ಜನನ-ಜೀವಾಣುಗಳು ಬೆಳೆಯಲು ಸಾಕಷ್ಟು ವಿರಾಮಕೊಡದೆ ಸಂಭೋಗದಲ್ಲಿ ನಿರತರಾದರೆ ಮಕ್ಕಳಾಗುವದಿಲ್ಲ.

ಪುತ್ರಸಂತಾನದಿಂದಲೇ ಪಿತೃಗಳು ಸ್ವರ್ಗ ಕಾಣುವರೆಂಬ ಕಲ್ಪನೆ ನಮ್ಮಲ್ಲಿ ಬೆಳೆದುಬಂದುದರಿಂದ ಬರಲಿರುವ ಮಗು ಗಂಡೋ ಹೆಣ್ಣೋ ಎಂಬ ಕುತೂಹಲ ನಮ್ಮಲ್ಲಿ ಹೆಚ್ಚು. ಗಂಡು ಸಂತಾನಕ್ಕಾಗಿ ವ್ರತ-ತೀರ್ಥಯಾತ್ರೆ, ವಿಶೇಷ ಪೂಜೆಗಳು ನಡೆಯುತ್ತವೆ. ಆದರೆ ವೈಜ್ಞಾನಿಕವಾಗಿ ಯಾವ ಕ್ಷಣದಲ್ಲಿ ಯಾವ ಪುರುಷ-ಜನನ-ಜೀವಾಣು, ಸ್ತ್ರೀ-ಜನನ-ಜೀವಾಣುವನ್ನು ಸೇರುತ್ತದೋ ಆ ಕ್ಷಣವೇ ಮಗುವಿನ ಭವಿಷ್ಯದ ರೂಪ, ಬಣ್ಣ, ಬುದ್ಧಿ ಮತ್ತೆ ಮೊದಲಾದವುಗಳ ನಿರ್ಧಾರವಾಗುವದರ ಜೊತೆಗೆ ಅದರ ಲಿಂಗವೂ ನಿರ್ಧಾರವಾಗಿಹೋಗುತ್ತದೆ. ನಮ್ಮ ಜೀವಾಣುವಿನಲ್ಲಿ ಇರುವ ಇಪ್ಪತ್ನಾಲ್ಕು ಜೋಡಿಯಲ್ಲಿ ಒಂದು ಜೋಡಿ ಲಿಂಗ-ಕ್ರೊಮೋಶೋಮುಗಳಾಗಿರುತ್ತದೆ. ಸ್ತ್ರೀಯರಲ್ಲಿ ಇವು ಒಂದೇ ತೆರನಾಗಿದ್ದರೂ ಪುರುಷರಲ್ಲಿ ಅವು ಭಿನ್ನವಾಗಿರುತ್ತವೆ. ಅವುಗಳಿಗೆ 'ಅ' ಮತ್ತು 'ಬ' ಎಂದು ಹೆಸರು ಕೊಟ್ಟರೆ, ಸ್ತ್ರೀಯರಲ್ಲಿ 'ಅಅ' ಜೋಡಿಯಾಗಿದ್ದರೆ ಪುರುಷರಲ್ಲಿ 'ಅಬ' ಜೋಡಿಯಾಗಿರುತ್ತದೆ. ಇವು ಮಗುವಿನ ಲಿಂಗ ನಿರ್ಧರಿಸುವದರಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ತಂದೆ-ತಾಯಿಗಳು ಮಗುವಿಗೆ ಅರ್ಧದಷ್ಟು ಮಾತ್ರ ಕ್ರೊಮೋಶೋಮುಗಳನ್ನು ಕೊಡುವದರಿಂದ ತನ್ನ ಭಾವೀ ಮಗುವಿಗೆ ತಂದೆಯಿಂದ 'ಅ' ಇಲ್ಲವೇ 'ಬ' ಕ್ರೊಮೋಶೋಮ್ ದೊರೆಯಲು ಸಾಧ್ಯವಿದೆ. ಆದ್ದರಿಂದ ತಂದೆಯ 'ಅ' ತಾಯಿಯ 'ಅ'ದರೊಂದಿಗೆ ಸೇರಿದಾಗ ಆ ಮಗುವಿನಲ್ಲಿ 'ಅಅ' ಜೋಡಿಯಾಗುವದರಿಂದ ಅದು ಹೆಣ್ಣಾಗುತ್ತದೆ. ತಮಗೊಬ್ಬ ಕುಲೋದ್ಧಾರಕ ಪುತ್ರನನ್ನು ಕೊಡದಿದ್ದ ಮಡದಿಯನ್ನು ಹೊಡೆದವರಿದ್ದಾರೆ, ಬೈದವರಿದ್ದಾರೆ, ಬಿಟ್ಟವರಿದ್ದಾರೆ. ಮಗ-ಮಗಳು ಹುಟ್ಟುವದು ತಮ್ಮನ್ನೇ ಅವಲಂಬಿಸಿದೆ ಎಂದು ಎಷ್ಟು ಜನ ಪುರುಷರು ಅರಿತಿದ್ದಾರೆ?

ಒಂದು ಗಂಡು-ಜೀವಾಣು, ಹೆಣ್ಣು-ಜೀವಾಣುವಿನೊಳಗೆ ಸೇರಿತೆಂದರೆ ತನ್ನ ಬಾಲ ತ್ಯಜಿಸಿಬಿಡುತ್ತದೆ. ಗಂಡು-ಜೀವಾಣುವಿನ ಪ್ರವೇಶಕ್ಕಾಗಿಯೇ ಇದ್ದ ಕಿರುಬಾಗಿಲು ಬೇರಾವುದೂ ಒಳಸೇರದಂತೆ ಭದ್ರವಾಗಿ ಮುಚ್ಚಲ್ಪಡುತ್ತದೆ. ಇದರಿಂದಾಗಿ ಸಂತಾನೋತ್ಪತ್ತಿಯ ಘಟನೆಗಳು ಪ್ರಾರಂಭವಾಗುತ್ತವೆ. ಒಂದು ಜೀವಾಣು ಬೆಳೆದು ಎರಡಾಗುತ್ತವೆ. ಎರಡು ಇದ್ದದ್ದು ನಾಲ್ಕು, ನಾಲ್ಕರಿಂದ ಎಂಟು, ಹದಿನಾರು, ಮೂವತ್ತೆರಡು, ಅರವತ್ನಾಲ್ಕು ಹೀಗೆ ಜೀವಾಣುಗಳ ಸಂಖ್ಯೆ ಬೆಳೆಯುತ್ತ ಹೋಗುತ್ತದೆ. ಮಾನವನ ಅಂಡದಲ್ಲಿ ಕಾದಿಟ್ಟ ಆಹಾರ

ಒಂದಿಷ್ಟೂ ಇರದ್ದರಿಂದ ಬೆಳೆಯುತ್ತಿರುವ ಮಗು, ತಾಯ ಉದರದೊಂದಿಗೆ ಸಂಪರ್ಕ ಬೆಳೆಸಿ ತನ್ನ ನಾಭಿಯಿಂದ ಆಹಾರ-ಪ್ರಾಣವಾಯು ಸೇವಿಸಿ, ತನಗೆ ಬೇಡಾದ ವಸ್ತುವನ್ನು ತಾಯ ರಕ್ತದಲ್ಲಿ ಸೇರಿಸಿಬಿಡುವದು. ತಾಯ ರಕ್ತವೇ ಮಕ್ಕಳ ಶರೀರದಲ್ಲಿ ಹರಿದಾಡುತ್ತದೆ ಎಂಬ ಮಾತು ಸತ್ಯವಲ್ಲ. ಬೆಳೆಯುತ್ತಿರುವ ಮಗು ತನ್ನ ರಕ್ತವನ್ನು ತಾನೇ ನಿರ್ಮಿಸಿಕೊಳ್ಳುತ್ತದೆ. ಸತತವಾಗಿ ನಿರ್ಮಾಣವಾಗುತ್ತಿರುವ ಜೀವಾಣುಗಳು ವಿವಿಧ ಭಾಗಗಳಿಗೆ ಸ್ಥಳಾಂತರ ಹೊಂದಿ ವಿವಿಧ ಕಾರ್ಯಗಳಿಗೆ ಮೀಸಲಾಗುತ್ತವೆ. ಅವು ನಿರ್ವಹಿಸಬೇಕಾದ ಕಾರ್ಯಕ್ಕೆ ಅನುಗುಣವಾಗಿ ಅವುಗಳ ಅಳತೆ, ರೂಪ, ಆಕಾರ, ಸಂಖ್ಯೆಗಳು ಹೆಚ್ಚು ಕಡಿಮೆಯಾಗುತ್ತವೆ. ಸುಮಾರು ಆರು ತಿಂಗಳ ಮಗುವಿನಲ್ಲಿ ಎಲ್ಲ ಅವಯವಗಳು ಬೇರ್ಪಟ್ಟು ತಮ್ಮ ಕಾರ್ಯ ಪ್ರಾರಂಭಿಸಿಬಿಡುತ್ತವೆ. ಇಂತಹ ಮಗು ತನ್ನ ಸ್ವತಂತ್ರ ಜೀವನ ನಡೆಸಬಲ್ಲುದು. ಆದರೆ ಹೊರ ಜಗತ್ತಿನಲ್ಲಿ ಕಷ್ಟ-ನಷ್ಟ,ನೋವು-ಸಾವುಗಳ ಸಂದರ್ಭಗಳು ಹೆಚ್ಚು. ಹೀಗಾಗಿ ಸ್ವಲ್ಪ ಬಲಿತುಕೊಳ್ಳುವದರ ಸಲುವಾಗಿ ಇನ್ನೂ ಮೂರು ತಿಂಗಳ ಉದರದ ಆಶ್ರಯ ಅವಶ್ಯವಿರುತ್ತದೆ.

ತಾಯ ತೊಡೆಯ ಮೇಲೆ ಕುಳಿತು ಕೇಕೆ ಹಾಕಿ ನಗುವ ಮಗು ಎಷ್ಟು ಅಬಲ ಎಂದು ಕಂಡರೂ ಅದರ ಶರೀರ ಜಟಿಲವಾದ ಎಷ್ಟೋ ಸಮಸ್ಯೆಗಳಿಗೆ ಉತ್ತರ ದೊರಕಿಸಿಕೊಳ್ಳಬಲ್ಲದಾಗಿದೆ. ಆ ದೃಷ್ಟಿಯಲ್ಲಿ ಒಂದು ಮಗುವನ್ನು ಮಹಾನಗರಕ್ಕೆ ಹೋಲಿಸಬಹುದಾಗಿದೆ ನೀರ ಪೂರೈಕೆಯಂತೆ ಇದ್ದ ರಕ್ತ-ಪೂರೈಕೆಯಿಂದ ಜೀರ್ಣಿಸಿದ ಆಹಾರದ ಜೊತೆಗೆ ಪ್ರತಿ ಜೀವಾಣುವಿಗೂ ಪ್ರಾಣವಾಯುವಿನ ಪೂರೈಕೆ ಆಗುತ್ತವೆ. ಮೂತ್ರಪಿಂಡ-ಗುದದ್ವಾರಗಳು ಒಳ-ಚರಂಡಿ-ಯೋಜನೆ ಇದ್ದಂತೆ ಇದರಲ್ಲಿ ಘನ ಮತ್ತು ದ್ರವ ಪದಾರ್ಥಗಳನ್ನು ಬೇರ್ಪಡಿಸುವ ವ್ಯವಸ್ಥೆಯೂ ಇದೆ. ಹೃದಯವು ಜಲ-ಒತ್ತಡದ ಪಂಪಿನಂತೆ ಕೆಲಸ ಮಾಡಿದರೆ, ಕೈಕಾಲುಗಳು ವಾಹನಸಾರಿಗೆಯಂತೆ ಇವೆ. ಮಿದುಳು ಮುಖ್ಯವಾದ ನಿರ್ಣಯ ಕೈಕೊಳ್ಳುವ ಕಚೇರಿ-ಠಾಣೆಯಂತೆ ಇದ್ದರೆ, ಕಿವಿ-ಕಂಠಗಳು ಆಕಾಶವಾಣಿಯಂತೆ ಇರುವವು. ಮಾಂಸಖಂಡಗಳು ಸೈನ್ಯದಂತೆ ಇದ್ದರೆ, ಕಣ್ಣುಗಳು ರೆಡಾರಿನಂತೆ ಇರುವವು. ಇವೆರಡರ ಅಂತರವಿಷ್ಟೆ: ಮಹಾನಗರದ ಆಗು-ಹೋಗುಗಳನ್ನು ಸುಸೂತ್ರವಾಗಿ ನಡೆಯಿಸಲು ಸಾವಿರಾರು ಸೇವಕರನ್ನು ನೇಮಿಸಿದರೂ, ನೀರು ನಿಲ್ಲುತ್ತದೆ, ನಗರ ನಾರುತ್ತದೆ, ವಿದ್ಯುತ್ ಹೋಗಿಬಿಡುತ್ತದೆ. ಅಪಘಾತಗಳು

ಆಗುತ್ತವೆ. ಸಂಪುಗಳಾಗುತ್ತವೆ. ಆದರೆ ಶರೀರದ ರಚನೆ ಅತ್ಯಮೋಘವಾಗಿದೆ! ಒಮ್ಮೆಯೂ ಸಂಪು ಹೂಡದೇ, ಕರ ಹೇರದೇ ಮಾನವ ಮಲಗಿರಲಿ, ಎಚ್ಚರ ವಿರಲಿ ತನ್ನ ಕೆಲಸವನ್ನು ನಿಷ್ಠೆಯಿಂದ, ದಕ್ಷತೆಯಿಂದ ಮುಂದುವರಿಸಿಕೊಂಡು ಹೋಗುವ ಅದ್ವಿತೀಯ ಯಂತ್ರ, ನಮ್ಮ ಶರೀರ. ಪ್ರತಿ ನಿಮಿಷಕ್ಕೆ ೬೦ರಿಂದ ೭೦ ಸಲ ಬಡಿದುಕೊಳ್ಳುವ ಸರ್. ವಿಶ್ವೇಶ್ವರಯ್ಯನವರ ತುಂಬುಜೀವನದ ಮೊದಲಲ್ಲಿ ಹೃದಯ ಒಂದರೆ ನಿಮಿಷ ನಿಂತರೂ ಅದೆಂತಹ ಹಾನಿಯಾಗುತ್ತಿತ್ತು! ಇಂತಹ ಉತ್ಕೃಷ್ಟ ಯಂತ್ರದ ಯೋಗಕ್ಷೇಮವನ್ನು ಸ್ವಲ್ಪವಾದರೂ ತೆಗೆದುಕೊಳ್ಳ ದಿದ್ದರೆ ಅದರ ಮಾಲಿಕರಾಗಲು ಯೋಗ್ಯರೇ ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆ. ಒಂದು ಶಿಸ್ತು, ನಿಯಮ ಪಾಲಿಸದೇ ನಾಲಿಗೆ ರುಚಿಗಾಗಿ ಭಕ್ಷ್ಯಗಳನ್ನು ಸೇವಿಸುವದು, ಜೀರ್ಣತೆಯನ್ನು ಅಲಕ್ಷಿಸುವದು, ವಿರಾಮ ಕೊಡದೇ ದೇಹವನ್ನು ದಣಿಸುವದು, ಕೃತ್ರಿಮ ವಿಶ್ರಾಂತಿಗೆಂದು ಕುಡಿಯುವದು ಇತ್ಯಾದಿಗಳಿಂದ ದೇಹ ದಣಿದುಹೋಗುವದು. ಮಾನವ-ನಿರ್ಮಿತ ಇಂಜಿನ್ನುಗಳು ಎಲ್ಲ ತರದ ಲಕ್ಷ್ಯ-ಪಾಲನೆಗಳನ್ನು ಕೊಟ್ಟರೂ ಸಂಪು ಹೂಡುತ್ತಿರುವಾಗ ಸ್ವಯಂಚಾಲಿತ ಶರೀರ-ಯಂತ್ರ ಎಷ್ಟೋ ಕುಂದುಕೊರತೆಗಳನ್ನು ತಾನೇ ನೀಗಿಸಿಕೊಳ್ಳುತ್ತಿರುವಾಗ ಅದರ ಪ್ರಚಂಡ ಶಕ್ತಿಯ ಜೊತೆಗೆ ಆಗಾಗ ಅದರ ಪರಿಮಿತಿಗಳತ್ತಲೂ ಮಾನವ, ಲಕ್ಷ್ಯ ನೀಡಬೇಕಾಗುತ್ತದೆ.

ಮಣ್ಣಿನಿಂದ ಇಟ್ಟಂಗಿ, ಇಟ್ಟಂಗಿಯಿಂದ ಮನೆಸಿದ್ಧವಾಗಿದೆ ಎಂದು ನನಗೆ ತಿಳಿದರೂ ಭವ್ಯಕಟ್ಟಡದಲ್ಲಿ ಪ್ರತಿಯೊಂದು ಇಟ್ಟಂಗಿಯೂ ಗುರುತಿಸಲಾರದಷ್ಟು ರೂಪಾಂತರ ಹೊಂದುವದಲ್ಲವೇ? ಅದರಂತೆ ನಮ್ಮ ಶರೀರ ಜೀವಾಣುಗಳಿಂದ ನಿರ್ಮಿತವಾಗಿದ್ದರೂ ತಾನು ನಿರ್ವಹಿಸಬೇಕಾದ ಕಾರ್ಯಗಳಿಗೆ ಅನುಗುಣವಾಗಿ ಈ ಜೀವಾಣುಗಳು ರೂಪಾಂತರ ಹೊಂದಿರುತ್ತವೆ. ಚರ್ಮದಲ್ಲಿ ಇದ್ದವು ಚಪ್ಪಟೆ ಯಾಗಿದ್ದು, ನೀರು-ರೋಗಾಣುಗಳು ಒಳಗೆಸೇರದಂತೆ ಶರೀರದೊಳಗಿನ ದ್ರವ್ಯ ಗಳು ಹೊರಗೆ ಬಾರದಂತೆ ಜೋಡಿಸಲ್ಪಟ್ಟಿರುತ್ತವೆ. ಮೈಯ ಉಷ್ಣತೆ, ಹೊರಗೆ ಹೋಗದಂತೆ ಕೂದಲುಗಳು ಈ ಜೀವಾಣುಗಳಿಗೆ ಜೋಡಿಸಿದಂತೆ ಹೆಚ್ಚಾದ ಉಷ್ಣತೆಯನ್ನು ಹೊರಗೆ ಹಾಕಲು ಬೆವರಿನ ಛಿದ್ರಗಳಿಂದ ಕೂಡಿರುತ್ತದೆ. ಮೈದೊಗಲು ನುಣುಪಾಗಿರುವಂತೆ ತೈಲಗ್ರಂಥಿಗಳಿದ್ದರೆ, ಉಷ್ಣವಲಯದಲ್ಲಿರು ವವರಿಗೆ ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳುವದರ ಸಲುವಾಗಿ ವರ್ಣಕಣಗಳು

ಇರುತ್ತವೆ. ಈ ಕಾರಣದಿಂದ ಸದಾಕಾಲ ಮನೆಯಲ್ಲಿಯೇ ಇರುವವರು ಬೆಳ್ಳಗೆ ಕಂಡರೂ ಅವರೇ ಬಿಸಿಲಲ್ಲಿ ನಾಲ್ಕು ದಿನ ಓಡಾಡಿದರೆ ಕಪ್ಪು ವರ್ಣಕ್ಕೆ ತಿರುಗುವರು. ಶರೀರದ ವಿವಿಧ ಸ್ಥಾನಗಳಲ್ಲಿದ್ದ ಮಾಂಸ-ಖಂಡಗಳು ವಿವಿಧ ಕಾರ್ಯಗಳನ್ನು ನಿರ್ವಹಿಸಬೇಕಾಗುವದರಿಂದ ಅವುಗಳಲ್ಲಿಯ ಜೀವಾಣುಗಳ ರಚನೆಯೂ ಭಿನ್ನವಾಗಿರುತ್ತದೆ. ನಮಗೆ ನಡೆಯಬೇಕು, ಹೊಡೆಯಬೇಕು ಓಡಬೇಕು ಎಂದು ಅನಿಸಿದಾಗೆಲ್ಲ ಕೈ-ಕಾಲುಗಳು ನಮ್ಮ ಸಹಾಯಕ್ಕೆ ಬರಬೇಕಾದ್ದರಿಂದ ಅವುಗಳಲ್ಲಿದ್ದ ಜೀವಾಣುಗಳು ನಮ್ಮ ಆಜ್ಞೆಯನ್ನು ಶಿರಸಾವಹಿಸುತ್ತವೆ. ಅದೇ ನಾವು ಕುಡಿದ ಚಹ, ಮಾಡಿದ ಊಟವನ್ನು ಜೀರ್ಣಿಸಿ, ಬೇಕಾದುದನ್ನು ಅಂಗಾಂಗಗಳಿಗೆ ಕಳಿಸಿ, ಬೇಡಾದ್ದನ್ನು ತ್ಯಜಿಸುವ ಕೆಲಸವನ್ನು ಜಠರ, ಕರುಳಿನ ಮಾಂಸದ ಜೀವಾಣುಗಳು ನಿಮ್ಮ ಆಜ್ಞೆಗೆ ಕಾಯದೇ ನಿರ್ವಹಿಸುತ್ತವೆ. ಆದರೆ ಇವು ಆಹಾರ ಸೇವಿಸಿದಾಗ ಕಾಲಾಂತರದಲ್ಲಿ ನಿರ್ದಿಷ್ಟ ಅವಧಿಯಲ್ಲಷ್ಟೆ ಕಾರ್ಯೋನ್ಮುಖಿಯಾತ್ತವೆ. ಆದ್ದರಿಂದಲೇ ಪ್ರತಿದಿನ ಅದೇ ವೇಳೆಗೆ ಹಸಿವಾಗುವದು. ಮತ್ತು ಅದೇ ವೇಳೆಗೆ ಉಂಡರೆ ಮಾತ್ರ ಊಟ ರುಚಿಸುವದು. ಈ ಕಾರಣದಿಂದಲೇ ಊಟ-ತಿಂಡಿಗಳು ನಿಯಮಿತಕಾಲಕ್ಕೆ ಇರಬೇಕು. ತಾಯ ಉದರದಲ್ಲಿ ಇರಬೇಕಾದರೆ ತನ್ನ ಕಾರ್ಯವನ್ನು ಆರಂಭಿಸಿ ಕೊನೆಯುಸಿರಿನ ವರೆಗೆ ನಂಬಿಕೆಯಿಂದಲೇ ತನ್ನ ಒಡೆಯನ ಸೇವೆಯಲ್ಲಿ ತೊಡಗಿರುವದು ಹೃದಯ ಮಾತ್ರ. ಅದರ ಜೀವಾಣುಗಳು ಪ್ರತಿ ನಿಮಿಷದಲ್ಲಿ ನಡೆಯುವ ಆಕುಂಚನ, ಪ್ರಸರಣವನ್ನು ತಾಳಿಕೊಳ್ಳುವಂತಹ ಅತಿ ಶಕ್ತಿಯುತ ಸ್ನಾಯುಗಳಿಂದ ಮಾಡಿದವುಗಳಾಗಿವೆ.

ನಮ್ಮ ಮಿದುಳು ಮತ್ತು ಅದಕ್ಕೆ ಜೋಡಿಸಿದ ನರಗಳು ಶರೀರದಲ್ಲಿ ಜ್ಞಾನತಂತುವಿನ ಬಲೆಯನ್ನೇ ಸ್ಥಾಪಿಸಿ ತಮ್ಮ ಕಾರ್ಯವನ್ನು ಅತಿ ದಕ್ಷ ರೀತಿಯಿಂದ ನಿರ್ವಹಿಸುವವು. ಇರುವೆ ಕಚ್ಚಲಿ, ಮುಳ್ಳು ಚುಚ್ಚಲಿ, ಹುಲಿಯೇ ಮುಂದೆ ಬರಲಿ, ಸುಗಂಧ ಮೂಗು ಸೇರಲಿ, ಸಂಭೋಗ ನಡೆದಿರಲಿ, ಇವುಗಳ ಎಲ್ಲ ಅನುಭವಗಳನ್ನು ಕೂಡಲೇ ಮಿದುಳಿಗೆ ಮುಟ್ಟಿಸಿ ಅದರ ಆಜ್ಞೆಯನ್ನು ಅಂಗಾಂಗಗಳು ನೆರವೇರಿಸುವವು. ಈ ಕೆಲಸಕ್ಕಾಗಿ ನರಗಳ ಜೀವಾಣುಗಳು ಟೆಲಿಫೋನ ತಂತಿಯಂತೆ ಉದ್ದವಾದಿ ಬೆಳೆಯುವವು. ಜಾಗ್ರತಾವಸ್ಥೆಯಲ್ಲಿ ಮಿದುಳು ನಿರ್ಣಯ ಕೈಕೊಂಡರೆ. ಉಳಿದ ಸಮಯದಲ್ಲಿ ಸ್ವಂತನಿರ್ಣಯ ತೆಗೆದುಕೊಳ್ಳುವ ಶಕ್ತಿ ಕೆಲವು ನರಗಳಿಗಿದೆ. ಅಂತೆಯೇ ಗಾಢ ನಿದ್ರೆಯಲ್ಲಿ ಇದ್ದಾಗಲೂ ಗುಂಗಾಡನ್ನು

ಕೊಲ್ಲಲು ಇಲ್ಲವೇ ಓಡಿಸಲು ಕೈ ಯತ್ನಿಸುತ್ತಿರುತ್ತದೆ. ತಮ್ಮ ಹಿಂದಿನ ಅನುಭವ ದಿಂದ ಇಲ್ಲವೇ ವಿವೇಕದಿಂದ ಈ ನರಗಳು ನಿರ್ಣಯ ತೆಗೆದುಕೊಳ್ಳುವವು. ಡಾಕ್ಟರರು ಹಲ್ಲು ಕೀಳಲು ಪ್ರಾರಂಭಿಸಿದ ಕೂಡಲೇ ನಾವು ವಿರೋಧ ವ್ಯಕ್ತ ಪಡಿಸಿದರೂ ಅವರು ನಮ್ಮ ಹಿತಕ್ಕಾಗಿ ಮಾಡುತ್ತಿದ್ದಾರೆ ಎಂದು ತಿಳಿದಾಗ ನೋವು ಸಹಿಸಿಕೊಂಡು ಕೂತಿರುತ್ತೇವೆ. ಈ ಜ್ಞಾನ-ತಂತುಗಳು ತಮ್ಮ ಕೆಲಸ ನಿಲ್ಲಿಸಿದಾಗ ಆ ಅಂಗಕ್ಕೆ ನೋವು ಇರುವದಿಲ್ಲ. ಆಪರೇಶನ್ನದ ಮೊದಲು ಕೊಟ್ಟ ಕ್ಲೋರೋ ಫಾರ್ಮ ನರಗಳ ಕಾರ್ಯವನ್ನು ನಿಲ್ಲಿಸಿಬಿಡುತ್ತದೆ. ಅರ್ಧಾಂಗವಾಯು-ರೋಗ ದಿಂದ ಬಳಲುವವರಲ್ಲಿ ಶರೀರದ ಕೆಲ ಭಾಗಗಳ ಜ್ಞಾನತಂತುಗಳ ಕಾರ್ಯ ನಿರ್ವಹಣೆ ನಿಲ್ಲಿಸಿದ್ದರಿಂದ ಆ ಅಂಗಗಳಿಗೆ ಯಾವ ಸ್ಪರ್ಶಜ್ಞಾನವೂ ಇರುವದಿಲ್ಲ. ಪ್ರತಿಯೊಂದು ನರ-ಜೀವಾಣುವಿನಲ್ಲಿ ವಿಶಿಷ್ಟ ರೀತಿಯ ರಾಸಾಯನಿಕ ಉತ್ಪತ್ತಿ ಯಾಗುವದರಿಂದ ಅವು ೮-೧೦ ತಾಸು ತಮ್ಮ ಕಾರ್ಯವನ್ನು ಮಾಡಬಲ್ಲವು. ತಿರುಗಿ ೮-೧೦ ತಾಸು ವಿಶ್ರಾಂತಿ ಪಡೆದಾಗ ಇಲ್ಲವೇ ನಿದ್ರಿಸಿದಾಗ ಬಳಸಿದ ರಾಸಾಯನಿಕ ತಿರುಗಿ ತಯಾರಾಗಿ ಮತ್ತೆ ಕೆಲಸಪ್ರಾರಂಭಿಸಲು ಸಾಧ್ಯವಾಗುವದು. ಈ ನರಗಳ ಯೋಗ್ಯತೆ ಮೀರಿ ನಾವು ಮತ್ತೆ ಕೆಲಸ ಪ್ರಾರಂಭಿಸಲು ಸಾಧ್ಯ ವಾಗುವದು. ಈ ನರಗಳ ಯೋಗ್ಯತೆ ಮೀರಿ ನಾವು ದುಡಿಸಿದಾಗ ಆಗಾಗ ಕಾಫಿ ಸೇವಿಸಬೇಕಾಗುತ್ತದೆ, ಸಿಗರೇಟ ಸೇದಬೇಕಾಗುತ್ತದೆ, ಸೆರೆ ಕುಡಿಯಬೇಕಾಗುತ್ತದೆ. ಇವುಗಳ ಆಧಾರದ ಮೇಲೆ ಅವು ದುಡಿದರೂ ತೀವ್ರವಾಗಿ ದುರ್ಬಲವಾಗಿ ಹೋಗುತ್ತವೆ.

ನಿಸರ್ಗದತ್ತವಾದ ಎಣ್ಣೆಯ ಬೆಲೆಯನ್ನು ಅರಬರು ೩೦೦% ಏರಿಸಿದ್ದರಿಂದ ಇಡೀ ವಿಶ್ವವೇ ತತ್ತರಿಸಿಹೋಗಿದೆ. ವಿಶ್ವದಲ್ಲಿ ಇಂದು ಕಲ್ಲೆಣ್ಣೆ ಅಪೂರ್ವವಸ್ತು, ಅದಕ್ಕಾಗಿ ಅಪಾರ ಕರ ತೆರಬೇಕಾಗಿದೆ. ಆದರೆ ನಮ್ಮ ಪ್ರಾಣಗತ ಅತ್ಯಮೂಲ್ಯ ರಕ್ತಕ್ಕಾಗಿ ನಾವು ಒಂದು ಕಾಸೂ ಕರ ಕೊಡಬೇಕಾಗಿಲ್ಲ. ಅದರಲ್ಲಿಯ ಜೀವಾಣು, ಕೆಂಪು ಗೋಲಕಗಳು, ಜಠರದಿಂದ ಆಹಾರವನ್ನು, ಪುಪ್ಪುಸದಿಂದ ಪ್ರಾಣವಾಯು ವನ್ನು ಒಯ್ದು ಪ್ರತಿಯೊಂದು ಅಂಗಕ್ಕೂ ಪೂರೈಸುವಂತೆ, ಅಲ್ಲಿಂದ ನಿರುಪ ಯೋಗಿ ಪದಾರ್ಥಗಳನ್ನು ತಂದು ಮೂತ್ರಪಿಂಡಗಳಿಗೆ, ಆಮ್ಲಜನಕವಾಯುವನ್ನು ಪುಪ್ಪುಸಕ್ಕೆ ಕೊಡುತ್ತದೆ. ಬಿಳಿ ಗೋಲಕಗಳು, ರೋಗಕಾರಿ ಕ್ರಿಮಿಗಳು ಶರೀರದಲ್ಲಿ ಸೇರಿದರೆ, ಅವುಗಳೊಡನೆ ಸತತವಾಗಿ ಹೋರಾಡಿ ಅವುಗಳನ್ನು ಹೊರದೂಡುವ

ತನಕ ವಿಶ್ರಾಂತಿಸುವದಿಲ್ಲ. ಶರೀರದ ಯಾವದೇ ಅವಯವಕ್ಕೆ ಗಾಯವಾಗಲಿ, ಅದರೊಳಗಿಂದ ರಕ್ತ ಹರಿದುಹೋಗದಂತೆ ಅದು ಗಟ್ಟಿಯಾಗಿಬಿಡುತ್ತದೆ. ಭವ್ಯ ಕಟ್ಟಡವನ್ನು ಆಧರಿಸಿನಿಂತ ಉಕ್ಕಿನ ಕಂಬಗಳಂತೆ ಎಲುವುಗಳು ನಮ್ಮ ಶರೀರವನ್ನು ಆಧರಿಸಿ ನಿಂತಿವೆ. ಇವು ಸಜೀವವಾದ್ದರಿಂದ ವ್ಯಕ್ತಿ, ಬೆಳೆದಂತೆ ಅವೂ ಬೆಳೆಯುತ್ತವೆ. ಇನ್ನೊಂದು ದೃಷ್ಟಿಯಿಂದ ನೋಡಿದರ ಎಲುವುಗಳ ನಿರ್ಜೀವವೇ. ಏಕೆಂದರೆ ಇವುಗಳ ಜೀವಾಣುಗಳು ಎಲುವಿನ ಪದಾರ್ಥವನ್ನು ಸಿದ್ಧ ಮಾಡಿ ಅದನ್ನು ತಮ್ಮ ಸುತ್ತಲೂ ಪಸರಿಸಿಕೊಳ್ಳುತ್ತವೆ. ಇದರಂತೆ ಕೂದಲು, ಉಗುರುಗಳು ನಿರ್ಜೀವ ವಸ್ತುಗಳಾದರೂ ಅವನ್ನು ಉತ್ಪಾದಿಸುವ ಜೀವಾಣುಗಳು ಅವುಗಳ ತಳಹದಿಯಲ್ಲಿ ಇರುತ್ತವೆ. ಎಲ್ಲ ಎಲುವುಗಳು ಗಟ್ಟಿಯಾಗಿರದೇ ಕೆಲವು ಮೃದು, ಇನ್ನೂ ಕೆಲವು ಪೊಳ್ಳು. ಮತ್ತೆ ಕೆಲವು ಕಾಗದದಂತಹವೂ ಇರುತ್ತವೆ. ಕೆಲ ಮುರಿದ ಎಲುವುಗಳಿಗೆ ತಂತಾನೇ ಜೋಡಣೆಯಾಗುವ ಅದ್ಭುತ ಶಕ್ತಿಯೂ ಇದೆ. ಕಣ್ಣು, ಮೂಗು, ಕಿವಿ, ನಾಲಿಗೆಗಳು ಮನುಷ್ಯನು ಅನುಕರಿಸಲಾಗದಷ್ಟು, ದಕ್ಷ ಅವಯುವಗಳು. ಇವುಗಳಲ್ಲಿಯ ಒಂದೇ ಒಂದು ಅವಯುವ ಕೆಲಸ ಮಾಡದಿದ್ದರೂ ಮಾನವ ಹೇಳತೀರದಷ್ಟು ಬವಣೆಪಡಬೇಕಾಗುವದು.

ಹೊಸ ತಲೆಮಾರನ್ನು ನಿರ್ಮಿಸುವ ಜನನೇಂದ್ರಿಯಗಳ ಸೋಜಿಗ ಬೇರೆಯೇ. ಬಾಲ್ಯದ ೧೨-೧೪ ವರ್ಷ ಸುಪ್ತವಾಗಿದ್ದು ಅವು ಕಾರ್ಯೋನ್ಮುಖಿಯಾದ ಕೂಡಲೇ ಅಂಗಾಂಗಗಳಲ್ಲಿ ಬದಲಾವಣೆ ಬರುತ್ತದೆ; ಧ್ವನಿ ಗೊಗ್ಗರವಾಗುತ್ತದೆ ವಿರುದ್ಧ ಲಿಂಗಿಗಳೊಡನೆ ಆಕರ್ಷಣೆ ಬೆಳೆಯುತ್ತದೆ. ಜನನೇಂದ್ರಿಯದ ಸೂಕ್ಷ್ಮ ಜೀವಾಣುಗಳು ಪ್ರೇಮ-ಕಾಮಗಳ ಹೆಸರಿನಲ್ಲಿ ಮಹಾನ್ ಕಲಾಕಾರರನ್ನು ನಿರ್ಮಿಸುವಂತೆ ಕೊಲೆಗಾರರನ್ನೂ ಅಸ್ತಿತ್ವದಲ್ಲಿ ತರುತ್ತವೆ. ಈ ಜೀವಾಣುಗಳ ಕಾರ್ಯವಿಧಾನ ಬಲು ಸೋಜಿಗದ್ದು. ಅತಿಕಿಂಚಿತ್ ಪ್ರಮಾಣದಲ್ಲಿ ರಸಾಯನಗಳನ್ನು ಉತ್ಪಾದಿಸಿ ರಕ್ತದ ಮೂಲಕ ಅವುಗಳ ಸಂಚಾರ ಮಾಡಿಸಿ ಕಾಮದೇವನು ತನಗೆ ಮಣಿಯುವಂತೆ ಮಾಡುತ್ತವೆ.

ನಾಲ್ಕು : ಪ್ರಾಣಿ ಮತ್ತು ಪರಿಸರ

ಭೂಮಂಡಲದಲ್ಲಿ ಪ್ರತಿಯೊಂದು ಪ್ರಾಣಿ ತನಗಿರುವ ಸಂತಾನ-ಸಾಮರ್ಥ್ಯವನ್ನು ಬಳಸಿದ್ದರೆ, ಇಲ್ಲವೆ ಅವುಗಳ ಮರಿಗಳೆಲ್ಲ ಬದುಕಿ ಇರುವಂತಾಗಿದ್ದರೆ, ಯಾವ ಪ್ರಾಣಿಗೂ ಹೊಟ್ಟೆತುಂಬ ಆಹಾರ ಸಿಗುತ್ತಿರಲಿಲ್ಲ. ಐದು ವರ್ಷಕ್ಕೊಮ್ಮೆ ಒಂದು ಮರಿಗೆ ಜನ್ಮ ಕೊಡುವ ಆನೆ, ಸಂತತಿನಿರ್ಮಿತಿಯಲ್ಲಿ ಅತಿ ಮಂದಗತಿಯದು ಎಂದು ಪರಿಗಣಿಸಲಾಗಿದೆ. ಹೀಗಿದ್ದರೂ ಆನೆಯ ಎಲ್ಲ ಮರಿಗಳೂ ಸರಿಯಾಗಿ ಬೆಳೆದು ಐದು ವರ್ಷಕ್ಕೆ ಒಂದು ಮರಿಗೆ ಜನ್ಮ ಕೊಡುತ್ತ ಹೋದರೆ ಒಂದೇ ಶತಮಾನದಲ್ಲಿ ಜಗತ್ತೆಲ್ಲ ಆನೆಮಯವಾಗಿ ಹೋಗುತ್ತಿತ್ತು. ಪ್ರತಿಯೊಂದು ಪ್ರಾಣಿಯೂ ತನ್ನ ವಂಶಜರೂ ಬಾಳಬೇಕೆಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಸಂತಾನ ನಿರ್ಮಾಣ ಮಾಡುತ್ತದೆ. ಇದರಿಂದಾಗಿ ಆಹಾರ-ಆಚ್ಛಾದನಗಳಿಗಾಗಿ ಸ್ಪರ್ಧೆ ನಡೆಯುತ್ತದೆ. ಯೋಗ್ಯತೆಯುಳ್ಳ ವರ್ಗ ಬದುಕಿ ಬಾಳಿದರೆ ಆಯೋಗ್ಯ ಗುಂಪು ನಿರ್ನಾಮವಾಗುತ್ತದೆ. ಉದಾಹರಣಾರ್ಥವಾಗಿ ಒಂದು ಪ್ರದೇಶದಲ್ಲಿ ಕುದುರೆ ಒಂಟೆ, ಜಿರಾಫೆಗಳು ಬದುಕುತ್ತವೆ ಎಂದಿಟ್ಟುಕೊಳ್ಳೋಣ, ಈ ಮೂರೂ ಪ್ರಾಣಿ

ಗಳು ಹೆಚ್ಚಿನ ಸಂತಾನ-ನಿರ್ಮಾಣಮಾಡಿದ್ದರಿಂದ ಅಲ್ಲಿಂದ ಆಹಾರ ಕಡಿಮೆ ಯಾಗುತ್ತ ಹೋಗುತ್ತದೆ. ಐದಾರು ಅಡಿ ಎತ್ತರದಲ್ಲಿದ್ದ ಪರ್ಣಗಳು ತೀರಿದ ವೆಂದರೆ ಕುದುರೆಗಳು ಹಸಿವೆಯಿಂದ ಬಳಲಿ ಸಾಯುತ್ತವೆ. ಆದರೆ ಉದ್ದ ಕತ್ತುಳ್ಳ ಒಂಟೆ-ಜಿರಾಫೆಗಳು ಎಂಟು-ಹತ್ತು ಫೂಟು ಎತ್ತರದಲ್ಲಿ ಇದ್ದ ಪರ್ಣಗಳನ್ನು ತಿಂದು ಬದುಕುತ್ತವೆ. ಅಲ್ಲಿಯು ಆಹಾರ ತೀರಲು ಒಂಟೆಗೂ ಉಪವಾಸ ಕಟ್ಟಿಟ್ಟದ್ದೇ. ಆದರೆ ಜಿರಾಫೆ ಹನ್ನೆರಡು ಅಡಿಗೂ ಎತ್ತರವಿದ್ದ ಪರ್ಣ ತಿನುವಷ್ಟು ಉದ್ದಕಾಲು, ಗೋಣು ಪಡೆದಿದ್ದರಿಂದ ಆಹಾರ-ಸ್ಪರ್ಧೆಯಲ್ಲಿ ಕೊನೆಗೆ ಇದೇ ವರ್ಗ ಯಶಸ್ವಿಯಾಗುವವೆಂದು ಒಂದು ಸಿದ್ಧಾಂತ. ಈ ಶತಮಾನದಲ್ಲಿ ಪ್ರಾಣಿ-ಪರಿಸರಗಳ ಸಂಬಂಧ ಕೂಲಂಕಷವಾಗಿ ಅಭ್ಯಸಿಸಿದ್ದರಿಂದ ಮಾನವನು ಅದರ ಸಂಪೂರ್ಣ ಲಾಭ ಪಡೆದುಕೊಳ್ಳಬಹುದಾಗಿದೆ.

ಜಿರಾಫೆ ವರ್ಗದಲ್ಲಿಯೂ ಅತಿಸಂತಾನ ಇರುವದರಿಂದ ಇವುಗಳಲ್ಲಿಯೂ ಸ್ಪರ್ಧೆ ಇದ್ದೇ ಇರುತ್ತವೆ. ಎಲ್ಲ ಜಿರಾಫೆಗಳಿಗೂ ಉದ್ದ ಕಾಲು, ಉದ್ದಗೋಣು ಇರುವದರಿಂದ ಅವುಗಳಲ್ಲಿಯ ಸ್ಪರ್ಧೆ, ಕುದುರೆ-ಒಂಟೆಗಳೊಡನೆ ಇರುವ ಸ್ಪರ್ಧೆ ಗಿಂತ ತೀಕ್ಷ್ಣವಾಗಿರುತ್ತದೆ. ಆದ್ದರಿಂದ ಜಿರಾಫೆಗಳಲ್ಲಿಯೇ ಸ್ವಲ್ಪ ಉದ್ದಕಾಲು, ಗೋಣುಗಳು ಇದ್ದವುಗಳ ವಂಶ ಮುಂದುವರಿಯುವವೆಂದು, ಉಳಿದವುಗಳು ಅಳಿದುಹೋಗುವವೆಂದೂ ನಂಬಲಾಗಿದೆ. ಆದರೆ ಆ ಪಿತೃಗಳ ಸಾಧನೆ ವಂಶ ಪರಂಪರಾಗತವಾಗಿ ಮಕ್ಕಳಿಗೆ ಬರುತ್ತದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಶತಮಾನಗಳಿಂದ ಕನ್ನಡಿಗರು ವೀಳ್ಯಚರ್ವಣದಿಂದ ತುಟಿಗಳನ್ನು ಕೆಂಪು ಮಾಡಿ ಕೊಂಡರೂ ಅವರ ಮಕ್ಕಳು ಕೆಂದುಟಿ ಪಡೆದೇನು ಹುಟ್ಟುವದಿಲ್ಲ. ಅದರಂತೆ ಹಿಂದಿನ ಚೀನೀ ಹೆಂಗಳೆಯರು ಶತಮಾನಗಳಿಂದ ತಮ್ಮ ಕಾಲುಗಳನ್ನು ಕೃತಕ ವಾಗಿ ಕಿರಿದು ಮಾಡಿಕೊಳ್ಳುತ್ತ ಬಂದಿದ್ದರೂ ಅವರ ಮಕ್ಕಳ ಕಾಲು ಕಿರಿದಾಗಲೇ ಇಲ್ಲ! ಇದರಂತೆ ಪ್ರಯೋಗಾಲಯದಲ್ಲಿ ಇಲಿಗಳ ನೂರು ತಲೆಮಾರಿನ ವರೆಗೆ ಬಾಲ ಕಡಿದರೂ ಯಾವ ತಲೆಮಾರಿನ ಇಲಿಗಳೂ ಬಾಲವಿಲ್ಲದೇ ಜನಿಸಲೇ ಇಲ್ಲ. ಬಹಳ ಆಳವಾದ ಸಂಶೋಧನೆಯ ನಂತರ ಇದಕ್ಕೆ ಉತ್ತರ ಕಂಡುಹಿಡಿಯಲಾಗಿದೆ. ಪ್ರತಿಯೊಂದು ಪ್ರಾಣಿಯ ವ್ಯಕ್ತಿತ್ವ ಅದರ ಪ್ರತಿಯೊಂದು ಜೀವಾಣುವಿನಲ್ಲಿ ಇರುವ ಕ್ರೊಮೊಸೋಮುಗಳು ನಿಯಂತ್ರಿಸುವದರಿಂದ ಮತ್ತು ಪ್ರತಿ ಸಾರಿ ಜೀವಾಣು ದ್ವಿಭಾಗವಾಗಬೇಕಾದರೆ ಕ್ರೊಮೊಸೋಮುಗಳೂ ದ್ವಿಭಾಗವಾ

ಬೇಕಾಗುತ್ತದೆ. ಆ ಕಾಲದಲ್ಲಿ ಕೆಲವೊಮ್ಮೆ ಅಪ್ರುಗಳಲ್ಲಿ ಅಸ್ತವ್ಯಸ್ತತೆ ಕಂಡುಬರುತ್ತದೆ. ಕೆಲವು ತುಂಡಾಗುತ್ತವೆ. ಕೆಲವು ಬೇರೆಯುದರೊಡನೆ ಕೂಡಿಕೊಳ್ಳುತ್ತವೆ. ಇನ್ನು ಕೆಲವುಗಳ ತುಂಡು ನಾಶವಾಗಿಹೋಗುತ್ತವೆ. ಈ ಘಟನೆಗಳಿಂದಾಗಿ ಬೆಳೆಯುವ ಮಗು ಪಾಲಕರಿಂದ ತೀರ ಭಿನ್ನವಾಗುತ್ತದೆ. ಈ ಭಿನ್ನತೆಯಿಂದ ಮಗುವಿಗೆ ಲಾಭವಾಗಬಹುದು. ಉದ್ದಾಹರಣಾರ್ಥವಾಗಿ ಮಗು-ಜಿರಾಫೆಯ ಕಾಲಾಗಲಿ, ಗೋಣಾಗಲಿ ಅದರ ತಂದೆ-ತಾಯಿಗಿಂತ ಉದ್ದವಿದ್ದರೆ, ಅದಕ್ಕೆ ಉಳಿದ ಜಿರಾಫೆಗಳಿಗಿಂತ ಆಹಾರ ದೊರಕಿಸುವದು ಸುಲಭವಾಗುವದು. ಈ ಹೊಸ ಬದಲಾವಣೆ ಕ್ರೊಮೊರೆಶೋಮನಲ್ಲಿ ಆದ ಬದಲಾವಣೆಯಿಂದ ಉಂಟಾದ್ದರಿಂದ ವಂಶಪಾರಂಪರಿಕವಾಗಿ, ಬರುವದು. ಆದರೆ ಬಂದ ಹೆಚ್ಚಿನ ಬದಲಾವಣೆಗಳು ಮರಿಯ ಅಳಿಗಾಲವನ್ನೇ ತರುತ್ತವೆ. ಉದ್ದವಾಗುವ ಬದಲಾಗಿ ಅದರ ಕಾಲು ಗೋಣು ದಿಡ್ಡವಾದರೆ ಅದು ಹೇಗೆ ಸ್ಪರ್ಧಿಸಬಲ್ಲದು? ಅದರಂತೆ ಎಲ್ಲ ಇದ್ದೂ ಜನನೇಂದ್ರಿಯಗಳು ಬೆಳೆಯದಿದ್ದರೆ ಆದರ ವಂಶ ಹೇಗೆ ಬೆಳೆದೀತು? ಇಂತಹ ಸಂದರ್ಭಗಳಲ್ಲಿ ಆಯಾ ಪ್ರಾಣಿಗಳ ಅಳಿಗಾಲ ಕಟ್ಟಿಟ್ಟದ್ದೇ. ನಿಸರ್ಗದಲ್ಲಿ ಈ ವ್ಯವಹಾರ ಸತತವಾಗಿ ನಡೆದಿರುವಂತೆ ಅದನ್ನು ಕೃತಕವಾಗಿಯೂ ಮಾಡಲೂ ಬರುತ್ತದೆ. ಅದೆಷ್ಟೋ ರಾಸಾಯನಿಕಗಳ ಪ್ರಭಾವದಲ್ಲಿ ಇಂತಹ ಬದಲಾವಣೆಗಳು ಆಗುತ್ತವೆ. ಅಣು-ಪರಮಾಣು-ಬಾಂಬುಗಳಿಂದ ಹೊರಡುವ ರೇಡಿಯೇಶನ್ ('ಕ್ಷ'ಕಿರಣಗಳಂಥವು)ಕಿರಣಗಳಿಂದ ಅತಿಹೆಚ್ಚು ಇಂತಹ ಬದಲಾವಣೆಗಳಾಗುತ್ತವೆ. ಅವುಗಳಲ್ಲಿ ಸರ್ವಸಾಧಾರಣ ಎಲ್ಲ ಬದಲಾವಣೆಗಳೂ ಅಳಿಗಾಲ ತರುವಂತಹವೇ. ಅಂತೆಯೆ ಹಿರೋಶಿಮ ನಾಗಾಸಾಕಿಯ ಮೇಲೆ ಅಣು-ಬಾಂಬು ಒಗೆದು ಮೂರು ದಶಕ ಕಳೆಯುಬಂದರೂ ಇಂದಿಗೂ ಅಲ್ಲಿಯ ಜನ ಅವುಗಳ ಪರಿಣಾಮದಿಂದ ಬಳಲುವಂತಾಗಿದೆ. ಈ ಕಿರಣಗಳು ದ್ವಿಭಾಗವಾಗುವ ಕ್ರೊಮೊರೆಶೋಮದ ಮೇಲೆಯೆ ಪರಿಣಾಮ ಬೀರುವದರಿಂದ ಬೆಳೆಯುವ ಮಕ್ಕಳಿಗೆ ಆಗುವಷ್ಟು ಹಾನಿ ಪ್ರೌಢರಲ್ಲಿ ಆಗುವದಿಲ್ಲ. ಪ್ರೌಢರಲ್ಲಿ ಸತತವಾಗಿ ದ್ವಿಭಾಗವಾಗುತ್ತಿರುವ ಜನನೇಂದ್ರಿಯದಲ್ಲಿ ಜೀವಾಣುಗಳ ಮೇಲೆ ಆಗುವಷ್ಟು ಹಾನಿಕಾರಕ ಪರಿಣಾಮ ಉಳಿದ ಅಂಗಗಳ ಜೀವಾಣುಗಳ ಮೇಲೆ ಆಗುವದಿಲ್ಲ. ಮಾನವನು ೨೦-೨೫ ವರ್ಷಗಳ ವರೆಗೆ ಸತತವಾಗಿ ಬೆಳೆಯುತ್ತಿರುವದರಿಂದ ಮತ್ತು ಅವನ ಜನನೇಂದ್ರಿಯಗಳು ಮರಣಪರ್ಯಂತ ಕೆಲಸ ಮಾಡುತ್ತಲೇ ಇರುವದರಿಂದ ರೇಡಿಯೇಶನ್

ದಿಂದ ಮಾನವ ಮತ್ತು ಅವನ ಮುಂಬರುವ ವಂಶಜರು ಅತಿ ಹೆಚ್ಚಿನ ಹಾನಿಗೆ ಒಳಗಾಗುತ್ತಾರೆ. ಅದೇ ಕೀಟ-ಕೋಟಿ ಒಮ್ಮೆ ಪ್ರೌಢಾವಸ್ಥೆ ಮುಟ್ಟಿತೆಂದರೆ, ಮುಂದೆ ಬೆಳವಣಿಗೆ ಇಲ್ಲದ್ದರಿಂದ, ಹೆಚ್ಚಿನ ಕೀಟಗಳು ಪ್ರೌಢಾವಸ್ಥೆ ತಲುಪಿದ ಕೂಡಲೇ ಸಂತಾನೋತ್ಪತ್ತಿಯ ಕಾರ್ಯ ಪೂರ್ತಿಗೊಳಿಸಿಕೊಂಡುಬಿಡುವದರಿಂದ, ಅವು ಮಾನವನಷ್ಟು ಹಾನಿಗೆ ಒಳಗಾಗುವದಿಲ್ಲ. ಎಂದಾದರೊಮ್ಮೆ ಮೂರನೆಯ ಜಾಗತಿಕ ಯುದ್ಧದಲ್ಲಿ ನುಕ್ಲಿಯರ್-ಪರಮಾಣು-ರೇಡಿಯೆಶನ್-ಬಾಂಬುಗಳನ್ನು ಬಳಸಿ ಮಾನವಕುಲವೇ ನಾಶವಾದರೆ ಕೀಟ-ಕೋಟಿ ಮಾತ್ರ ಬದುಕಿ ಈ ಭೂಮಿಯನ್ನು ಆಳಬಹುದು. ಚಂದ್ರಲೋಕಕ್ಕೂ ಹೋಗಿ ಬಂದ ಮಾನವನಿಗೆ ಇಂತಹ ಅಳಿಗಾಲ ಬರಲಿಕ್ಕಿಲ್ಲವೆಂದು ನಾವು ನಂಬಬಹುದು. ಆದರೆ ಭೂಮಿಯ ಇತಿಹಾಸ ತೆರೆದು ನೋಡಿದರೆ ಇದು ಅಸಂಭವವೇನೂ ಅಲ್ಲ. ಹಿಂದೊಮ್ಮೆ ದೈತ್ಯದಾಕಾರದ ಪೆಡಂಭೂತಗಳು ಈ ಪೃಥ್ವಿಯನ್ನು ಯಶಸ್ವಿಯಾಗಿ ಆಳಿವೆ. ಅವುಗಳು ಬೃಹದಾಕಾರವಾಗಿದ್ದರೂ ಇಣಚಿಗೆ ಇರುವಷ್ಟು ಮಿದುಳು ಇದ್ದುದರಿಂದ ಮತ್ತು ಜಗತ್ತಿನಲ್ಲಿ ಅನಿರೀಕ್ಷಿತವಾಗಿ ಆದ ಭೌಗೋಲಿಕ ಬದಲಾವಣೆಗೆ ಈ ಪ್ರಾಣಿಗಳು ಹೊಂದಿಕೊಳ್ಳಲಾರದೇ ನಿರ್ನಾಮವಾದವು ಎಂದು ನಂಬಲಾಗಿದೆ.

ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು, ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣ ಮಾಡುತ್ತವೆ. ಈ ಬೀಜಗಳು ಎಲ್ಲ ಭೂ-ಜಲ-ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತರೆ ಮಾತ್ರ ಬೆಳವಣಿಗೆ ಹೊಂದುತ್ತವೆ. ಜಲ-ಸಸ್ಯಗಳು ಜಲದಲ್ಲಿ ಬೆಳೆದಂತೆ ಗಿರಿ ಮತ್ತು ಬಯಲುಪ್ರದೇಶದಲ್ಲಿ ಒಂದೇ ತೆರದ ಬೀಜಗಳು ಹರಡಿಕೊಂಡರೂ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿಗಿಡಗಳೇ ವೃಕ್ಷರಾಜಿಯೆನಿಸಿಕೊಳ್ಳುವವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವದಿಲ್ಲವಾದ್ದರಿಂದ ನಾಶವಾಗುವವು. ಈ ಆಯ್ಕೆಯ ನಿಸರ್ಗಕ್ರಿಯೆ ಪ್ರತಿದಿನ ನಡೆದೇ ಇರುತ್ತದೆ. ಪ್ರಾಣಿಗಳ ಮೇಲೆಯೂ ಈ ಕ್ರಿಯೆ ನಡೆದಿರುತ್ತದೆ. ಅಂಗಹೀನ, ಗುದದ್ವಾರರಹಿತ, ಎರಡು ಮುಗುವಿಗೆ ಒಂದೇ ಶಿರ ಮೊದಲಾದವುಗಳುಳ್ಳ ವಿಕೃತ ಮಕ್ಕಳ ಜನನಗಳ ಬಗ್ಗೆ ನಾವು ಆಗಾಗ ಕೇಳುತ್ತಿರುತ್ತೇವೆ. ಇಂಥವು ಹುಟ್ಟಿ

ಕೆಲ ಸಮಯದ ನಂತರ ಸತ್ತರೆ, ಇನ್ನು ಹಲವು ಗರ್ಭದಲ್ಲಿಯೇ ಸಾಯುವವು. ಇಂತಹ ಮಾರಿಗಳು ಪಶು-ಪಕ್ಷಿಗಳಿಗೂ ಜನಿಸುವವು. ಆದರೆ ಮಾನವನ ವೈಜ್ಞಾನಿಕ ಪ್ರಗತಿಯಿಂದ ಎಷ್ಟೋ ಸಾಯಬಹುದಾದ ಮಕ್ಕಳನ್ನು ಬದುಕಿಸಿ ಕೊಳ್ಳಲು ಸಾಧ್ಯವಾದರೆ, ಉಳಿದ ಪ್ರಾಣಿಗಳಲ್ಲಿ ಸ್ವಲ್ಪವಾದರೂ ಅಂಗವಿಕಲತೆ ಹುಟ್ಟಿನಲ್ಲಿ ಕಂಡುಬಂದರೆ ಅವಕ್ಕೆ ಸಾವು ಕಟ್ಟಿಟ್ಟದ್ದೇ. ಇಂಥ ಕ್ರಿಯೆ ಪೃಥ್ವಿಯು ಹುಟ್ಟಿದಾಗಿನಿಂದಲೇ ನಡೆದುಬಂದಿದೆ, ಕ್ರೊಮೊರೆಶೋಮಗಳಲ್ಲಿ ಆಗುವ ಬದಲಾವಣೆಗೆ ಅನುಗುಣವಾಗಿ ವಿವಿಧ ಪ್ರಾಣಿಗಳು ಹುಟ್ಟಿಕೊಳ್ಳುತ್ತವೆ. ಆದರೆ ಅವು ಪಡೆದುತಂದ ಅಂಗಾಗಗಳ ವರ್ತನೆ, ಅವು ವಾಸಿಸುವ ವಾತಾವರಣಕ್ಕೆ ಸಹಾಯಕಾರಿಯಾಗುವಂತಿದ್ದರೆ ಅವು ಬಾಳಿ ಬದುಕಿ ಅಬಿವೃದ್ಧಿ ಹೊಂದುತ್ತವೆ. ಅದಿಲ್ಲದಿದ್ದರೆ ಅಳಿದು ಹೋಗುತ್ತವೆ. ಅಂದರೆ ಇಂದು ಜೀವಿಸಿದ ಪ್ರಾಣಿಗಳಿಗಿಂತ ಎಷ್ಟೋಪಟ್ಟು ಹೆಚ್ಚು ಪ್ರಾಣಿಗಳು ಅಳಿದುಹೋಗಿವೆ ಎಂಬ ಕಲ್ಪನೆ ಬರುವಂತಿದೆ. ನಿಸರ್ಗದ ಈ ಆಯ್ಕೆಯ ಕ್ರಮ ಇಂದಿಗೂ ಹೇಗೆ ನಡೆದಿದೆ ಎಂದು ನೋಡ ಬಹುದು. ಆಫ್ರಿಕಾ ಖಂಡದಲ್ಲಿ ನಿದ್ರಾ-ರೋಗ ಮತ್ತು ಹಳದಿ-ಜ್ವರ ಇವು ಮಾನವನಿಗೆಮೃತ್ಯುಪ್ರಾಯವಾಗಿ ಪರಿಣಮಿಸಿವೆ. ಹೆಚ್ಚಿನವರು ಇವಕ್ಕೆ ತುತ್ತಾದರೆ ಕೆಲವರಿಗೆ ಈ ರೋಗ ನಾಟುವದೇ ಇಲ್ಲ. ಇಂಥವರು ಬಾಳಿ ಬದುಕುತ್ತಾರೆ. ಉಳಿದವರು ನಶಿಸುತ್ತಾರೆ. ಈ ಗುಣಧರ್ಮ ಕೀಟಗಳಲ್ಲಿ ಇನ್ನೂ ಹೆಚ್ಚು ಸ್ಫುಟ ವಾಗಿ ಕಾಣುತ್ತದೆ. ವಿಷಕಾರಿ-ಕೀಟನಾಶಕಗಳಿಂದ ನೊಣಗಳನ್ನು ನಿರ್ನಾಮ ಮಾಡಲು ಹೆಚ್ಚೆಚ್ಚು ಬಳಸಲಾಯಿತು. ಅದರಿಂದ ಹೆಚ್ಚಿನ ನೊಣಗಳು ಸತ್ತ ವೇನೋ ನಿಜ. ಆದರೆ ಹಲವುಗಳಿಗೆ ಈ ಬ್ರಹ್ಮಾಸ್ತ್ರವೂ ನಾಟುತ್ತಲೇ ಇರಲಿಲ್ಲ. ಒಂದೇ ತರದ ಅನ್ನ-ಆಶ್ರಯಕ್ಕಾಗಿ ಕಾದುವ ಪ್ರತಿಸ್ಪರ್ಧಿಗಳು ನಾಶಹೊಂದಿದ್ದ ರಿಂದ ಬದುಕಿದ್ದ ನೊಣಗಳು ಅಭಿವೃದ್ಧಿಹೊಂದುತ್ತ ಇಂದಿನ ನೊಣಗಳು ಕೀಟ ನಾಶಕಗಳಿಗೆ ಬೆದರದ ಪರಿಸ್ಥಿತಿ ಉತ್ಪನ್ನವಾಗಿದೆ. ಇದರಂತೆ ಮಲೇರಿಯಾ ಜ್ವರ ನಾಶಮಾಡುವ ಉದ್ದೇಶದಿಂದ ಭಾರತಸರಕಾರ ಕೋಟಿಗಟ್ಟಲೆ ಹಣ ಸೂರೆಮಾಡಿ ಕೀಟನಾಶಕಗಳನ್ನು ಸಿಂಪಡಿಸಿತು. ಇದರಿಂದಾಗಿ ಬಹುಸಂಖ್ಯಾಕ ಗುಂಗಾಡುಗಳು ನಾಶಹೊಂದಿ ಮಲೇರಿಯ ನಿರ್ನಾಮವಾಯಿತು ಎಂದು ಸರಕಾರ, ಜನತೆ ನೆಮ್ಮದಿ ಪಡೆಯುವಂತೆ ಆಯಿತು. ಆದರೆ ಮಾನವನು ಮೈಮರೆತು ಕುಳಿತಾಗ ಉಳಿದು ಕೊಂಡಿದ್ದ ಕೆಲವೇ ಗುಂಗಾಡುಗಳು ತಮ್ಮ ಸಂಖ್ಯೆ ಬೆಳೆಸಲು ಉದ್ಯುಕ್ತವಾಗಿ

ಇಂದು ಮಲೇರಿಯ ತಿರುಗಿ ಮಾನವನಿಗೆ ಹೆದರಿಕೆ ಹುಟ್ಟುವ ಪ್ರಮಾಣದಲ್ಲಿ ಬೆಳೆದುಕೊಂಡಿದೆ. ಇವುಗಳ ಮೇಲೆ ಕೀಟನಾಶಕ ಯಾವದೂ ನಾಟುವದಿಲ್ಲ.

ಮಾನವನು ತನ್ನ ಸ್ವಾರ್ಥಕ್ಕಾಗಿ ಎಷ್ಟೋ ಪ್ರಾಣಿಗಳನ್ನು ನಿರ್ನಾಮ ಮಾಡಿದ್ದಾನೆ, ಮಾಡುತ್ತಿದ್ದಾನೆ. ಜೀವಿತ ಪ್ರಾಣಿಗಳಲ್ಲಿಯೇ ದೊಡ್ಡದು ಎನಿಸಿಕೊಂಡ, ದೇಹ-ಆಕಾರ ದೊಡ್ಡದಿದ್ದರೂ ಅತಿ ಸಣ್ಣದಾಗಿರುವ ಸಸ್ಯ-ಆಹಾರನ್ನೇ ಭಕ್ಷಿಸುವ ಮಾನವಗೆ ಯಾವರೀತಿಯಿಂದಲೂ ಕೇಡುಮಾಡದ ತಿಮಿಂಗಲುಗಳನ್ನು ಅದರ ಕೊಬ್ಬಿಗಾಗಿ ಬೇಟೆಯಾಡಿ ಇಂದು ಅದರ ಜಾತಿಯೇ ನಿರ್ನಾಮವಾಗುವಷ್ಟು ಕಡಿಮೆ ತಿಮಿಂಗಲುಗಳು ಉಳಿದಿವೆ. ಮೊಸಳೆಗಳ ಚರ್ಮಕ್ಕೆ ಪಾಶ್ಚಾತ್ಯ ಸ್ತ್ರೀ ಮನಸೋತಿದ್ದಾಳೆ ಎಂಬ ಒಂದೇ ಒಂದು ಕಾರಣಕ್ಕಾಗಿ ಮೊಸಳೆಗಳನ್ನು ಅತಿಯಾಗಿ ಬೇಟೆಯಾಡಿ ಇಂದು ಕರ್ನಾಟಕದ ಬನ್ನೇರು ಘಟ್ಟದಲ್ಲಿ ಮೊಸಳೆಗಳಿಗಾಗಿಯೇ ಮಾಡಿದ ಆಲಯದಲ್ಲಿ ಹೆಚ್ಚಿನ ದಕ್ಷತೆಯಿಂದ ಪಾಲನೆ-ಪೋಷಣೆ ಮಾಡುವ ಪ್ರಸಂಗ ಬರಲಿಲ್ಲವೇ? ಅದರಂತೆ ಹುಲಿ, ಸಿಂಹ, ಚಿರತೆಗಳ ಮೈದೊಗಲು, ಅಪಾರ ಧನ ತರುವದರಿಂದ ಅವುಗಳನ್ನು ಹೆಚ್ಚಾಗಿ ಬೇಟೆಯಾಡಿದ್ದರಿಂದ ಗಿರಿನಾರದ ಅರಣ್ಯವನ್ನು ವನರಾಜನಿಗೆ ಮೀಸಲಿಟ್ಟು ಹುಲಿರಾಯನ ಸಂರಕ್ಷಣೆಗೆ ನಾಲ್ಕುಕೋಟಿ ರೂಪಾಯಿಗಳನ್ನು ಮಂಜೂರ ಮಾಡಲಿಲ್ಲವೇ? ಹಾವುಗಳಂತೂ ನಮ್ಮ ಆಜನ್ಮ ವೈರಿಗಳಂತೆ ಅವನ್ನು ಭಾವಿಸಿ ಸಿಕ್ಕಲ್ಲಿ ಕೊಂದು ಕೆಲವುಜಾತಿಯ ಹಾವುಗಳು ಇಂದು ನಶಿಸಿಹೋದದ್ದರಿಂದ ವಿಷಕಾರಿ ಹಾವುಗಳನ್ನು ಸಾಕುವ ಕೇಂದ್ರಗಳನ್ನು ಮುಂಬಯಿ ಮತ್ತು ಮದ್ರಾಸಿನಲ್ಲಿ ಪ್ರಾರಂಭಿಸುವ ಪ್ರಸಂಗ ಬಂದಿತು. ಹೊಲಗಳಲ್ಲಿಯ ಹಾವುಗಳು ಇಲಿಗಳನ್ನು ತಿಂದು ಜೀವಿಸುತ್ತಿದ್ದವು. ಅವುಗಳನ್ನು ನಾಶಮಾಡಿದ್ದರಿಂವ ವಿನಾಯಕ-ವಾಹನಗಳು ಅತಿಯಾಗಿ ಬೆಳೆದು ಗುಲಬರ್ಗಾ ಜಿಲ್ಲೆಯಲ್ಲಿ ಮಾನವನ ಆಹಾರವನ್ನೆ ತಾವು ಭಕ್ಷಿಸಿ ಅವನಿಗೆ ಹೌಹಾರುವಂತೆ ಮಾಡಿದವು. ಟ್ರಂವ್, ಟ್ರಂವ್ ಎಂದು ಹಾಡಿ ಮಳೆರಾಯನನ್ನು ಬರಮಾಡಿಕೊಳ್ಳುವ ಕಪ್ಪೆಯರಸನ ಮೇಲೆ ಮಾನವನು ಕೊಲೆಗಡಕನ ಕತ್ತಿಯನ್ನೆತ್ತಿದ್ದಾನೆ. ಅವುಗಳ ಕಾಲುಗಳಿಗೆ ಪಾಶ್ಚಾತ್ಯದೇಶದಲ್ಲಿ ಬೇಡಿಕೆ ಇದ್ದುದರಿಂದ ಅವುಗಳನ್ನು ಸಿಕ್ಕಲ್ಲಿ ಹಿಡಿದು ಕೊಂದು ತನ್ನ ಕಿಸೆಯನ್ನು ತುಂಬಿಕೊಳ್ಳುತ್ತಿದ್ದಾನೆ. ಮಾನವನು ಬೆಳೆಸಿದ ಆಹಾರ-ಧಾನ್ಯದಲ್ಲಿ ೧೦ರಿಂದ ೧೫% ವರೆಗೆ ಬೆಳೆಗಳನ್ನು ಕ್ರಿಮಿಕೀಟಗಳು ನಾಶಮಾಡುತ್ತವೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ಒಂದೇ

ಒಂದು ಕಪ್ಪೆ ಒಂದು ದಿನದಲ್ಲಿ ೧೦೦-೨೦೦ರ ತನಕ ಕ್ರಿಮಿ-ಕೀಟಕಗಳನ್ನು ಭಕ್ಷಿಸಿ ನಮ್ಮ ಎಷ್ಟೋ ಆಹಾರ-ಧಾನ್ಯಗಳನ್ನು ಸಂರಕ್ಷಿಸುತ್ತದೆ. ಈಗ ಅವುಗಳ ಹತ್ಯೆಯನ್ನು ಪ್ರಾರಂಭಿಸಿದರೆ ಅನ್ನ ದೇವರು ಹೇಗ ನಮ್ಮನ್ನು ಮೆಚ್ಚಿಯಾನು?

ಮಾನವನು ಹೆಚ್ಚೆಚ್ಚು ಸಾರ್ಥಕನಾದಂತೆ ಅವನು ಹೆಚ್ಚೆಚ್ಚು ತನ್ನ ಪರಿಸರದ ಪ್ರಾಣಿಗಳ ಹತ್ಯಾಕಾಂಡ ಮಾಡುತ್ತಾನೆ. ಪ್ರತಿಯೊಂದು ಪಶು-ಪಕ್ಷಿಗೂ ವಿಶಿಷ್ಟ ಪರಿಸರ ಬೇಕಾಗುತ್ತದೆ. ಮಾನವನು ಈ ಕಾನೂನಿಗೆ ಹೊರತಾಗಿಲ್ಲ. ಫಲವತ್ತಾದ ಗಂಗೆಯ ಕೊಳ್ಳದಲ್ಲಿ ಇದ್ದಷ್ಟು ಜನ ರಾಜಸ್ಥಾನದ ಮರುಭೂಮಿಯಲ್ಲಿ ಇದ್ದಾರೆಯೇ? ರಾಜಸ್ಥಾನದಲ್ಲಿ ಇದ್ದಷ್ಟು ಜನ ಹಿಮಾಲಯದ ಪರ್ವತ ಪ್ರದೇಶದಲ್ಲಿ ಇದ್ದಾರೆಯೇ? ಮಾನವನ ಪರಿಸರದಲ್ಲಿ ಸ್ವಲ್ಪವೂ ಬದಲಾವಣೆ ಬಂದ ಕೂಡಲೇ ಅಲ್ಲಿ ಬೀಡು ಬಿಟ್ಟ ಪ್ರಾಣಿ-ಜೀವನದಲ್ಲಿ ಭಾರಿ ಕೋಲಾಹಲ ಎದ್ದು ಬಿಡುತ್ತದೆ. ಬಹುಸಂಖ್ಯಾತ ಪ್ರಾಣಿಗಳು ಕಾಲಿಗೆ ಬುದ್ಧಿ ಹೇಳಿದರೂ ಸಾವು-ನೋವುಗಳು ಅಪಾರವಾದಿಬಿಡುತ್ತವೆ. ಒಂದು ದಟ್ಟವಾದ ಕಾಡನ್ನು ಮಾನವನು ಕಡಿದನೆಂದು ಇಟ್ಟುಕೊಳ್ಳೋಣ. ಅಲ್ಲಿದ್ದ ಹಕ್ಕಿಗಳು ಹಾರಿ ಬೇರೆ ಠಾಣ ಹುಡುಕಿಕೊಳ್ಳಬೇಕಾಗುತ್ತದೆ. ಮೇವು ಇಲ್ಲದ್ದರಿಂದ ಜಿಗರೆಗಳು ಮಾಯವಾಗುತ್ತವೆ. ಜಿಗರೆಗಳನ್ನು ಬೇಟೆಯಾಡಿ ಜೀವಿಸಿದ್ದ ಹುಲಿ, ಚಿರತೆ, ಸಿಂಹಗಳೂ ತೊಲಗಬೇಕಾಗುತ್ತದೆ. ಅವಿತುಕೊಳ್ಳಲು ಮರೆ ಇಲ್ಲದ್ದರಿಂದ ತೋಳ-ಕರಡಿಗಳು ಓಡಿ ಹೋಗುತ್ತವೆ. ಹಣ್ಣು ಹಂಪಲಗಳು ಸಿಗದ್ದರಿಂದ ಇಣಚಿ-ಕಣ್ಣು ಕಪ್ಪಡಿಗಳು ಪ್ರಯಾಣ ಬೆಳೆಸುತ್ತವೆ. ಬೋಳುಮಾಡಿದ ಕಾಡಿನಲ್ಲಿ ವಾಸಿಸಿ ಏನು ಪ್ರಯೋಜನ ಎಂದು ಇಲಿಗಳೂ ಹೊರಡುತ್ತವೆ. ಇಲಿಗಳನ್ನು ನಂಬಿದ್ದ ಹಾವೂ ಹಿಂಬಾಲಿಸುತ್ತವೆ. ಕೊರೆಯುವ ಚಳಿ, ಸುಡುವ ಬಿಸಿಲು, ಹರಿಯುವ ನೀರಿಗೆ ನೆಲದೊಳಗಿನ ಪ್ರಾಣಿಗಳು ಸಾವಿಗೀಡಾಗುತ್ತವೆ, ಇಂತಹ ಭೂಮಿಯನ್ನು ಹೊಲಗಳಿಗೆ ಬಳಸಿದರೆ ಅಲ್ಲಿ ಹೊಸ ಪ್ರಾಣಿಗಳು ಬೀಡುಬಿಡುವವು. ಇದೇ ಪ್ರದೇಶದಲ್ಲಿ ಭತ್ತ ಇಲ್ಲವೇ ಕಬ್ಬು ಬೆಳೆಸಿದರೆ ಆ ಸಸಿಗಳ ಪರ್ಣ, ಬೊಡ್ಡೆ, ಬೇರುಗಳ ಮೇಲೆ ಜೀವಿಸುವ ಕೀಟಗಳಿಗೆ ಆಮಂತ್ರಣ ಕೊಟ್ಟಂತೆ ಬರುವವು. ಮಾನವಕೋಟಗಾರಿ ವಿಪುಲವಾಗಿ ಬೆಳೆಯಲು ಯತ್ನಿಸಿದ ಆಹಾರವೆಲ್ಲ ಕೀಟ-ಕೋಟಿಗೆ ಸುಲಭವಾಗಿ ಕೈಗೆ ಎಟುಕುತ್ತಿರುವಂತೆ ಇರುವದರಿಂದ ಅದರ ಸಂತತಿ ತೀವ್ರ ಅಭಿವೃದ್ಧಿಹೊಂದಿ ಮಾನವನಿಗೆ ಸವಾಲಾಗಿ ಪರಿಣಮಿಸುತ್ತವೆ. ಇದರಂತೆ ಮಾನವನು ವಿಮಾನ, ರೇಲ್ವೆ,

ಮೋಟಾರ-ನಿಲ್ದಾಣ ಕಟ್ಟುವದರಿಂದ, ಹೆದ್ದಾರಿಗಳನ್ನು ಮಾಡುವದರಿಂದ ಬಹಳ ಕಾಲದಿಂದ ಇದ್ದ ಸರೋವರ, ಕೆರೆ-ಹೊಂಡಗಳನ್ನು ಬೇರೆಯೇ ಕೆಲಸಕ್ಕೆ ಬಳಸುವದರಿಂದ, ಕಾರಖಾನೆ-ಊರುಗಳನ್ನು ಬೆಳೆಸುವದಕ್ಕೆ ಕಾಡು-ಗಿಡ-ಗಂಟೆಗಳನ್ನು ಕಡಿಯುವದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬುದು ಜನ-ಸಾಮಾನ್ಯರಿಗೆ ಅರಿವಾಗುವದೇ ಇಲ್ಲ. ಆದ್ದರಿದ ಅಧಿಕಾರದಲ್ಲಿ ಇದ್ದವರು, ಅದಕ್ಕಿಂತ ಹೆಚ್ಚಾಗಿ ನಾಳೆಯ ಪೀಳಿಗೆಗಳಿಗೆ ಇಂದೇ ಯೋಜನೆ ತಯಾರಿಸುವ ವಿಜ್ಞಾನಿಗಳು, ನಿಸರ್ಗದ ಆಗು-ಹೋಗುಗಳನ್ನು ವಿವರವಾಗಿ ಅಭ್ಯಸಿಸಿ ಮಾನವನ ಚಟುವಟಿಕೆ ಮಾನವನಿಗೇ ಕಂಟಕವಾಗದಂತೆ ಮುನ್ನೆಚ್ಚರಿಕೆ ವಹಿಸಿ ವಿಧಾಯಕವಾಗಿ ಕಾರ್ಯಕ್ರಮಗಳನ್ನು ಕೈಕೊಂಡರೆ ಮಾತ್ರ ಈ ಹಿಂದೆ ಮಾಡಿದ ತಪ್ಪುಗಳೆಲ್ಲ ಮುಂದೆಯೂ ಆಗುವದು ನಿಂತೀತು.

ಐದು : ಸಹಜೀವನ

ವಧು-ವರರು ಬೆಳೆದುಬಂದ ರೀತಿ ರೀವಾಜು, ಸಂಸ್ಕೃತಿಗಳು ತೀರ ಭಿನ್ನ ವಿದ್ದರೂ ಯಶಸ್ವೀ ವೈವಾಹಿಕ-ಜೀವನ ನಡೆಯಬೇಕಿದ್ದರೆ ಇಬ್ಬರೂ ಹೊಂದಿ ಕೊಳ್ಳುವದು ಅತ್ಯವಶ್ಯವಿದ್ದಂತೆ ನಿಸರ್ಗದಲ್ಲಿ ಭಿನ್ನ ಭಿನ್ನ ವರ್ಗದ ಪ್ರಾಣಿಗಳೂ ಹೊಂದಿಕೊಳ್ಳಬೇಕಾಗುವದು. ಅವಿಶ್ವಾಸ. ಅಸಹಕಾರ ಜಗಳಗಳು ಪತಿ-ಪತ್ನಿ ಯರನ್ನು ದುಃಖಿತವಮಾಡುವಂತೆ ಪ್ರಾಣಿವರ್ಗದಲ್ಲಿಯೂ ಸಹಕಾರವಿಲ್ಲದಿದ್ದರೆ ಅವುಗಳ ಜೀವನವೇ ಆಪತ್ತಿಗೆ ಗುರಿಯಾಗುತ್ತದೆ. ಜಗತ್ತಿನ ಮಾನವರೆಲ್ಲ ಬರೇ ಅನ್ನವನ್ನೇ ಊಟಮಾಡುತ್ತಿದ್ದರೆ ನಮ್ಮ ಆಹಾರ-ಸಮಸ್ಯೆ ಹೇಗಿರುತ್ತಿತ್ತು ಎಂದು ಊಹಿಸಲು ಅಸಾಧ್ಯವಾದಂತೆ, ಪ್ರಾಣಿ-ಕೋಟಿ ಒಂದೇ ತರದ ಆಹಾರ, ಆಚ್ಛಾದನಕ್ಕಾಗಿ ಹೆಣಗಿದ್ದರೆ ಈ ಜಗತ್ತು ಹೇಗಿರುತ್ತಿತ್ತು ಎಂದು ಕಲ್ಪಿಸಲೂ ಅಸಾಧ್ಯವಾಗಿದೆ. ಮಾನವರು ವಿವಿಧ ಪ್ರದೇಶಗಳಲ್ಲಿ ವಿಪುಲವಾಗಿ ಬೆಳೆಯುವ ಅಕ್ಕಿ, ಗೋಧಿ, ರಾಗಿ, ಜೋಳ, ಸಜ್ಜೆ ಮೀನು ಮಾಂಸ ಸೇವಿಸಿ ಹಸಿವು ನೀಗಿಸಿ ಕೊಳ್ಳುವಂತೆ, ಪ್ರಾಣಿಗಳು ಜಗತ್ತಿನಲ್ಲಿ ಇರುವ ಎಲ್ಲ ತರದ ಆಹಾರಗಳಿಗೆ ಹೊಂದಿ ಕೊಂಡು ಸಹಜೀವನ ನಡೆಸಿವೆ.

ಸಸ್ಯಗಳಿಗೆ ಜಡವಸ್ತುಗಳಿಂದ ತಮ್ಮ ಆಹಾರವನ್ನು ತಾವೇ ಮಾಡಿಕೊಳ್ಳುವ ಅದ್ಭುತ ಶಕ್ತಿ ಇದೆ. ಪ್ರಾಣಿಗಳಿಗೆ ಅದು ಇಲ್ಲದ್ದರಿಂದ ಒಂದು ದೃಷ್ಟಿಯಲ್ಲಿ ಎಲ್ಲ ಪ್ರಾಣಿಗಳೂ ಪರಪುಷ್ಟವೇ ಆಗಿವೆ. ಮಿಂಚು ನಿಸರ್ಗದ ವಿದ್ಯುತ್ತು. ಅದರ ಸಾನ್ನಿಧ್ಯದಿಂದ ವಾತಾವರಣದಲ್ಲಿ ಇದ್ದ ನಾಯ್‌ಟ್ರೋಜನ್, ಸಸ್ಯಗಳು ಸುಲಭವಾಗಿ ಹೀರಿಕೊಳ್ಳಬಹುದಾದ ನ್ಯಾಟ್ರ್ಯಾಯಿಡ್ ಆಗುತ್ತದೆ. ಪರ್ಣಗಳಲ್ಲಿ ಇರುವ ಕ್ಲೋರೋಫಿಲ್‌ದಲ್ಲಿ ಹವೆಯಿಂದ ಹೀರಿಕೊಂಡ ಅಂಗಾರಾಮ್ಲ-ವಾಯು, ಸೂರ್ಯಪ್ರಕಾಶದಲ್ಲಿ ಪಿಷ್ಟ-ಪದಾರ್ಥಕ್ಕೆ ರೂಪಾಂತರ ಹೊಂದುತ್ತದೆ. ಮೊಲ, ಇಲಿ, ಇಣಚಿಗಳಂತಹ ಸಸ್ಯಾಹಾರಿ ಪ್ರಾಣಿಗಳು ಅವನ್ನೇ ತಿಂದು ಬದುಕುತ್ತವೆ. ಮುಂಗಲಿ, ರಣಹದ್ದುಗಳಂತಹ ಮಾಂಸಾಹಾರಿ ಪ್ರಾಣಿಗಳು ಈ ಶಾಕಾಹಾರಿ ವರ್ಗವನ್ನು ಆಹಾರಕ್ಕಾಗಿ ಆರಿಸಿಕೊಳ್ಳುತ್ತವೆ. ಹುಲಿ, ಸಿಂಹ, ಚಿರತೆಗಳಂತಹ ಮಾಂಸಾಹಾರಿ ಪ್ರಾಣಿಗಳು ಸಣ್ಣ ಜಾತಿಯ ಮಾಂಸಾಹಾರಿ ವರ್ಗದ ಮೇಲೆ ಜೀವಿಸುತ್ತವೆ. ಈ ಕ್ರೂರ ಮಾಂಸಾಹಾರಿಗಳು ಸತ್ತು ಕೊಳೆತಾಗ ಸಸ್ಯಗಳಿಗೆ ಆಹಾರವಾಗಿ ಆಹಾರಚಕ್ರ ತಿರುಗಿ ಪ್ರಾರಂಭವಾಗುವದು. ಒಂದು ಚಿಕ್ಕ ಮಡುವಿನಲ್ಲಿ ಇಂತಹವೇ ಆಹಾರಚಕ್ರ ಗುರುತಿಸಬಹುದಾಗಿದೆ. ಕೊಳೆಯುವ ಕಸ-ಕಡ್ಡಿ, ಪರ್ಣಗಳು, ಜಲ-ಸಸ್ಯಗಳಿಗೆ ಆಹಾರ ಒದಗಿಸುವವು. ಸಸ್ಯಾಹಾರಿ ಮೀನುಗಳು ಅವುಗಳನ್ನು ತಿಂದರೆ, ಮಾಂಸಾಹಾರಿ ಮೀನು ಸಸ್ಯಾಹಾರಿಗಳನ್ನು ನುಂಗುವವು. ದೊಡ್ಡ ಮೀನು ಈ ಸಣ್ಣ ಮಾಂಸಾಹಾರಿಯನ್ನು ಭಕ್ಷಿಸುವದು. ಬಕಪಕ್ಷಿ ಆ ದೊಡ್ಡ ಮೀನನ್ನೆ ತಿನ್ನಬಲ್ಲದು. ಬಕಪಕ್ಷಿ ಸತ್ತಾಗ ಭೂಮಿಗೆ ~~ಭೂಮಿಗೆ~~ ಕ್ಷಾರಗಳು ದೊರೆಯುವವು ತಿರುಗಿ

ಎಲ್ಲ ಸಸ್ಯಾಹಾರಿಗಳು ಒಂದೇ ತರದ ಆಹಾರ ಸೇವಿಸುವದರಿಂದ ಅವುಗಳಲ್ಲಿ ಅನೇಕ ಪ್ರಭೇದಗಳನ್ನು ಕಲ್ಪಿಸಬಹುದು. ಮಣ್ಣಿನಲ್ಲಿ ಇದ್ದು ಬೇರುಗಳನ್ನು ತಿಂದು ಕೆಲವು ಜೀವಿಸಿದರೆ, ಬೊಡ್ಡೆಯನ್ನೆ ಇನ್ನೂ ಕೆಲವು ಜೀರ್ಣಿಸಿಕೊಳ್ಳುವವು. ಒರಲೆ, ಇರುವೆಗಳಂತಹ ಸಣ್ಣಪ್ರಾಣಿಗಳು ಕೊರಡಿನಂತಹ ಗಟ್ಟಿ ಭಾಗವನ್ನು ಆಹಾರವನ್ನಾಗಿ ಸೇವಿಸುವವು. ಬರಿಯ ತೊಗಟೆಯನ್ನೆ ತಿಂದು ಇರುವ ಕೀಟಗಳಿವೆ. ಮೊಲ, ಚಿಗರೆ, ದನ-ಕರು, ಆನೆಗಳು ಪರ್ಣಗಳನ್ನು ತಿಂದರೆ ಇಣಚಿಗಳು ಹಣ್ಣು ಹಂಪಲ ತಿನ್ನುತ್ತವೆ. ನವಿಲು ಚಿಗರನ್ನಷ್ಟೇ ಭಕ್ಷಿಸಿದರೆ ಬೆಳೆದ ಪರ್ಣಗಳನ್ನಷ್ಟೇ ಸೇವಿಸುವ ಪ್ರಾಣಿಗಳಿವೆ. ಹೂವು, ಪರಾಗ, ಮಧು, ಬೀಜಗಳನ್ನೇ ಅವಲಂಬಿಸಿದ

ಪ್ರಾಣಿಗಳಿವೆ. ಇದರಂತೆ ಮಾಂಸಾಹಾರಿಗಳಲ್ಲಿ ಅನೇಕ ಪ್ರಭೇದಗಳುಂಟು. ಗುಂಗಾಡು, ತಗಣಿ, ಹೇನು ಜಿರಳೆಗಳಂತಹವು ಬರೇ ರಕ್ತದ ಮೇಲೆ ಅವಲಂಬಿಸಿದರೆ ವಿವಿಧ ಪರಪುಷ್ಟ ಜೀವಿಗಳು ಬೇರೆ ಬೇರೆ ಅಂಗಗಳ ಮೇಲೆ ಜೀವಿಸಬಲ್ಲವು. ಜಂತುಗಳು ಕರುಳಿನಲ್ಲಿ, ಸಪಾಟ ಜಂತುಗಳು ಯಕೃತ್ತಿನಲ್ಲಿ ಮಾತ್ರ ಇರಬಲ್ಲವು. ಮಾಂಸಾಹಾರಿಗಳಲ್ಲಿ ಕೆಲವು ಸತ್ತ ಪ್ರಾಣಿಗಳನ್ನು ಭಕ್ಷಿಸಿದರೆ ಕ್ರೂರ ಪ್ರಾಣಿಗಳು ಬೇಟೆಯಾಡಿಯೇ ಉದರಪೋಷಣೆ ಮಾಡಿಕೊಳ್ಳುವವು. ಕೆಲವು ಮಾಂಸ ಮಾತ್ರ ತಿಂದರೆ ಇನ್ನೂ ಕೆಲವು ಎಲವುಗಳನ್ನೇ ಜಗಿದು ನುಂಗುವವು. ಹೀಗೆ ಪ್ರತಿಯೊಂದು ಪ್ರಾಣಿಯೂ ತನ್ನ ಆಹಾರಸಮಸ್ಯೆಯನ್ನು ತನ್ನದೇ ರೀತಿಯಲ್ಲಿ ಬಿಡಿಸಿಕೊಂಡಿದೆ.

ಪ್ರಾಣಿ ಜೀವಮಾನದಲ್ಲಿ ತನ್ನ ಮೈಭಾರಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಆಹಾರ ಸೇವಿಸಬೇಕಾಗುವದರಿಂದ ಪ್ರತಿಯೊಂದು ಸ್ತರದ ಜೀವಿಗಳಿಗೂ ಸಾಕಾಗುವಷ್ಟು ಆಹಾರ ಸಿಗುವಂತೆ ಅವುಗಳ ಸಂಖ್ಯೆಯನ್ನು ನಿಯಂತ್ರಿಸಬೇಕಾಗುತ್ತದೆ. ಉದಾಹರಣೆಗೆ ನೂರು ಮೊಲಗಳು ತಮ್ಮ ಜೀವಮಾನದಲ್ಲಿ ಸಾವಿರ ಗಿಡಗಂಟಿಗಳ ಎಲೆಗಳನ್ನು ಭಕ್ಷಿಸುತ್ತವೆ ಎಂದು ಇಟ್ಟುಕೊಳ್ಳೋಣ. ಈ ನೂರು ಮೊಲಗಳನ್ನು ಅವಲಂಬಿಸಿ ಕೇವಲ ಹತ್ತು ಹೆಬ್ಬಾವುಗಳು ಜೀವಿಸಬಲ್ಲವು. ಈ ಹತ್ತು ಹೆಬ್ಬಾವುಗಳು ಕೇವಲ ಒಂದೇ ಕ್ರೂರ ಪ್ರಾಣಿಗೆ ಅನ್ನವಾಗಬಹುದು. ಅಂದರೆ ಸಾವಿರ ಗಿಡಗಂಟಿ, ನೂರು ಮೊಲ, ಹತ್ತು ಹೆಬ್ಬಾವುಗಳು ಈ ಕ್ರೂರ ಪ್ರಾಣಿಗೆ ಆಹಾರವಾಗುವವು ಎಂದಂತಾಯಿತು. ಇಂತಹ ಸ್ತರಗಳನ್ನು ಎಲ್ಲ ಕಡೆಯೂ ಗುರುತಿಸಬಹುದು. ಈ ಸಂಖ್ಯೆಯ ಸ್ತರದಂತೆ ಭಾರದ ಸ್ತರವನ್ನೂ ಮಾಡಬಹುದು. ಒಂದು ಹೊಂಡದಲ್ಲಿ ಸಾವಿರ ಪೌಂಡು ಕ್ಷಾರಗಳು ಸಿಗುವಂತೆ ಇದ್ದರೆ ಅದರಿಂದ ನೂರು ಪೌಂಡಿನಷ್ಟು ಜಲ-ಸಸ್ಯಗಳು ಬದುಕಬಲ್ಲವು. ಇವನ್ನು ತಿಂದು ಹತ್ತು ಪೌಂಡಿನಷ್ಟು ಸಸ್ಯಾಹಾರಿಗಳು ಬದುಕಬಲ್ಲವು. ಒಂದೇ ಪೌಂಡಿನ ಮಾಂಸಾಹಾರಿ ಈ ಹತ್ತು ಪೌಂಡಿನ ಸಸ್ಯಾಹಾರಿಗಳನ್ನು ತಿಂದುಹಾಕುವದು. ಒಬ್ಬ ಮಾನವನು ತನ್ನ ಜೀವಮಾನದಲ್ಲಿ ಸೇವಿಸುವ ಆಹಾರದ ಲೆಕ್ಕಾಚಾರ ಮಾಡಿದರೆ ನಿಸರ್ಗದಲ್ಲಿ ಬೇಕಾಗುವ ಆಹಾರದ ಕಲ್ಪನೆ ಬರುವದು. ಒಂದು ಸ್ತರದಲ್ಲಿ ಹೆಚ್ಚಳ ಮಾಡದೆ ನಂತರದ ಸ್ತರದಲ್ಲಿ ಹೆಚ್ಚಳ ಮಾಡುವದು ಅಸಾಧ್ಯವಾದ ಮಾತು. ಭೂಮಾತೆಗೆ ಬೇಕಾಗುವಷ್ಟು ಕ್ಷಾರ ಸಿಗದೇ ನಮಗೆ ಬೇಕಾಗುವಷ್ಟು ಆಹಾರ ದೊರಕಿಸಲು ಎಂದಿಗೂ ಸಾಧ್ಯವಾಗದು.

ಆಶ್ರಯದ ಪ್ರಕಾರಗಳಲ್ಲಿಯೂ ಇವೇ ತರಹದ ವೈವಿಧ್ಯ ಕಂಡುಬರುತ್ತದೆ. ಎಲ್ಲ ತರದ ಜನರು, ತಮ್ಮ ವಾಸಕ್ಕೆ ಲಲಿತಮಹಲೇ ಬೇಕೆನ್ನದೆ ತಮ್ಮ ಶಕ್ತಿ ಮತ್ತು ಯೋಗ್ಯತೆಗಳಿಗೆ ಅನುಸಾರವಾಗಿ, ಜೋಪಡಿಯಿಂದ ಬಂಗಲೆಯವರೆಗೆ ವಿವಿಧ ಪ್ರಕಾರದ ಕಟ್ಟಡಗಳಲ್ಲಿ ಸಂಸಾರ ಹೂಡಿರುವಂತೆ ಪ್ರಾಣಿಗಳೂ ತಮ್ಮ ವಾಸಯೋಗ್ಯ ತಾಣಗಳಲ್ಲೆ ತಮ್ಮ ಗೃಹನಿರ್ಮಾಣ ಮಾಡಿಕೊಂಡಿವೆ. ಮಹಾಸಾಗರದ ಕಗ್ಗತ್ತಲಿನ ಆಳದಲ್ಲಿ ಜೀವಿಸುವ ಮೀನುಗಳಿದ್ದಂತೆ, ದಂಡೆಗುಂಟ ತಿರುಗುವ, ದಡಕ್ಕೆ ಬಂದುಹೋಗುವ, ಹವೆಯಲ್ಲಿ ಜಿಗಿದು ನೀರಿನಲ್ಲಿ ಮುಳುಗುವ ಮೀನುಗಳೂ ಇವೆ. ಎರೆಹುಳ, ಒರಲೆಗಳಂತಹ ಪ್ರಾಣಿಗಳು ಭೂಗರ್ಭದಲ್ಲಿ ಇದ್ದರೆ, ಚೇಳು-ಹಾವುಗಳು ಮಣ್ಣಿನಲ್ಲಿ, ಕಲ್ಲಿನಡಿಯಲ್ಲಿ ವಾಸಿಸುತ್ತವೆ. ಮೊಲ, ನರಿ, ತೋಳಗಳು ಪೊದೆಗಳನ್ನು ತಮ್ಮ ಗೃಹಗಳನ್ನಾಗಿ ಮಾಡಿಕೊಂಡರೆ, ಕರಡಿ, ಹುಲಿ, ಸಿಂಹಗಳು ಗುಹೆಗಳಲ್ಲಿ ಬಿಡಾರ ಹೂಡುವವು. ಚಿರ್ಚ ಮರವನ್ನು ಏರಬಲ್ಲದು. ಅಲ್ಲಿಯೇ ಬೇಟೆಗಾಗಿ ಕಾಯಬಲ್ಲದು. ಬೇರು, ಬೊಡ್ಡೆ, ತೊಗಟೆ ಟೊಂಗೆ, ಎಲೆ, ಮೊಗ್ಗು, ಹೂವು, ಕಾಯಿ, ಹಣ್ಣುಗಳಲ್ಲಿ ಕೀಟಗಳು ಇರುವಂತೆ ಪ್ರಾಣಿಗಳ ತೊಗಲು, ಮಾಂಸ, ಎಲುವು, ರಕ್ತ ಜಠರ, ಯಕೃತ್ತು ಮೊದಲಾದ ಅಂಗಗಳಲ್ಲಿ ಮನೆಮಾಡಿಕೊಂಡು ಜೀವಿಗಳಿವೆ. ಆನೆಯು ಬಳಗ ದಟ್ಟಕಾಡು, ನೀರಿನ ಅನುಕೂಲವಿದ್ದಲ್ಲಿ ಅಭಿವೃದ್ಧಿ ಹೊಂದಿದರೆ, ನೀರಿಲ್ಲದ ಮರುಭೂಮಿಯಲ್ಲಿ ಒಂಟೆಗಳಿವೆ. ಹೊಲಸು ತಿಪ್ಪೆಗಳಲ್ಲಿ ಸೂಕರವರ್ಗ ಸುಖವಾದಿ ಬೆಳೆದರೆ ಚಿಗರೆ ಸ್ವಚ್ಛವಾದ ತಾಣವನ್ನೇ ಹುಡುಕಿಕೊಂಡು ಹೋಗುವದು. ಹೊಂಡ, ನದಿ, ಸರೋವರಗಳ ಸಿಹಿನೀರಿನಲ್ಲಿ ಮೀನುಗಳಿರುವಂತೆ ಕಡಲಿನ ಉಪ್ಪು ನೀರಿನಲ್ಲೂ ಇರುತ್ತವೆ. ಕ್ಷಾರಗಳಿಂದ ತುಂಬಿತುಳುಕುವ ಸರೋವರಗಳಲ್ಲಿ ಕೀಟಗಳು ಜೀವಿಸುವಂತೆ ಪೆಟ್ರೋಲ್ ಬಾವಿಗಳಲ್ಲೂ ಇವೆ. ಮೈಕೊರೆಯುವ ಹಿಮದಲ್ಲಿ ಪ್ರಾಣಿಗಳು ಇರುವಂತೆ ಬಿಸಿ ನೀರಿನ ಸೆಲೆಗಳಲ್ಲೂ ಇವೆ. ಹಂಸ, ಬಕ, ಬಾತುಗೋಳಿಗಳಂತಹ ಪಕ್ಷಿಗಳು ನೀರಿನ ಸಹವಾಸ ಬಯಸಿದರೆ, ಕೋಳಿ, ನವಿಲುಗಳು ಹೆಚ್ಚಿನ ಸಮಯವನ್ನು ನೆಲದ ಮೇಲೇ ಕಳೆಯುವವು. ಮರದ ಪೊಳ್ಳಿನಲ್ಲಿ ಕೆಲ ಹಕ್ಕಿಗಳು ವಾಸಿಸಿದರೆ, ಟೊಂಗೆಯ ಪರ್ಣಗಳಲ್ಲಿ ಕಟ್ಟಿದ ಗೂಡುಗಳಲ್ಲಿ ಬಹಳಷ್ಟು ವಾಸಿಸುವವು. ಹದ್ದು ಗಗನ-ವಿಹಾರಿಯಾಗಿಯೇ ಸಂತೋಷಪಡುವದು.

ಪ್ರಾಣಿಗಳ ವಾಸಸ್ಥಳದ ವೈವಿಧ್ಯತೆಯಂತೆ ಗೃಹಗಳ ಬಹುರೂಪತೆಯೂ

ವಿಚಿತ್ರವಾಗಿವೆ. ಅಮೀಬದಂತಹ ವರ್ಗ, ಹೊಂಡದ ಕಸಕಡ್ಡಿಗಳ ಮೇಲೆ ಜೀವಿಸಿದರೆ, ಸ್ಪಂಜಗಳು ತಳಕ್ಕೆ ಗಟ್ಟಿಯಾಗಿ ಅಂಟಿಕೊಂಡು ವಾಸಿಸುವವು. ಆಳ ವಿಲ್ಲದ ಕಡಲಿನಲ್ಲಿ ಹವಳಗಳಿದ್ದರೆ ಶಂಖಗಳು ತಮ್ಮ ಕವಚವನ್ನೇ ತಮ್ಮ ಗೃಹವಾಗಿ ಬಳಸುವವು. ಕಣಜ ಮಣ್ಣಿನಿಂದ, ಜೇನ್ನೊಣ ಮೇಣದಿಂದ ತಮ್ಮ ತಮ್ಮ ವಾಸಸ್ಥಾನ ನಿರ್ಮಿಸಿದರೆ, ಕಾಗದದಿಂದ ಗೂಡುಕಟ್ಟುವ ಕೀಟಗಳೂ ಇವೆ. ಸಸ್ಯ ಭಾಗ ಹಿಗ್ಗುವಂತೆ ಮಾಡಿ ಅದರೊಳಗೆ ಸೂಕ್ಷ್ಮ ಜಾತಿಯ ಕೀಟಗಳು ಇರುತ್ತವೆ. ರೇಶಿಮೆ-ಹುಳು ತನ್ನ ಎಂಜಲನ್ನೇ ಎಳೆಗಳಾಗಿ ಪರಿವರ್ತಿಸಿ ಗೂಡು ಕಟ್ಟುವದು. ಜೇಡ ಗೂಡಿನ ಎಳೆಗಳನ್ನು ತಯಾರಿಸುವವಕ್ಕಾಗಿಯೇ ಬೇರೆ ಅವಯವ ಪಡೆದಿದೆ. ಚೇಳು, ಏಡಿ, ನಕ್ಷತ್ರ-ಮೀನು ಸ್ವಂತ ಮನೆ ಕಟ್ಟಿಕೊಳ್ಳದಿದ್ದರೂ ವೈರಿಗಳಿಂದ ಮರೆಯಾಗಲು ಕಲ್ಲುಮಣ್ಣಿನ ಆಶ್ರಯ ಪಡೆಯುವವು. ಹಾವುಗಳು ಪೊದೆಗಳಲ್ಲಿ ಒರಲೆಗಳು ನಿರ್ಮಿಸಿದ ಹುತ್ತದಲ್ಲಿ ವಾಸಿಸುವವು. ಕೆಲವು ಹಾವುಗಳು ಮರ ಗಳಲ್ಲಿಯೂ ಇರುವದುಂಟು. ಹಕ್ಕಿಗಳು ಗೂಡುಕಟ್ಟುವ ವೈವಿಧ್ಯ ಮಂತೂ ಮಾನವ ನಾಚಿಕೆಪಡುವಂತಹದಿದೆ. ಗುಬ್ಬಚ್ಚಿ, ಹುಲ್ಲು-ಕಡ್ಡಿ-ಗರಿಗಳನ್ನು ಹೊತ್ತು ತಂದು ಮರಿಗಳಿಗಾಗಿ ಮೆತ್ತಗಿನ ಗೂಡು ಕಟ್ಟಿದರೆ ಕಾಗೆ, ಟೊಂಗೆಗಳನ್ನೇ ಹೊತ್ತು ತಂದು ಗೂಡು ಕಟ್ಟುತ್ತದೆ. ಒಮ್ಮೆ ಕನ್ನಡಕದ ಅಂಗಡಿಯೊಳಗಿನ ಫ್ರೇಮುಗಳೆಲ್ಲ ಕಳವಾಗುತ್ತವೆ ಎಂದು ಪೊಲೀಸರಿಗೆ ದೂರು ಕೊಟ್ಟು ಹುಡುಕಿದರೆ ಕಾಗೆಗಳು ಒಂದೊಂದಾಗಿ ಹೊತ್ತು ಗೂಡುಕಟ್ಟಿಗೊಂಡಿವೆ ಎಂದು ತಿಳಿಯಿತು! ಸಿಂಪಿಗ ಹಕ್ಕಿ ತನ್ನ ಗೂಡು ಕಟ್ಟುವಾಗ ಎರಡು ಎಲೆಗಳನ್ನು ಹತ್ತಿರ ತಂದು ಕೊಕ್ಕಿನಿಂದ ತೂತುಮಾಡಿ ದಾರದಿಂದ ಹೊಲಿಯುತ್ತದೆ. ಕರಿಗುಬ್ಬಚ್ಚಿಗಳು ಕತ್ತವನ್ನು ಹೊತ್ತುತಂದು ಎತ್ತರವಾದ ಮರದಟೊಂಗೆಗೆ ತಮ್ಮ ತೂತು-ಗೂಡು ಕಟ್ಟುತ್ತವೆ. ಹೊಲದೊಳಗಿನ ಮೆತ್ತಗಿನ ಮಣ್ಣನ್ನು ತಂದು ಗೂಡು ರಚಿಸುವ ಹಕ್ಕಿಗಳೂ ಇವೆ. ಹೊರ್ನಲಿಲ್ ಗಂಡು ಹಕ್ಕಿ ತನ್ನ ಜೊತೆಗಾತಿ ಗರ್ಭಿಣಿಯಿದ್ದಾಗ ಮರದ ಪೊಳ್ಳಿನಲ್ಲಿ ಸೇರಿಸಿ ಸಣ್ಣದೊಂದು ದ್ವಾರ ಬಿಟ್ಟು ಉಳಿದದ್ದನ್ನು ಭದ್ರವಾಗಿ ಮುಚ್ಚಿಬಿಡುತ್ತದೆ. ಮೊಟ್ಟೆಯೊಡೆದು ಮರಿ ದೊಡ್ಡವಾಗುವ ತನಕ ಅದು ಅವಿಶ್ರಾಂತವಾದಿ ದುಡಿದು ತಾಯಿ-ಮರಿಗೆ ಆಹಾರ ಒದಗಿಸುತ್ತದೆ. ಹೀಗೆ ಮಾಡುವಾಗ ಸ್ವತಃ ಆಹಾರ ಸೇವಿಸದೇ ಇರುವವರಿಂದ ಬಳಲಿ ಬೆಂಡಾಗಿ ಸತ್ತ ಉದಾಹರಣೆಗಳಿವೆ. ಫ್ಲೆಮಿಂಗೋ ನಾಲ್ಕು ಅಡಿ ಎತ್ತರದ ಹಕ್ಕಿಯಾದರೂ

ಒಂದೇ ಅಡಿ ಎತ್ತರದ ಮಣ್ಣಿನ ಗೂಡು ಕಟ್ಟಿ ಅದರಲ್ಲಿ ಒಂದೇ ಒಂದು ಮೊಟ್ಟೆ ಇಡುತ್ತದೆ.

ಉಳಿದ ಪ್ರಾಣಿಗಳಿಗಿಂತ ಬುದ್ಧಿ ಮತ್ತೆ ಹೆಚ್ಚಾಗಿರುವದರಿಂದಲೋ ಏನೋ ಸಸ್ತನ-ಪ್ರಾಣಿಗಳು ಗೃಹನಿರ್ಮಾಣಕ್ಕೆ ಕೀಟ ಅಥವಾ ಪಕ್ಷಿವರ್ಗ ತೆಗೆದುಕೊಂಡಷ್ಟು ತೊಂದರೆ ತೆಗೆದುಕೊಳ್ಳುವದಿಲ್ಲ. ಮಾನವನ ಆಪ್ತನಾದ ಕಪಿರಾಯ, ಶತಮಾನ ಗಳಿಂದ ಪ್ರತಿ ಸಂಜೆಯೂ ತನಗೊಂದು ಸ್ವಂತದ ಮನೆ ಕಟ್ಟಿಕೊಳ್ಳಬೇಕೆಂದು ತೀರ್ಮಾನಿಸಿದರೂ ಮುಂಜಾವಾದ ಕೂಡಲೆ 'ಗೂಕ್' ಎಂದು ಜಿಗಿದು ಖರ್ಚು ಬಾಡಿಗೆಯಿಲ್ಲದ ಮರದಲ್ಲಿಯೇ ವಾಸಮಾಡುತ್ತಿದ್ದಾನೆ! ಬೃಹದಾಕಾರದ, ಶಕ್ತಿ ಯುತ ಗೋರಿಲ್ಲಾ ಕೂಡ ದಟ್ಟವಾದ ಕಾಡಿನಲ್ಲಿ ಎತ್ತರದ ಮರದ ಆಶ್ರಯ ಪಡೆದಿದೆಯಲ್ಲದೆ ಮನೆಯನ್ನು ಕಟ್ಟುವ ಸಾಹಸ ಮಾಡಿಲ್ಲ. ಆದಿಮಾನವ ನಿಸರ್ಗ ನಿರ್ಮಿತ ಗವಿಗಳ ಆಶ್ರಯವನ್ನೆ ಪಡೆದಿದ್ದ. ಕಾಡುಕೋಣ, ಕಾಡೆಮ್ಮೆ, ಕಾಂಗರೂ ಕಣ್ಣುಕಪ್ಪಡಿ, ಆನೆ, ಆಡು, ಚಿಗರೆ, ತಿಮಿಂಗಲ ಮೊದಲಾದವುಗಳೂ ಗೃಹ ನಿರ್ಮಾಣದಲ್ಲಿ ತೊಡಗುವದಿಲ್ಲ.

ಪ್ರಾಣಿಗಳು ಸಹಜೀವನಕ್ಕೆ ಹೊಂದುವಂತೆ ತಮ್ಮ ಚಟುವಟಿಕೆಗಳನ್ನು ರೂಪಿಸಿಕೊಂಡಿವೆ. ಗಾತ್ರದಲ್ಲಿ ತನಗಿಂತ ಹತ್ತುಪಟ್ಟು ದೊಡ್ಡದಿರುವ ತಿಮಿಂಗಿಲದ ಮೇಲೆ ಆಕ್ರಮಣ ನಡೆಸುವ ಶಾರ್ಕ-ಮೀನು ಸದಾಕಾಲಗೇಣುದ್ದ ಮೀನನ್ನು ಹಿಂಬಾಲಿಸುತ್ತಿರುತ್ತದೆ. ಇದರಿಂದಾಗಿ ಶಾರ್ಕಿಗೆ ಆಹಾರ ಸುಲಭವಾಗಿ ಸಿಗುವಂತೆ ಆದರೆ, ಕಿರಿಮೀನಿಗೆ ಶಾರ್ಕ-ಮೀನು ತನ್ನ ಬೇಟೆ ತಿನ್ನುವಾಗ ಸಿಕ್ಕಸಣ್ಣ ಪುಟ್ಟ ಮಾಂಸದ ತುಣುಕುಗಳದ್ದೇ ಆಹಾರ ಸಿಗುತ್ತದೆ. ಒಂದು ಜಾತಿಯ ಏಡಿ ಹಾಯಡ್ರಾ ಜಾತಿಯ ಪ್ರಾಣಿಗೆ ತನ್ನ ಅಂಗಾಂಗದ ಮೇಲೆ ಬೆಳೆಯಲು ಬಿಡುತ್ತದೆ. ಇದರಿಂದಾಗಿ ಕಿರಿ ಮೀನು ಇದು ಸಭ್ಯಪ್ರಾಣಿ ಎಂದು ಏಡಿಯ ಸನಿಹಕ್ಕೆ ಬಂದಾಗ ಅದನ್ನು ತಿಂದು ಏಡಿ ತನ್ನ ಹಸಿವನ್ನು ಹೋಗಲಾಡಿಸಿಕೊಳ್ಳುತ್ತದೆ. ಈ ಸಹಾಯಕ-ಪ್ರಾಣಿಗಳಿಗೆ ಹೆಚ್ಚು ಶ್ರಮವಹಿಸದೇ ಆಹಾರ ಸಿಗುವದಲ್ಲದೆ ಪೆಟ್ರೋಲ್ ತುಟ್ಟಿಯಾದ ದಿನಗಳಲ್ಲೂ ಪುಕ್ಕಟೆ ಪ್ರಯಾಣದ ಸೌಲಭ್ಯ ಸಿಕ್ಕೇ ಸಿಗುತ್ತದೆ. ಹುಲಿಯು ದನದ ಗೋಣು ಮುರಿದು ತಿಂದು ತೇಗುವಾಗ ಸಣ್ಣ ಪುಟ್ಟ ಮಾಂಸಾಹಾರಿ ಪ್ರಾಣಿಗಳು ತಮ್ಮ ಪಾಲನ್ನು ಪಡೆಯುತ್ತವೆ. ಹುಲಿರಾಯ ಹೋದ ನಂತರ ನರಿ, ರಣಹದ್ದುಗಳು ತಮ್ಮ ಹಕ್ಕನ್ನು ಸಾಧಿಸುತ್ತವೆ. ಜೇನ್ನೊಣ,

ಪಾತರಗಿತ್ತಿ. ಪುಟ್ಟ ಹಕ್ಕಿಗಳಿಗೆ ಮಧುವನ್ನು ಪೂರೈಸಿದ ಹೂವಿನ ಪರಾಗದ ಪ್ರಸಾರವನ್ನು ಈ ಪ್ರಾಣಿಗಳು ಮಾಡುತ್ತವೆ. ಏಫಿಡಗಳ ಮೈಯಿಂದ ಹೊರ ಬರುವ ದ್ರವ್ಯ ಸಿಹಿಯಾದಿ ಇರುವೆಗೆ ಸೇರುವದರಿಂದ, ಅವನ್ನು ಇರುವೆಗಳು ತಮ್ಮ ದವಡೆಗಳಲ್ಲಿ ಹೊತ್ತು ತಂದು ತಮ್ಮ ಗೂಡಿನಲ್ಲಿ ಅವುಗಳಿಗಾಗಿಯೇ ಬೇರೆ ಜಾಗ ಮೀಸಲಿಟ್ಟು ಅವುಗಳಿಗಾಗಿಯೇ ಕೃಷಿಮಾಡುವವು.

ಮಾನವನ ಸಹಕಾರಿ-ಸಂಘಗಳಲ್ಲಿ ಲಾಭಬಡಕ ಅಧಿಕಾರಿಗಳು ಉಳಿದ ಸದಸ್ಯರನ್ನು ವಂಚಿಸಿದರೆ ಪ್ರಾಣಿಗಳು ಸಹಜೀವನದಲ್ಲಿ ಒಂದು ಪಾಲು ಹೆಚ್ಚಿನ ಲಾಭ ಪಡೆಯುವದೂ ಉಂಟು. ಇಂತಹ ಸಹಜೀವನ ಮೊದಲನೇ ಹಂತ ಇಣಚಿ, ಕೋತಿಗಳು ಮತ್ತು ಗಿಡಮರಗಳಲ್ಲಿ ಕಂಡುಬರುತ್ತದೆ. ಹೆಚ್ಚಿನ ಕಾಯಿ ಹಣ್ಣುಗಳನ್ನು ಇವು ಭಕ್ಷಿಸಿದರೂ ಎಲ್ಲಾದರೂ ಅಕಸ್ಮಾತ್ತಾಗಿ ಆಗುವ ಬೀಜ ಪ್ರಸರಣವೇ ಗಿಡಕ್ಕೆ ಆಗುವ ಲಾಭ. ನಂತರದ ಹಂತದಲ್ಲಿ ಆಗೊಮ್ಮೆ ಈಗೊಮ್ಮೆ ಬಂದು ರಕ್ತಹೀರುವ ತಗಣಿ, ಗುಂಗಾಡು, ಜಿರಳೆಗಳು ಬಂದರೆ, ಸದಾ ಅತಿಥಿ ಯಾಗಿರುವ ಹೇನು ನಂತರದ ಹಂತದಲ್ಲಿ ಬರುತ್ತದೆ. ಕೆಲವು ಪ್ರಾಣಿಗಳಿಗೆ ಇಷ್ಟ ರಿಂದಲೇ ತೃಪ್ತಿಯಿಲ್ಲ. ಅವು ಪ್ರಾಣಿಗಳ ದೇಹಸೇರಿ ಪರಪುಷ್ಟವಾಗಿ ಬೆಳೆಯುವವು. ಕೆಲ ಪರಪುಷ್ಟ ಜೀವಿಗಳ ಮೇಲೂ ಜೀವಿಸುವ ಕೀಟಗಳಿವೆ.

ದಿನವೆಲ್ಲ ತಮ್ಮ ಚಟುವಟಿಕೆ ಮಾಡದೇ ನಿರ್ದಿಷ್ಟ ಸಮಯವನ್ನಷ್ಟೇ ಇದಕ್ಕೆ ಮೀಸಲಿಟ್ಟ ಪ್ರಾಣಿಗಳಿವೆ. ಹೆಚ್ಚಿನ ಪ್ರಾಣಿಗಳು ಸೂರ್ಯದೇವನೊಡನೇ ಎಚ್ಚೆತ್ತು, ಆತ ಮುಳುಗುವದರೊಳಗೆ ತಮ್ಮ ನಿತ್ಯಕಾರ್ಯ ಮುಗಿಸಿದರೆ ನಿಶಾಚರ ಪ್ರಾಣಿಗಳು ಕತ್ತಲು ಕವಿದ ಮೇಲೆಯೇ ಪ್ರಾರಂಭಿಸುತ್ತವೆ. ಇಲಿ, ಹುಲಿ, ಸಿಂಹ, ನರಿ, ತೋಳ. ಕರಡಿಗಳೆಲ್ಲ ಈ ವರ್ಗದಲ್ಲಿ ಬರುತ್ತವೆ. ಇರುಳ-ರಾಣಿಯಂತಹ ಹೂವುಗಳು ಸಂಜೆಯಲ್ಲಿ ಅರಳುವದರಿಂದ ಅವುಗಳ ಮಧು ಹೀರುವ ಪತಂಗ ಗಳು ರಾತ್ರಿಯಲ್ಲಿಯೇ ಬರುತ್ತವೆ. ನಸುಕಿನಲ್ಲಿ, ಸಂಜೆಯಲ್ಲಿ, ನಡುಹಗಲಿನಲ್ಲಿ. ನಡುರಾತ್ರಿಗಳಲ್ಲಿ ಮಾತ್ರ ಹೆಚ್ಚು ಸಕ್ರಿಯವಾಗಿರುವ ಪ್ರಾಣಿವರ್ಗಗಳಿವೆ. ಕಪ್ಪೆ ಮಳೆಗಾಲದಲ್ಲಿ ಚುರುಕಾಗುತ್ತದೆ. ಉಷ್ಣವಲಯದಲ್ಲಿ ಬೇಸಿಗೆಯಲ್ಲಿ ನಿದ್ರೆಮಾಡಿ ಚಳಿಗಾಲದಲ್ಲಿ ಚಟುವಟಿಕೆ ನಡೆಸುವ ಪ್ರಾಣಿಗಳಿದ್ದಂತೆ ಹಿಮಾಲಯ ಮತ್ತು ಧ್ರುವ ಪ್ರದೇಶದಲ್ಲಿ ವರ್ಷದ ಬಹುಭಾಗ ಹಿಮದಿಂದ ಕೂಡಿರುವದರಿಂದ ಅಂತಹ ದಿನಗಳಲ್ಲಿ ಪ್ರಾಣಿಗಳು ವಿಶ್ರಾಂತಿ ಪಡೆದು ಬೇಸಿಗೆಯ ಕೆಲವೇ ದಿನಗಳಲ್ಲಿ ತಮ್ಮ

ಜೀವನದ ಚುವಟಿಕೆಗಳನ್ನು ಮುಗಿಸಿಬಿಡುವವು.

ವಿಶ್ವದಲ್ಲಿ ಜೀವಕೋಟಿಯು ಅಸಂಖ್ಯ ಪ್ರಕಾರಗಳಿದ್ದರೂ ಅವು ಒಂದರೊಡನೊಂದು ಹಲವಾರು ರೀತಿಗಳಲ್ಲಿ ಹೊಂದಿಕೊಂಡು ಸಹಜೀವನ ನಡೆಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಇವುಗಳಲ್ಲೆಲ್ಲ ಮಾನವನೇ ಮಹಾಸ್ವಾರ್ಥಿ. ಎಲ್ಲ ಪ್ರಾಣಿಗಳಿಂದಲೂ ತನ್ನ ಲಾಭ ಸಾಧಿಸುವ ದುರುದ್ದೇಶದಿಂದ ವ್ಯವಸ್ಥಿತವಾಗಿ ಹೊಂದಿಕೊಂಡಿದ್ದ ಪ್ರಾಣಿಜಗತ್ತನ್ನು ಅಸ್ತವ್ಯಸ್ತಮಾಡಿಬಿಡುತ್ತಾನೆ. ಅಂತಹ ಸಮಯದಲ್ಲಿ ಸಹಕಾರಿಯಾದ ಪ್ರಾಣಿ-ಸಮೂಹ ನಿರ್ನಾಮವಾಗಿಹೋದರೆ, ಬೇಡವಾದ ಗುಂಪು ರಾಕ್ಷಸಾಕಾರವಾಗಿ ಬೆಳೆದು ನಿಂತುಬಿಡುತ್ತದೆ. ಅಂತಹ ಸಮಯದಲ್ಲಿ ಕಂಗಾಲಾದ ಮಾನವನು ಕೀಟನಾಶಕದಂತಹ ಬ್ರಹ್ಮಾಸ್ತ್ರವನ್ನು ಬಳಕೆಯಲ್ಲಿ ತಂದುಬಿಡುತ್ತಾನೆ. ಮೊದಲಲ್ಲಿ ಮಾಡಿದ ತಪ್ಪನ್ನು ಸುಧಾರಿಸಲು ಹೋಗಿ ಇನ್ನೊಂದು ತಪ್ಪು ಮಾಡಿರುವೆನೆಂದು ಕಾಲಾಂತರದಲ್ಲಿ ಅವನಿಗೇ ಆಗ ತಿಳಿಯುವದು.

ಆರು : ಚಲನವಲನ

"ಬಂದದ್ದೆಲ್ಲ ಬರಲಿ, ವಿಠ್ಠಲನ ದಯುವೊಂದಿರಲಿ" ಎನ್ನುತ್ತ ಸಸ್ಯಗಳು ಜೀವನದ ಆಗು-ಹೋಗುಗಳನ್ನು ನಿಂತಲ್ಲಿಯೇ ಪರಿಶೀಲಿಸಿದರೆ, ಪ್ರಾಣಿಗಳು ತಮಗೆ ಪ್ರತಿಕೂಲವಿದ್ದ ಕಡೆಯುಲ್ಲಿಯೂ ಚಲಿಸುವ ಅಧಿಕಾರ ಪಡೆದು ಸಸ್ಯ ಕೋಟಿಗಿಂತ ಮುಂದುವರಿದವು ಎಂದು ಅನಿಸಿಕೊಂಡಿವೆ. ಅಮೀಬಾದಂತಹ ಏಕ-ಜೀವಾಣು-ಪ್ರಾಣಿಗಳು ತಾಸಿಗೆ ಐದಾರು ಮಿಲಿಮೀಟರಿನಷ್ಟು ಚಲಿಸಿದರೆ, ಪಾರಿವಾಳದಂತಹ ಪಕ್ಷಿ ಅಷ್ಟೇ ಸಮಯುದಲ್ಲಿ ತೊಂಭತ್ತು ಮೈಲಿಗಳ ವರೆಗೆ ಹಾರ ಬಲ್ಲದು. ಏಕ-ಜೀವಾಣುಗಳಲ್ಲಿ ವೇಗವಾಗಿ ಚಲಿಸುವದೆಂದು ಹೆಸರಾದ ಪೆರೆಮೇಶಿ ಯುಮಿಗೆ ಒಂದುತೊಟ್ಟು ನೀರೆ ಈಜುಗೊಳವಾಗಿಬಿಡುವದರಿಂದ ಅದರ ಐದಾರು ಸುತ್ತು ಹೊಡೆದರೇ ಸುಸ್ತಾಗಿಬಿಡುವದು. ಒಂದುಹನಿ ಕೊಳಚೆ-ನೀರನ್ನು ಸೂಕ್ಷ್ಮ ದರ್ಶಕದಲ್ಲಿಟ್ಟು ನೋಡಿದರೆ ನಮಗೆ ಬೇರೆಯೇ ಒಂದು ಲೋಕದ ಭಾಸವಾಗು ತ್ತದೆ. 'ಯುುಗ್ಲಿನಾ' ಚಾವಟಿಗೆಯುಂತಹ ಅವಯುವವನ್ನು ತಿರುವುತ್ತ ಮುಂದೆ ಸಾಗಿದರೆ 'ವರ್ಟಿಸೆಲ್ಲಾ' ತನ್ನ ಸೊಂಟಕ್ಕೆ ಬಿಗಿದುಕೊಂಡ 'ಹಗ್ಗ'ದ ಆಧಾರದಿಂದ

ಹಿಂದೆ ಮುಂದೆ ಚಲಿಸುತ್ತದೆ, ಎತ್ತ ಹೋಗಲಿ ಎಂದು ನಿರ್ಧರಿಸಲಾಗದ ಚಂಚಲ ಬುದ್ಧಿಯ 'ವೊಲವೊಕ್ಷ' ನಿಂತಲ್ಲಿಯೇ ಸುತ್ತುತ್ತಿರುತ್ತದೆ.

ಸ್ಪಂಜ ಮತ್ತು ಹೈಡ್ರಾ ಗುಂಪುಗಳು ಸ್ಥಾಯಿಯಾಗಿದ್ದು ಆಹಾರ ಹೊತ್ತು ತರುವ ನೀರನ್ನೇ ತಮ್ಮತ್ತ ಬರಮಾಡುವದರಿಂದ ಅವುಗಳ ಪ್ರಸಾರಕ್ಕೆ ಅಡಚಣೆಯಾಗಬಾರದೆಂದು ಮರಿಗಳಿಗೆ ಚಲನ-ಸಾಮರ್ಥ್ಯವಿದ್ದು ನೀರಿನಲ್ಲಿ ದೂರ ದೂರ ಹೋಗಿ ಪ್ರೌಢಾವಸ್ಥೆ ಪಡೆಯುತ್ತವೆ. ಪರಪುಷ್ಟ ಪ್ರಾಣಿಗಳು ಚಲಿಸುವ ಅವಯವಗಳನ್ನು ಕಳೆದುಕೊಂಡು ಜೀವಿಸುವದರಿಂದ ಮತ್ತು ಆಶ್ರಯದಾತನೊಡನೆ ಸಾಯುವ ಸಂದರ್ಭ ಹೆಚ್ಚು ಇರುವದರಿಂದ ಅವುಗಳ ಮರಿಗಳಿಗೆ ಅಸಾಮಾನ್ಯ ಚಲನಶಕ್ತಿ ಇರುತ್ತದೆ. ಅವು ಅವಿಶ್ರಾಂತವಾಗಿ ಚಲಿಸಿ ಆಶ್ರಯ ಹುಡುಕಿಕೊಂಡಾಗಲೇ ತಮ್ಮ ಚಲನಸಾಮರ್ಥ್ಯ ಕಳೆದುಕೊಳ್ಳುವವು. ಎರೆಹುಳುಗಳಿಗೆ ಬಿಲಗಳಿಂದ ಹೊರಗೆ ಬರುವಂತೆ ಸಾಧ್ಯವಾಗಲು ಮೈಯೆಲ್ಲ ಸೂಕ್ಷ್ಮ ಕಾಲುಗಳಿಂದ ಕೂಡಿರುತ್ತವೆ. ಶಂಖ-ಪ್ರಾಣಿ ಸದಾಕಾಲ ಜಿಗಟಾದ ಪದಾರ್ಥ ಹೊರಗೆಡಹುತ್ತ ಎಂತಹ ನುಣುಪಾದ ವಸ್ತುವಿನ ಮೇಲೆಯೂ ಚಲಿಸಬಲ್ಲದು. ಅತಿ ಹರಿತ ಚಾಕುವಿನ ಮೇಲೂ ಸುಲಭವಾಗಿ ಹರಿದಾಡಬಲ್ಲದು. ಕೀಟಗಳು ಓಡುವದಕ್ಕೆ, ಜಿಗಿಯುವದಕ್ಕೆ, ನಡೆಯುವದಕ್ಕೆ ಷಟ್‌ಪಾದಗಳನ್ನು ಉಪಯೋಗಿಸಿದರೆ ಹಾರಾಡುವದಕ್ಕೆ ಇಜ್ಜೋಡಿ ರೆಕ್ಕೆಗಳನ್ನು ಬಳಸುವವು. ನೀರಿನಲ್ಲಿ ಜೀವಿಸುವ ಕೀಟಗಳು ತಮ್ಮ ಕಾಲುಗಳನ್ನೇ ಹುಟ್ಟುಗಳನ್ನಾಗಿ ಮಾಡಿಕೊಳ್ಳುವವು. ಚಪಲ ಪಾತರಗಿತ್ತಿಗಳು ಸತತ ಹಾರಾಡುವದರಲ್ಲಿಯೇ ಪ್ರೌಢಾವಸ್ಥೆ ಕಳೆಯುವವು. ನಕ್ಷತ್ರ-ಮೀನು ತಮ್ಮ ಕಿರಿ ಕಾಲುಗಳಿಂದ ಸದಾ ನೀರು ಹರಿಸಿ ಚಲಿಸುವವು.

ನೀರನ್ನು ಸೀಳಿ, ವೇಗವಾಗಿ ಈಸಲು ನಾವೆಯಾಕಾರದ ಶರೀರ ಮೀನಿಗೆ ಸಹಾಯಕಾರಿಯಾಗಿದೆ. ಮುಂಭಾಗ-ಹಿಂಭಾಗದ ಹುಟ್ಟುಗಳಂತಹ ಅವಯವಗಳನ್ನು ಬಡಿಯುತ್ತ, ಬಾಲವನ್ನು ತಿರುವುತ್ತ ಹಿಂದೆ-ಮುಂದೆ, ಮೇಲೆ-ಕೆಳಗೆ ಎಲ್ಲ ಕಡೆಗೂ ಅದು ಹೋಗಬಲ್ಲದು. ಮೈಯ ಎಡ-ಬಲದಲ್ಲಿ ಇರುವ 'ಸ್ಪರ್ಶ ರೇಖೆ'ಯ ಸಹಾಯದಿಂದ ಪರಿಸರದಲ್ಲಿ ಆದ ಬದಲಾವಣೆ, ಒತ್ತಡಗಳನ್ನು ಅರಿಯಬಲ್ಲದು. ಕೆಲ ಮೀನು-ಜಾತಿಗಳಲ್ಲಿ ಈಜಲು ಸಹಾಯವಾಗುವಂತಹ ವಾಯು-ಚೀಲವೂ ಇರುವದು. ನೀರಿನ ಆಳಕ್ಕೆ ಹೋದಂತೆ, ಮೀನಿನ ಮೇಲೆ ನೀರಿನ ಒತ್ತಡ ಹೆಚ್ಚಾಗುತ್ತ ಹೋಗುವದರಿಂದ ಪ್ರತಿ ಮೀನು ತನ್ನ ಶರೀರ

ಹೊರಬಲ್ಲ ಆಳದ ವರೆಗೆ ಮಾತ್ರ ಹೋಗಬಲ್ಲದು. ಕೆಲವು ತಮ್ಮ ಹುಟ್ಟಿನಾಕಾರದ ಅವಯವಗಳನ್ನು ರೆಕ್ಕೆಯಂತೆ ಬಳಸಿ ನೀರ ಮೇಲೆ ಬಂದು ಹವೆಯಲ್ಲಿ ಎತ್ತರಕ್ಕೆ ಜಿಗಿಯುವವು. ಕಪ್ಪೆಗಳು ಹಿಂಗಾಲುಗಳ ಬೆರಳುಗಳ ನಡುವೆ ಇರುವ ಪರೆಯ ಸಹಾಯದಿಂದ ನೀರಿನ ಆಳಕ್ಕೆ ಲೀಲಾಜಾಲವಾಗಿ ಹೋಗಿ ತಿರುಗಿ ಮೇಲಕ್ಕೆ ಬರಬಲ್ಲವು. ಭೂಮಿಯ ಮೇಲೆ ಅವೇ ಹಿಂಗಾಲುಗಳನ್ನು ಸ್ಪ್ರಿಂಗಿನಂತೆ ಬಳಸಿ ಬಲುದೂರ ಜಿಗಿಯಬಲ್ಲವು. ಕಪ್ಪೆಗಳಲ್ಲಿ ಉದ್ದ ಜಿಗಿತದ ಸ್ಪರ್ಧೆ ಇದ್ದಿದ್ದರೆ ಯಾವಕ್ಕೆ ಮೊದಲ ಸ್ಥಾನ ಕೊಡುವದೆಂಬುದು ತಲೆನೋವಾಗಿ ಪರಿಣಮಿಸ ಬಹುದೇನೊ!

ಓತಿಕಾಟದ ವರ್ಗಕ್ಕೆ ನಖಗಳಿರುವದರಿಂದ ಗೋಡೆ, ಗಿಡ-ಮರಗಳನ್ನು ಸುಲಭವಾಗಿ ಏರಬಲ್ಲವು. ಹಲ್ಲಿಗೆ ನಖಗಳ ಜೊತೆಗೆ ಗಟ್ಟಿ ಹಿಡಿದುಕೊಳ್ಳಬಲ್ಲ ಹವಾರಹಿತ ಅವಯವ ಇರುವದರಿಂದ ಎಂತಹ ನುಣುಪಾದ ಗೋಡೆಯನ್ನೂ ಏರಬಲ್ಲದು. ಉಡಗಳ ನಖಗಳು ಗಟ್ಟಿ ಹಿಡಿತಕ್ಕೆ ಹೆಸರುವಾಸಿಗಳಿದ್ದು ವೈರಿಗಳ ಕೋಟೆ ಹತ್ತಲು ಈ ಪ್ರಾಣಿಗೆ ಹಗ್ಗ ಕಟ್ಟಿ ಬಳಸಿದ ಐತಿಹಾಸಿಕ ಉದಾಹರಣೆ ಗಳಿವೆ. ನೀರ ಆಮೆಗಳು ಹಿಂಗಾಲು-ಮುಂಗಾಲುಗನ್ನು ಹುಟ್ಟಿನಂತೆ ಬಳಸಿದರೆ ಭೂ-ಆಮೆಗಳ ಕಾಲ ನಖಗಳನ್ನು ಮಂದಗತಿಯಿಂದ ಚಲಿಸಲು ಬಳಸುವವು. ಹಾವುಗಳು ತಮ್ಮ ಶರೀರವನ್ನು ಹುರುಬರಕಾದ ನೆಲಕ್ಕೆ ಒತ್ತಿ ಹಿಡಿದು, ಶರೀರದ ಮಾಂಸಖಂಡದ ಚಲನೆಯಿಂದ ಮುಂದಕ್ಕೆ ನುಸುಳಿ ಹೋಗುವವು. ಅದೇ ನುಣುಪಾದ ಗಾಜಿನ ಮೇಲೆ ಹಾವುಗಳು ಅಸಹಾಯಕವಾಗುವವು. ಹರಿದು ಹೋಗುವ ಹಾವಿಗೆ ತನ್ನ ಹೆಡೆಯನ್ನು ಒಂದೂವರೆ ಅಡಿಗಿಂತ ಮೇಲಕ್ಕೆ ಎತ್ತಲಾಗದ್ದರಿಂದ ಹಾವು ಸಾಕುವ ವಿಜ್ಞಾನಿಗಳು ಎಂತಹ ವಿಷಕಾರಿ ಹಾವು ಗಳನ್ನೂ ಎರಡು ಅಡಿಗಿಂತ ಎತ್ತರವಿಲ್ಲದ, ಮುಚ್ಚಳವಿಲ್ಲದ ಗಾಜಿನಮನೆ ಗಳಲ್ಲಿಯೇ ಸಾಕುವರು. ನೀರಿನಲ್ಲಿ ವಾಸಿಸುವ ಮೊಸಳೆ ತನ್ನ ಪ್ರಬಲವಾದ ಬಾಲವನ್ನೇ ಹುಟ್ಟಿನಂತೆ ಬಳಸುವದು.

ಆಫ್ರಿಕಾಖಂಡದಲ್ಲಿ ಮತ್ತು ದಕ್ಷಿಣ ಅಮೇರಿಕೆಯಲ್ಲಿ ಇರುವ 'ಶಹಾಮೃಗ' ಹಕ್ಕಿಯ ರೆಕ್ಕೆಗಳು ನಿರುಪಯೋಗಿಯಾದ್ದರಿಂದ ಬಲವಾದ ಕಾಲುಗಳಿಂದ ಅವು ವೇಗವಾಗಿ ಓಡಬಲ್ಲವು. ಅದರಂತೆ ನ್ಯೂಝೀಲಂಡದ ಕಿವಿ ಹಕ್ಕಿಯೂ ಹಾರುವ ಬದಲಾಗಿ ನಡೆಯುವದು. ಕೋಳಿ, ಬಾತುಕೋಳಿ, ನವಿಲುಗಳೂ ಹಾರುವದು

ತೀರ ಕಡಿಮೆ. ಹಾರುವ ಹಕ್ಕಿಗಳ ಶರೀರಗಳು ಅದಕ್ಕಾಗಿಯೇ ರಚಿತವಾಗಿವೆ. ಶರೀರದ ಭಾರವನ್ನು ಕಡಿಮೆಮಾಡುವದಕ್ಕೋಸ್ಕರ ಎಲುವುಗಳು ಪೊಳ್ಳಾಗಿರುವವು. ಹಲ್ಲುದವಡೆಗಳಿಂದ ಮೈಭಾರ ಹೆಚ್ಚುವದರಿಂದ ಚುಂಚು ಪಡೆದಿದೆ. ಹಾರುವಾಗ ದೂರ ದೂರದ ದೃಷ್ಟಿ ಸಾಧ್ಯವಾಗಲು ತೀಕ್ಷ್ಣ ಕಣ್ಣು, ತಲೆಯನ್ನು ಯಾವ ದಿಕ್ಕಿನಲ್ಲೂ ತಿರುಗಿಸಲು ಬರುವಂತೆ ಹಲವಾರು ಎಲವುಗಳಿಂದ ಮಾಡಿದ ಉದ್ದ ಗೋಣು, ಹಾರುವಾಗ ಸುಲಭವಾಗಿ ದಣಿವಾಗದಂತೆ ಪ್ರಬಲವಾಗಿ ಬೆಳೆದ ರೆಕ್ಕೆಯ ಮಾಂಸಖಂಡಗಳು, ಗಿಡ-ಮರಗಳನ್ನು ಗಟ್ಟಿಯಾಗಿ ಹಿಡಿಯಲು ಪಂಜಗಳು. ಮಲ-ಮೂತ್ರಗಳನ್ನು ಆಗಾಗಬಿಡುವ,–ಇದೂ ಮೈಭಾರ ಹೆಚ್ಚಾಗದಂತೆ ಮಾಡಿದ ಏರ್ಪಾಡು. ಗಗನವಿಹಾರಕ್ಕೆ ಹೆಚ್ಚು ಶಕ್ತಿಯೊದಗಿಸಲು ಬಿಸಿಯಾದ ರಕ್ತ, ಶರೀರದ ಉಷ್ಣತೆ ಹೊರಗೆ ಹೋಗದಂತೆ, ಶರೀರಕ್ಕೆಲ್ಲ ಹಗುರವಾದ ಪುಚ್ಛ ಮುಂತಾದವನ್ನು ನಿಸರ್ಗ ಒದಗಿಸಿದೆ. ಶರೀರವನ್ನು ಇನ್ನೂ ಹಗುರವಾಗಿಡಲು ಎಲುವುಗಳಲ್ಲಿ ಹವೆಯ ಚೀಲಗಳಿವೆ. ಹೀಗಾಗಿ ಹಕ್ಕಿಗಳು ಕಾಣಲು ಭವ್ಯವಾಗಿದ್ದರೂ ಎತ್ತಿಕೊಂಡರೆ ತೀರ ಲಘುವಾಗಿರುತ್ತವೆ.

ಸಸ್ತನ ಪ್ರಾಣಿಗಳಲ್ಲಿ ವಿವಿಧ ಪ್ರಕಾರದ ಚಲನ ಕಂಡುಬರುತ್ತದೆ. ಎರಡು ಖುರಗಳ ಆಕಳು, ಎಮ್ಮೆ, ಆಡುಗಳು ಏರಿಳಿತಗಳ ಪ್ರದೇಶಗಳಲ್ಲಿ ಹೋಗಿ ಬರುವವವು. ಆದರೂ ಅವುಗಳಿಗೆ ವೇಗ ಕಡಿಮೆ. ಸಂಕಟಕಾಲದಲ್ಲಿ ವೇಗವಾಗಿ ಓಡಲು ಜಿಗರೆಯೇ ಹೆಸರವಾಸಿ. ಖುರುಗಳಿರುವ ಆನೆ, ಹಂದಿಗಳು ಅಷ್ಟು ವೇಗವಾಗಿ ಓಡಲಾರವು. ಒಂದೇ ಖುರದ ಕುದುರೆ, ರೆಘೋಭ್ರಾಗಳು ಅವಿಶ್ರಾಂತ ಓಟಕ್ಕೆ ಜನ್ಮ ತಾಳಿದಂತೆ ಇವೆ. ನಾಯಿ, ಬೆಕ್ಕು, ಹುಲಿ ಮೊದಲಾದ ಮಾಂಸಾಹಾರಿ ಪ್ರಾಣಿಗಳು ಸಪ್ಪಳಿಲ್ಲದೇ ಓಡುವದರಲ್ಲಿ ಹೆಸರುವಾಸಿಯಾಗಿವೆ. ಬೇಟೆಯಾಡುವಾಗ ಚಿರ್ಚ ತಾಸಿಗೆ ನೂರು ಮೈಲಿ ವೇಗದಲ್ಲಿ ಬೇಟೆಯನ್ನು ಹಿಂಬಾಲಿಸಬಲ್ಲದು. ಕಾಂಗರೂ ಬಾಲದ ಸಹಾಯದಿಂದ ತನ್ನ ಪ್ರಬಲವಾದ ಹಿಂಗಾಲುಗಳ ಮೇಲೆ ನಿಂತು ಓಟ ಕೀಳುವದರಲ್ಲಿ ಹೆಸರುವಾಸಿ. ಒಂಟೆ-ಜಿರಾಫೆಗಳು ತತ್ತರ ಮೆತ್ತರ ಕಾಲು ಹಾಕಿ ಓಡುವದನ್ನು ನೋಡಿದರೆ ನಗು ತಡೆದುಕೊಳ್ಳುವದೇ ಕಷ್ಟದ ಮಾತು. ಕಣ್ಣು ಕಪ್ಪಡಿ ತನ್ನ ಮುಂಗೈ ಬೆರಳಿನ ನಡುವಿನ ಪರೆಯ ಸಹಾಯದಿಂದ ಜಡವಾದ ದೇಹವನ್ನು ಬಲು ಕಷ್ಟದಿಂದ ಎತ್ತರಿಸಿ ಹಾರುವದು. ಈ ಹಾರಾಟದಲ್ಲಿ ಅವರ ರೆಕ್ಕೆಗಳು ಹೊರಡಿಸಿದ ಸದ್ದು ಹತ್ತಿರವಿದ್ದ ಪದಾರ್ಥಕ್ಕೆ ಅಪ್ಪಳಿಸಿದ

ಪ್ರತಿಧ್ವನಿಕೇಳುವ ಸಾಮರ್ಥ್ಯದ ಸಹಾಯದಿಂದ ಅವು ಹಾರಾಡುತ್ತವೆ. ಅಂತೆಯೇ ಕಣ್ಣುಮುಚ್ಚಿಕೊಂಡರೂ ಯಾವುದಕ್ಕೂ ಅಪ್ಪಳಿಸದೇ ಹಾರಬಲ್ಲವು. ಈ ಸಾಮರ್ಥ್ಯ ಹಕ್ಕಿಗಳಿಗಿರುವದಿಲ್ಲ. ವಿಶ್ರಾಂತಿ ಪಡೆಯುವಾಗ ಕಣ್ಣುಕಪ್ಪಡಿಗಳು ತಲೆ ಕೆಳಮಾಡಿ ಜೋತುಬೀಳುವವು. ಹಾರುವ ಇಣಚಿ, ಹಾರುವ ಬೆಕ್ಕುಗಳು ನಿಜವಾಗಿಯೂ ಹಾರಲು ಅಸಮರ್ಥವಾಗಿ ಅವು ಹಿಂಗಾಲು-ಮುಂಗಾಲುಗಳನ್ನು ಜೋಡಿಸುವ ಮೈದೊಗಲಿನಲ್ಲಿ ಹವೆ ತುಂಬಿ ಬಲೂನಿನಂತೆ ಹವೆಯಲ್ಲಿ ತೇಲಿ ಎತ್ತರ ಮರದಿಂದ ಕೆಳಗೆ ಹೋಗುವವು. ಆದರೆ ಕೆಳಗಿನಿಂದ ಮೇಲಕ್ಕೆ ಎಂದೂ ಹಾರಲಾರವು. ಕಡಲಲ್ಲಿ ತಿಮಿಂಗಿಲವು ತನ್ನ ಹಿಂಗಾಲು ಮತ್ತು ಮುಂಗಾಲು ಗಳನ್ನು ಹುಟ್ಟಿನಂತೆ ಉಪಯೋಗಿಸಿ ಮೀನಿನ ಅನುಕರಣೆ ಮಾಡುವವು.

ಕೆಲ ಪ್ರಾಣಿಗಳು ತಮ್ಮ ಚಲನಶಕ್ತಿಯ ಲಾಭ ಪಡೆದುಕೊಂಡು ಸದಾ ಜೀವನದ ವಸಂತಕಾಲದಲ್ಲಿರಲು ಸಾಧ್ಯವಾಗುವಂತೆ ಗುಳೇಹೋಗುವ ಪರಿಪಾಠ ಇಟ್ಟಿವೆ. ಇದು ಬೇಟೆ, ಆಹಾರ, ಆಶ್ರಯ, ಆಚ್ಛಾದನ ಮತ್ತು ಸಂಗಾತಿಗಾಗಿ ಮಾಡುವ ಚಲನೆಗಿಂತ ಭಿನ್ನವಾದದ್ದು. ಕೀಟಗಳಲ್ಲಿ ಅಮೇರಿಕ-ಕೆನಡಾಗಳಲ್ಲಿಯ 'ಮೊನಾರ್ಕ' ಪಾತರಗಿತ್ತಿ ಇಂತಹ ಚಲನೆಗೆ ಪ್ರಸಿದ್ಧವಾಗಿವೆ. ಮೈಕೊರೆಯುವ ಚಳಿಯಿಂದ ರಕ್ಷಿಸಿಕೊಳ್ಳಲು ಚಳಿಗಾಲ ಆರಂಭದಲ್ಲಿಯೇ ದಕ್ಷಿಣಕ್ಕೆ ಗುಳೇ ಹೋಗಲು ಪ್ರಾರಂಭಿಸುತ್ತವೆ. ದೊಡ್ಡ ಹಿಂಡು ಕಟ್ಟಿಕೊಂಡು ಮೂರುಸಾವಿರ ಕಿಲೋಮೀಟರ ಪ್ರಯಾಣಮಾಡಿ ಫ್ಲಾರಿಡಾ, ಮ್ಯಾಕ್ಸಿಕೋ, ಕ್ಯೂಬಾ, ಕ್ಯಾಲಿ-ಫೋರ್ನಿಯದ ಬೆಚ್ಚಗಿನ ಪ್ರದೇಶದಲ್ಲಿ ಚಳಿಗಾಲ ವಿಶ್ರಾಂತಿ ಪಡೆಯುವವು. ಅವು ಆಶ್ರಯ ಪಡೆಯುವ ಗಿಡ-ಮರಗಳ ಎಲೆ ಕೂಡ ಕಾಣದಷ್ಟು ದಟ್ಟ ಕವಿಯು ತ್ತವೆ. ಯಾವ ಚಲನವಲನವಿಲ್ಲದೇ ಅಲ್ಲಿ ಕೂತಿದ್ದು ಉತ್ತರ-ಅಮೇರಿಕೆಯಲ್ಲಿ ಬೇಸಿಗೆಕಾಲ ಪ್ರಾರಂಭವಾದ ಕೂಡಲೇ ಅವು ಮರುಪ್ರಯಾಣ ಪ್ರಾರಂಭಿಸುತ್ತವೆ. ದಾರಿಯಲ್ಲಿ ಸಂತಾನೋತ್ಪತ್ತಿಗೆ ತೊಡಗಿ ತತ್ತಿಗಳನ್ನು ಇಟ್ಟ ಹೆಣ್ಣು-ಕೀಟಗಳು ಮರಣವನ್ನು ಅಪ್ಪಿಕೊಳ್ಳುತ್ತವೆ. ಆದರೆ ಮರಿಗಳು ತಮ್ಮ ಮೂಲ ವಾಸಸ್ಥಳಕ್ಕೆ ಮುಟ್ಟುತ್ತವೆ. ಆಶ್ಚರ್ಯದ ಮಾತೆಂದರೆ ಈ ಮರಿಗಳು ಗುಳೇ ಹೋದಾಗ ತಮ್ಮ ಪಾಲಕವರ್ಗ ವಿಶ್ರಾಂತಿ ಪಡೆದ ಮರವನ್ನು ಎಂದೂ ನೋಡದಿದ್ದು ಆ ಮರದಲ್ಲಿಯೇ ಆಶ್ರಯ ಪಡೆದಿರುತ್ತವೆ.

ಮಿಡತೆಗಳು ವಲಸೆ ಹೋಗುವದಂತೂ ಆರ್ಥಿಕ ದೃಷ್ಟಿಯಿಂದ ಅತಿ

ಮಹತ್ವ ಪಡೆದಿದೆ. ಬಲೂಚಿಸ್ತಾನ ಮತ್ತು ಇನ್ನಿತರ ಮರುಭೂಮಿ ಪ್ರದೇಶಗಳಲ್ಲಿ ಉಳಿದದಿನ ತಮ್ಮಷ್ಟಕ್ಕೆ ಬೇಕಷ್ಟು ಆಹಾರಸೇವಿಸಿ ಸಂಸಾರ-ಸುಖ ಅನುಭವಿಸುವ ಈ ಕೀಟಗಳು ೪-೫ ವರ್ಷಗಳಿಗೊಮ್ಮೆ ಸಂತಾನೋತ್ಪತ್ತಿ ಹೆಚ್ಚಾಗುವದರಿಂದಲೋ ಅಥವಾ ಪ್ರದೇಶದ ಆಹಾರ ಕಡಿಮೆಯಾಗುವದರಿಂದಲೋ ಸಂಘಟಿತವಾಗಿ ವಲಸೆ ಹೋಗುತ್ತವೆ. ಆಕಾಶದಲ್ಲಿ ದಟ್ಟ ಮೋಡ ಕವಿದಿದೆಯೋ ಎಂದು ಭಾಸವಾಗುವಂತಹ ಗುಂಪುಗಳಲ್ಲಿ ಕಲೆತು ದಿನವೆಲ್ಲ ಹಾರಾಡಿ, ಸಂಜೆಯಾದೊಡನೆ ಹೊಲ, ಗಿಡ, ಮರಗಳಲ್ಲಿ ಆಶ್ರಯ ಪಡೆದು, ಆಹಾರ ಸೇವಿಸಿ ಸಂತಾನೋತ್ಪತ್ತಿ ಕಾರ್ಯದಲ್ಲಿ ತೊಡಗುವವು. ಅವು ವಿಶ್ರಾಂತಿಸಿದ ಸ್ಥಳದಲ್ಲಿ ಯಾವ ಚಿಗುರೂ ಉಳಿಯದಂತೆ ಮೆದ್ದು ಮರುದಿನ ಮುಂಜಾವಿನಲ್ಲಿ ಪಯಣ ಮುಂದುವರಿಸುವವು. ನೆಲದಲ್ಲಿ ಸೇರಿಸಿ ಹೋದ ಮೊಟ್ಟೆಗಳಿಂದ ಹೊರಬಂದ ಮರಿಗಳೂ ಒಟ್ಟಾಗಿ ಗುಳೇ ಹೋಗುವವು. ಇವುಗಳಿಗೆ ರೆಕ್ಕೆ ಬಲಿತಿರುವದಿಲ್ಲವಾದ್ದರಿಂದ ಕಾಲ್ದಳಗಳಂತೆ ನಡೆದೇಹೋಗುವವು. ದಾರಿಯಲ್ಲಿ ಹಳ್ಳ-ಕೊಳ್ಳ ಏನು ಬಂದರೂ ಅವು ನಿಲ್ಲಲಾರವು. ಅಂತಹ ಸಮಯದಲ್ಲಿ ಲಕ್ಷಾಂತರ ಜಿಟ್ಟೆಯ ಮರಿಗಳು ನೀರಿನಲ್ಲಿ ಸತ್ತು ತೇಲುವವು. ಅವುಗಳಿಂದ ಉಂಟಾದ ಕೀಟ-ಸೇತುವೆಯನ್ನೇ ಬಳಸಿ ಹಿಂದೆ ಉಳಿದ ಮರಿಗಳು ಹಳ್ಳಗಳನ್ನು ದಾಟುವವು! ಈ ಜಿಟ್ಟೆಗಳು ಮಾನವನು ಕೃಷಿ ಮಾಡಿದ ಯಾವತ್ತೂ ಆಹಾರವನ್ನು ಭಕ್ಷಿಸುವದರಿಂದ ಅವುಗಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಪರಿಕಿಸಲು ಅಂತರ್‌ರಾಷ್ಟ್ರೀಯ ಸಂಸ್ಥೆಯೊಂದು ಸ್ಥಾಪಿತವಾಗಿ ಅವುಗಳ ಚಲನವಲನದ ಮುನ್ಸೂಚನೆಯನ್ನು ಪಡೆಯುವ ಏರ್ಪಾಡು ಇದೆ.

ಆದೆಷ್ಟೋ ಕಡಲ-ಮೀನುಗಳಿಗೆ ಸಂತಾನೋತ್ಪತ್ತಿಗಾಗಿ ತಮ್ಮ ಪೂರ್ವಜರ ವಾಸಸ್ಥಾನಕ್ಕೆ ಹೋಗಬೇಕಾಗುತ್ತದೆ. ಹೆಸರು ಹೇಳಿದರೇ ಬಂಗಾಲಿಗಳ ಬಾಯಿಗೆ ನೀರೂರುವ 'ಇಲಿಸ್' ಮೀನು ಬಂಗಾಲ ಉಪಸಾಗರದಲ್ಲಿ ಜೀವಿಸುತ್ತದೆ. ಆದರೆ ಭಾವೀಪೀಳಿಗೆಯ ನಿರ್ಮಾಣಕ್ಕಾಗಿ ಅವು ಸಿಹಿನೀರಿನ ಗಂಗಾನದಿಯನ್ನೇ ಸೇರುತ್ತವೆ. ಅವು ಫರಕ್ಕಾ ಮುಟ್ಟುವ ತನಕ ಎಷ್ಟೋ ಸಣ್ಣ ಸಣ್ಣ ತಡಿಸಲುಗಳು ಇದ್ದರೂ ಅವನ್ನು ಲೆಕ್ಕಿಸದೇ ತಳದಿಂದ ಜಿಗಿದು ಮೇಲಿನ ಪ್ರವಾಹವನ್ನು ಸೇರಿಕೊಳ್ಳುವೆ. ಎಷ್ಟೋ ಸಾವು-ನೋವುಗಳಾದರೂ ಲೆಕ್ಕಿಸದೇ ಫರಕ್ಕಾದ ಹತ್ತಿರ ಹೋಗಿ ಮೊಟ್ಟೆಗಳನ್ನು ಇಡುವವು. ಆಹಾರವಿಲ್ಲದೇ ಸತತ ಪಯಣದಿಂದ ಬಳಲಿಕೆಯಿಂದ ಎಷ್ಟೋ ಮೀನುಗಳು ಸಾಯುವವು, ಮೊಟ್ಟೆಯೊಡೆದು ಹೊರಬಂದ ಮರಿಗಳು

ಕಡಲನ್ನು ಸೇರಿ, ತಮ್ಮ ಸಂತಾನೋತ್ಪತ್ತಿಗಾಗಿ ಅದೇ ಸ್ಥಳಕ್ಕೆ ಬರುವವು. 'ಗ್ರುನಿಯನ್' ಎಂಬುದು ಪೆಸಿಫಿಕ್ ಮಹಾಸಾಗರದಲ್ಲಿ ಜೀವಿಸುವ ಕಿರುಮೀನು. ಬೇಸಿಗೆಯಲ್ಲಿ ಮಹಾಸಾಗರದ ಏರಿಕೆಯ ಸಂಗಡ ಈ ಮೀನು ಕ್ಯಾಲಿಫೋರ್ನಿಯ ಮತ್ತು ಮೆಕ್ಸಿಕೋದ ದಂಡೆಯ ಆರ್ದ್ರರೇವೆಯಲ್ಲಿ, ಹೆಣ್ಣು ಹುದುಗಿ ಮೊಟ್ಟೆಗಳನ್ನು ಇಡುವದು. ಕೂಡಲೇ ಹತ್ತಿರದಲ್ಲಿದ್ದ ಗಂಡು ವೀರ್ಯದಿಂದ ಅದನ್ನು ಫಲಕಾರಿಯಾಗಿ ಮಾಡುವದು. ಇಂತಹ ದಿನಗಳಲ್ಲಿ ಅಮೇರಿಕನ್ನರು ಅವುಗಳನ್ನು ಬರಿಗೈಯಿಂದ ಹಿಡಿದು ಹುರಿದು ತಿನ್ನುವರು. ಎರಡು ವಾರಗಳ ನಂತರ ತಿರುಗಿ ಏರು ಬಂದಾಗ ಮರಿ-ಮೀನುಗಳು ತೆರೆಗಳ ಸಹಾಯದಿಂದ ಕಡಲು ಸೇರುವವು.

ವಸಂತಋತುವಿನಲ್ಲೇ ಜೀವನ ಕಳೆಯಬಯಸುವ ಹಕ್ಕಿಗಳು ಗುಳೇ ಹೋಗುವ ರೂಢಿ ಇಟ್ಟಿವೆ. ವರ್ಷದಲ್ಲಿ ಎರಡು ಬಾರಿ ದಕ್ಷಿಣಧ್ರುವದಿಂದ ಉತ್ತರಧ್ರುವಕ್ಕೆ ತಿರುಗಿ ದಕ್ಷಿಣಧ್ರುವಕ್ಕೆ ಹೋಗುವ ಹಕ್ಕಿಗಳೂ ಇವೆ. ಚಳಿಗಾಲದಲ್ಲಿ ರಶಿಯ ಮತ್ತು ಏಶಿಯಖಂಡದಿಂದ ಸಾವಿರಾರು ಹಕ್ಕಿಗಳು ಭಾರತಕ್ಕೆ ಬಂದರೆ ಬೇಸಿಗೆಯಲ್ಲಿ ಅವು ತಿರುಗಿ ಹೋಗುವವು. ಪುಟ್ಟ ದೇಹದ ಹಕ್ಕಿಗಳು ಆಹಾರವಿಲ್ಲದೇ ಹಗಲು-ರಾತ್ರಿ ಪಯಣಮಾಡಿ ಸಾವಿರಾರು ಮೈಲು ದೂರ ಹೇಗೆ ಹೋಗುತ್ತವೆ ಎಂಬುದು ವಿಜ್ಞಾನಿಗಳಿಗೊಂದು ಕುತೂಹಲಕಾರಿ ಸಮಸ್ಯೆಯಾಗಿದೆ. ಅವು ಅತಿ ಎತ್ತರದಲ್ಲಿ ಹಾರುವವು. ದಾರಿಯ ಗುರುತು ಏನೂ ಇಲ್ಲದೇ ಮಹಾಸಾಗರದ ಮೇಲಿಂದ ಹಾರಿ ಹೇಗೆ ತಮ್ಮ ಗುರಿ ಮುಟ್ಟುವವೋ ಏನೋ! ಏನೂ ಅರಿಯದ ಅವುಗಳ ಮರಿಗಳೂ ಅದೇ ದಾರಿ ಹಿಡಿದು ಅದೇ ಸ್ಥಳದಲ್ಲಿ ಬಂದು ಇಳಿಯುವದು ಇನ್ನೂ ಆಶ್ಚರ್ಯಕರ. ಪೆಟ್ಟಿಗೆಯಲ್ಲಿ ಮುಚ್ಚಿ ಎಂಟುನೂರು ಮೈಲು ದೂರ ಬಿಟ್ಟ ಹಕ್ಕಿಗಳು ಆರು ದಿನಗಳ ನಂತರ ಅದೇ ಸ್ಥಳದಲ್ಲಿ ಬಂದು ಇಳಿದವು! ಹಕ್ಕಿಗಳ ಸ್ಥಳಾಂತರವನ್ನು ವಿವರವಾಗಿ ಅಭ್ಯಸಿಸಲು ಪ್ರಾಣಿಶಾಸ್ತ್ರಜ್ಞರು ಸತತ ಪ್ರಯತ್ನ ನಡೆಸಿದ್ದಾರೆ. ಅವುಗಳಿಗೆ ಸಣ್ಣದೊಂದು ಎಲುಮಿನಿಯಮ್ ಬಿಲ್ಲೆ ಅಂಟಿಸಿ ಅವುಗಳನ್ನು ಹಿಡಿದವರು ಇಲ್ಲವೇ ಕೊಂದವರು ಪೂರ್ಣಮಾಹಿತಿಯೊಡನೆ ಹಿಂತಿರುಗಿಸಬೇಕು ಎಂದು ವಿನಂತಿಸಲಾಗುತ್ತಿದೆ. ೧ರಿಂದ ೨೦% ಹಕ್ಕಿಗಳನ್ನು ಹಿಂತಿರುಗಿ ಪಡೆದಿದ್ದಾರೆ. ಜರ್ಮನಿಯಲ್ಲಿ ಬಿಲ್ಲೆ ಹಚ್ಚಿ ಬಿಟ್ಟ ಹಕ್ಕಿ, ನಾಲ್ಕೇ ದಿನಗಳಲ್ಲಿ ೧೨೦೦ ಮೈಲು ದೂರದ ಸ್ಪೇನಿನಲ್ಲಿ ಹಿಡಿದರು. ಸಂಶೋಧನಾಲಯಗಳಲ್ಲಿ ಅವುಗಳ ಚಲನವಲನಗಳನ್ನು ಅಭ್ಯಸಿಸುವ

ಸಲುವಾಗಿ ದೊಡ್ಡ ದೊಡ್ಡ ಪಂಜರಗಳನ್ನು ಕಟ್ಟಿ ಅದರಲ್ಲಿ ಉಷ್ಣತಾವಮಾನ, ಬೆಳಕು, ಆರ್ದ್ರತೆ, ಗುರುತ್ವಾಕರ್ಷಣಶಕ್ತಿ, ಶರೀರದಲ್ಲಿ ಗರ್ಭದ ಬೆಳವಣಿಗೆಯ ಪರಿಣಾಮಗಳನ್ನು ಸಂಶೋಧಿಸುತ್ತಿದ್ದಾರೆ. ಸುಮಾರು ೨೦% ಹಕ್ಕಿಗಳು ಗುಳೇ ಹೋಗುವವು. ೬೦% ಗುಳೇ ಹೋಗದಿದ್ದರೂ ಮಕ್ಕಳ ಲಾಲನೆ-ಪಾಲನೆಯಿಂದ ಬಿಡುಗೆವು. ಸಿಕ್ಕಾಗ, ಅಲ್ಲಿ, ಇಲ್ಲಿ, ಕಾಡಿನಲ್ಲಿ ಹಾರಾಡಿ ಬರುತ್ತವೆ. ಕಾಗೆ-ಗುಬ್ಬಚ್ಚಿಗಳಂತಹ ೨೦% ಪಕ್ಷಿಗಳು ಮಾತ್ರ ಇದ್ದಲ್ಲಿಯೇ ಇರುತ್ತವೆ.

ಕೆಲವೇ ಸಸ್ತನ ಪ್ರಾಣಿಗಳು ಗುಳೇ ಹೋಗುವವು. ಅಮೇರಿಕೆಯ ಕಾಡುಕೋಣಗಳು ಹಿಂಡುಗಟ್ಟಿ ಹುಲ್ಲುಗಾವಲು ಹುಡುಕುತ್ತ ಸಾವಿರಾರು ಮೈಲು ತಿರುಗುವವು; ~~ಶೀನದಿಮಾರಗಳೂ~~ ಗುಳೇ ಹೋಗುವವು. ಕಡಲಿನಲ್ಲಿ ವಾಸಿಸುವ ನೀರನಾಯಿಗಳು ನಡುಗಡ್ಡೆಗಳ ಮೇಲೆ ಗುಳೇ ಹೋಗುವವು. ಬೇಟೆಗಾರರು ಇಂತಹ ಸಮಯಗಳಲ್ಲಿಯೇ ಅವುಗಳ ಹತ್ಯಾಕಾಂಡ ನಡೆಸುವರು. ಕೆಲವು ಕಣ್ಣು-ಕಪ್ಪಡಿಗಳೂ ತಿಮಿಂಗಲಗಳೂ ವಲಸೆ ಹೋಗುವುದುಂಟು.

ಏಳು: ಸಾಮಾಜಿಕ ಸಂಘಟನೆ

ಮಾನವನ ಮಹಾ ವೈರಿ ಮಾನವನೇ ಆದರೂ ಉಳಿದ ಪ್ರಾಣಿ ಸಸ್ಯಗಳಿಂದ ಲಾಭ ಪಡೆಯಬೇಕಾದರೆ ನಾವೆಲ್ಲ ಸಂಘಟಿತರಾಗುತ್ತೇವೆ. ಮಾನವನು ಸಂಘ-ಜೀವಿಯಾದರೂ ಅದಕ್ಕಿಂತ ಹೆಚ್ಚು ಬುದ್ಧಿ-ಜೀವಿಯಾದ್ದರಿಂದ ಜಗತ್ತಿನ ಆಗು-ಹೋಗುಗಳನ್ನು ತನ್ನ ನಿಯಂತ್ರಣದಲ್ಲಿಡಲು ಯತ್ನಿಸುತ್ತಾನೆ. ಆದರೆ ಸಮಾಜ-ಸಂಘಟನೆಯಲ್ಲಿ ಮಾನವನನ್ನು ನಾಚಿಸುವ ಪ್ರಾಣಿಗಳೂ ಇವೆ.

ಬಹುಸಂಖ್ಯಾತ ಕೆಳವರ್ಗದ ಪ್ರಾಣಿಗಳು ಒಂಟಿ-ಜೀವಿಗಳು. ಕೀಟಗಳಲ್ಲಿ ಸಂಘಜೀವನದ ವಿವಿಧ ಹಂತಗಳು ಕಂಡುಬರುತ್ತವೆ. ಮಣ್ಣಿನ ಗೂಡು ಕಟ್ಟಿಕೊಳ್ಳುವ ಒಂಟಿ ಕಣಜ ಇರುವಂತೆ ಸಾಮಾಜಿಕ ಜೀವನ ನಡೆಸುವ ಕಣಜವೂ ಇದೆ; ಇದು ಕೊರಡು ಮತ್ತು ಪರ್ಣಗಳನ್ನು ದವಡೆಗಳಿಂದ ಕಡಿದು ಕಾಗದದಂತಹ ಪದಾರ್ಥ ತಯಾರಿಸಿ ಅದನ್ನು ಜೋಡಿಸುತ್ತ ನೂರಾರು ಕೋಣೆ (ಖಾನೆ) ಗಳ ಅರಮನೆಯನ್ನೇ ಕಟ್ಟುವದು. ಇದಕ್ಕೆ ವೈರಿಗಳ ರಕ್ಷಣಾಕವಚ ಬೇರೆ ಇರುತ್ತದೆ. ಅವುಗಳ ಸಮಾಜದಲ್ಲಿ ಹೆಣ್ಣಿಗೇ ಪ್ರಾಧಾನ್ಯ; ಅಂತೆಯೇ ರಾಣಿ-ಕೀಟ

ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸಿ ಗೃಹಕೃತ್ಯದ ಸಹಾಯಕ್ಕೆ ಬೇಕಾದ ಸೇವಕರನ್ನಾಗಿ ಹೆಣ್ಣು-ಕೀಟಗಳನ್ನೇ ನೇಮಿಸಿಕೊಳ್ಳುತ್ತದೆ. ಪುರುಷರ ಸ್ಥಾನ ಇಂಗ್ಲಂಡಿನಲ್ಲಿ ರಾಣಿಯ ಪತಿಯಂತೆ. ಚಳಿಗಾಲದಲ್ಲಿ ರಾಣಿ ಮಾತ್ರ ಬದುಕಿದ್ದು ಉಳಿದವು ಸಾವನ್ನು ಅಪ್ಪಿಕೊಳ್ಳುತ್ತವೆ. ಬೇಸಿಗೆ ಬಂದಾಗ ರಾಣಿ-ಕೀಟ ಹೊಸ ವಸಾಹತನ್ನು ಪ್ರಾರಂಭಿಸುತ್ತದೆ. ಇದಕ್ಕಾಗಿ ಹೊಸದಾಗಿ ಹುಟ್ಟಿದ ಸೇವಕ-ವೃಂದದ ಸಹಾಯ ಪಡೆಯಬಹುದು. ಇಲ್ಲವೆ ಹಿಂದಿನ ಗೂಡನ್ನೂ ಬಳಸಬಹುದು. ಈ ಕೀಟ ಬೇಟೆಯಾಡುವದರಲ್ಲಿ ಹೆಸರುವಾಸಿ. ಜಗತ್ತಿನಲ್ಲಿ ಉದಯಿಸುವ ಮರಿ-ಪ್ರಾಣಿಗಳು ಶುಚಿ, ರುಚಿ, ತಾಜಾಮಾಂಸಾಹಾರವನ್ನೇ ಸ್ವೀಕರಿಸುವದರಿಂದ ರಫ್ರಿಜಿರೇಟರ್ ಇಲ್ಲದ ರಾಣಿ-ಕೀಟ ತನ್ನದೇ ಉಪಾಯ ಹುಡುಕಿದೆ. ಕಣಜವನ್ನು ಪೀಡಿಸಿ ಅದರ ಅಂಬುವಿನಿಂದ ಚುಚ್ಚಿಸಿಕೊಂಡವರಿಗೆ ಅದರ ನೋವಿನ ತೀವ್ರತೆ ಎಷ್ಟು ಇರುತ್ತದೆಂದು ಅರಿವಿರುವದು. ಈ ಆಯುಧ ಹೊತ್ತು ಜೇಡು-ಹುಳಗಳ ಬೇಟೆಗೆ ಹೊರಡುತ್ತದೆ. ಉಳಿದ ಕೀಟಗಳನ್ನು ಆಹುತಿ ತೆಗೆದುಕೊಳ್ಳಲು ನಿರ್ಮಿಸಿದ ಜೇಡಬಲೆಯನ್ನು ಲೆಕ್ಕಿಸದೇ ಆಕ್ರಮಿಸಿ, ಜೇಡು ಇದರ ಅಂಬುವಿನ ಪ್ರಭಾವಕ್ಕೆ ಮೂರ್ಛೆಹೋದಾಗ ಅದನ್ನು ದವಡೆಯಲ್ಲಿ ಹೊತ್ತು ತಂದು ರಾಣಿ ಮೊಟ್ಟೆ ಇಟ್ಟ ಪ್ರತಿಯೊಂದು ಕೊಠಡಿಯಲ್ಲಿ ೪-೫ ಅಂತಹ ಪ್ರಾಣಿಗಳನ್ನು ಇಟ್ಟು ಬಾಗಿಲು ಮುಚ್ಚುತ್ತದೆ,

ಮಳೆಗಾಲದಲ್ಲಿ ಹಾರುತ್ತ ಬಂದು ದೀಪಕ್ಕೆ ಮುತ್ತುವ ವರಲೆಗಳಲ್ಲಿ ಸಹಕಾರಿ ಸಂಘಗಳು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಿವೆ. ಗಂಡು-ಹೆಣ್ಣು ಜೀವನದಲ್ಲಿ ಒಮ್ಮೆ ಮಾತ್ರ ರೆಕ್ಕೆ ತಳೆದು ಜೀವನದ ಸಂಗಾತಿಯನ್ನು ಆರಿಸಲು ಹಾರುತ್ತ ಸ್ವಯಂವರ ನಡೆಸುತ್ತವೆ. ಸ್ವಯಂವರದಲ್ಲಿ ಯಶಸ್ವಿಯಾದ ಧೀರನೊಂದಿಗೆ ಭೂಮಿಗಿಳಿದು ದಂಪತಿಗಳು ರೆಕ್ಕೆ ತ್ಯಜಿಸಿಬಿಡುತ್ತವೆ. ವಾಡಿಕೆಯಲ್ಲಿ ಈ ಜೋಡಿಗೆ ರಾಜಾ-ರಾಣಿ ಎಂದು ಕರೆಯುತ್ತಾರೆ. ಸಂಯೋಗದ ನಂತರ ಅವು ಹೊಸ ವಸಾಹತವನ್ನು ಪ್ರಾರಂಭಿಸುತ್ತವೆ. ಗರ್ಭವತಿ ರಾಣಿ-ಕೀಟ ಪ್ರತಿ ನಿಮಿಷಕ್ಕೆ ಅರವತ್ತರಂತೆ ಮೊಟ್ಟೆಯಿಡುತ್ತ ಹೋಗುತ್ತದೆ. ಇವುಗಳಿಂದ ಯುವರಾಜ-ಯುವರಾಣಿ, ಸೇವಕರು ಮತ್ತು ಸೈನಿಕರು ಹುಟ್ಟಿಕೊಳ್ಳುತ್ತಾರೆ. ರಾಜ-ರಾಣಿ ಆಕಸ್ಮಿಕ ಮರಣಕ್ಕೆ ಈಡಾದರೆ ಯುವರಾಜ ರಾಣಿ-ಕೀಟಗಳು ಸಂತಾನೋತ್ಪತ್ತಿ ಕಾರ್ಯವನ್ನು ಕೈಕೊಳ್ಳಬೇಕಾಗುವದರಿಂದ ಕಿರಿದಾದ ಪಕ್ಕಗಳು

ಮತ್ತು ಜನನೇಂದ್ರಿಯಗಳನ್ನು ಪಡೆದಿರುತ್ತವೆ. ಅದೇ ಸೇವಕವರ್ಗಕ್ಕೆ ಇದಾವವೂ ಇರುವದಿಲ್ಲ. ಅಲ್ಲದೇ ಕಣ್ಣು ಕೂಡ ಇರುವದಿಲ್ಲ. ವಸಾಹತಿನ ಅಭಿವೃದ್ಧಿಗಾಗಿ ದುಡಿಯುವದೇ ಅವುಗಳ ಧರ್ಮ. ಸೇವಕವರ್ಗ ಕೆಲಸದಲ್ಲಿ ತೊಡಗಿದಾಗ ಸೈನಿಕ ಕೀಟಗಳು ಕಾವಲಿಗೆ ನಿಂತಿರುತ್ತವೆ. ಸೇವಕರಿಗೆ ದೊಡ್ಡ ತಲೆ, ಭಾರೀ ದವಡೆಗಳಿದ್ದು ಎಂತಹ ಪ್ರಬಲವೈರಿ-ಕೀಟಗಳನ್ನೂ ಕಡಿದು ತುಂಡರಿಸಬಲ್ಲವು. ಕೆಲವು ಸೈನಿಕ ಕೀಟಗಳಿಗೆ ಕಿರಿ ದವಡೆಗಳಿದ್ದರೂ ಅವು ಉರಿದೇಳುವ ರಸಾಯನಗಳಿಂದ ತುಂಬಿ ಇದ್ದದರಿಂದ ಅದನ್ನು ವೈರಿಗಳ ಮೇಲೆ ಸಿಂಪಡಿಸಿದಾಗ ಅವು ಪ್ರಜ್ಞೆ ತಪ್ಪಿ ಬೀಳುವವು. ಪಟ್ಟದ-ರಾಣಿ ಸುಂದರಿಯಾಗಿರಬೇಕು, ಆಕಾರ, ವಯಸ್ಸಿನಲ್ಲಿ ಅರಸನಿಗಿಂತ ಕಿರಿಯಳಿರಬೇಕು, ಎಂಬ ರೂಢಿ ವರಲೆವರ್ಗಕ್ಕೆ ಅನ್ವಯಿಸುವದಿಲ್ಲ ಅರಸು ಕಾಲು ಇಂಚು ಉದ್ದವಿದ್ದರೆ ಅರಸಿಯು ಅವನಿಗಿಂತ ಇಪ್ಪತ್ತು ಪಟ್ಟು ಉದ್ದವಿದ್ದು ತೂಕದಲ್ಲಿ ನೂರು ಪಟ್ಟು ಹೆಚ್ಚು ಇರಬಹುದು! ಅರಸಿಗೆ ಮೈಯೆಲ್ಲ ಮೊಟ್ಟೆಗಳ ಉಗ್ರಾಣವಿರುವದರಿಂದ ಚಲಿಸಲೂ ಆಗದು. ಅಂತೆಯೇ ಅವಳ ಯಾವತ್ತೂ ಸೇವೆಯನ್ನು ಸೇವಕವರ್ಗ ಮಾಡುವದು. ಆಹಾರವನ್ನು ಕೂಡ ಚರ್ವಿಸಿ ಸುಲಭವಾಗಿ ಜೀರ್ಣಿಸುವಂತೆ ಮಾಡಿ ರಾಣಿಗೆ ಉಣಿಸುವದುಂಟು. ಯಾವ ಮಾನವ-ಮಹಾರಾಣಿಗೆ ತಾನೇ ಈ ಭಾಗ್ಯವಿದೆ? ಈ ರಾಣಿ ಜೀವಮಾನದಲ್ಲಿ ಮೂವತ್ತು ಲಕ್ಷ ಕೀಟಗಳಿಗೆ ಜನ್ಮವಿತ್ತರೆ ಮಾನವ-ರಾಣಿ ಮೂರು ಮಕ್ಕಳನ್ನು ಪಡೆದರೆ ಮಹಾಸಾಧನೆಯಾಯಿತು. ಇಷ್ಟೆಲ್ಲ ಪ್ರೋಟೀನಭರಿತ ತತ್ತಿಗಳು ಶರೀರದಲ್ಲಿ ಇರುವದರಿಂದ ಅದು ಅತಿ ಪೌಷ್ಠಿಕ ಆಹಾರವೆಂದು ಪರಿಗಣಿಸಲಾಗುತ್ತದೆ. ಅಶಕ್ತರಿಗೆ, ರೋಗಿಗಳಿಗೆ ಅವನ್ನು ಸೇವಿಸಲು ಹೇಳುವದರಿಂದ ಮತ್ತು ಒಂದೇ ಒಂದು ರಾಣಿ-ಕೀಟವನ್ನು ಪಡೆಯಲು ಐದಾರು ಅಡಿ ಅಗೆಯಬೇಕಾಗುವದರಿಂದ ಅವನ್ನು ೨೦-೨೫ ರೂಪಾಯಿಗೆ ಒಂದರಂತೆ ಮಾರಲಾಗುತ್ತಿದೆ. ವರಲೆಗಳ ವಸತಿಗಳು ತೀರ ಚಿಕ್ಕವೂ ಇರಬಹುದು, ಇಲ್ಲವೇ ಆಫ್ರಿಕಾಖಂಡದಲ್ಲಿ ಮಾನವರ ವಾಸಕ್ಕೆ ಅನುಕೂಲವಾಗುವಷ್ಟು ಅನುಕೂಲವೂ ಇರಬಹುದು. ಈ ಮನೆಗಳಲ್ಲಿ ಹತ್ತಾರು ಬೇರೆ ಜಾತಿಯ ಅತಿಥಿ-ಪ್ರಾಣಿಗಳೂ ಸದಾ ಉಪಸ್ಥಿತವಿರುತ್ತವೆ.

ಇರುವೆಗಳ ರಾಜ್ಯವೇ ಒಂದು ಲೋಕವಿದ್ದಂತೆ. ಅಲ್ಲಿ ನಡೆಯುವ ಚಮತ್ಕಾರಗಳು 'ಡಿಸ್ನಿಲ್ಯಾಂಡ್'ಗೂ ನಾಚಿಸುವಂತಹವು, ಸಂಧಿ-ಬಿಲ, ನೆಲಗಳಲ್ಲಿ ತಮ್ಮ ರಾಜ್ಯ ಕಟ್ಟಿಕೊಳ್ಳುತ್ತವೆ. ಪ್ರೌಢಾವಸ್ಥೆಗೆ ಬಂದ ಹೆಣ್ಣು ರೆಕ್ಕೆಗಳನ್ನು

ತಳೆದು ಹಾರಾಡುವ ಗಂಡಿನ ಮೋಹಪಾಶದಲ್ಲಿ ಬೀಳುತ್ತದೆ. ಅವು ಜೋಡಿಯಾಗಿ ಹಾರುತ್ತಾ ಸ್ಪರ್ಶ, ಕೂಟದಲ್ಲಿ ಮೈಮರೆಯುತ್ತವೆ. ಬೆಳದಿಂಗಳ ರಾತ್ರಿಯಲ್ಲಿ ಮಂದಮಾರುತನು ಬೀಸುವಾಗ ನದಿ-ಕೊಳ್ಳಗಳನ್ನು ದಾಟುತ್ತ ಕಾಡಿನಲ್ಲಿ ತೇಲುತ್ತವೆ. ಮಾನವನಿಗೂ ಲಭ್ಯವಿಲ್ಲದ ಮಧುಚಂದ್ರ ಇರುವೆಗಳದು. ಈ ರಾಜಾ-ರಾಣಿ ತಮ್ಮದೇ ರಾಜ್ಯ ಕಟ್ಟಲು ಪ್ರಾರಂಭಿಸುತ್ತವೆ. ಪ್ರಣಯಿಗಳಾಗಿ ಹಾರಲು ಬಳಸಿದ ರೆಕ್ಕೆಗಳನ್ನು ಕಳಚಿ ರಾಜ್ಯಸ್ಥಾಪನೆಗೆ ಯೋಗ್ಯ ಸ್ಥಳ ಹುಡುಕಿ ರಾಣಿ ತನ್ನ ವಂಶನಿರ್ಮಾಣಕಾರ್ಯದಲ್ಲಿ ತೊಡಗುತ್ತದೆ. ಜನನೇಂದ್ರಿಯಗಳನ್ನು ಪಡೆಯದ ಸೇವಕವರ್ಗ, ಕೋಟೆ-ಕೊತ್ತಲಗಳು, ಮಹಾರಾಣಿಗಾಗಿ ದಿವಾಣ-ಈ-ಖಾಸ, ಬರುವ ಅತಿಥಿಗಳಿಗಾಗಿ ದಿವಾಣ-ಈ-ಆಮ್ ಮೊದಲಾದ ವಿವಿಧ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸುವವು. ಒಂದೇ ಒಂದು ಇರುವೆ-ರಾಣಿಯ ರಾಜ್ಯದಲ್ಲಿ ೭,೩೦,೦೦೦ ಜನಸಂಖ್ಯೆ ಇರುವದೆಂದು ಎಣಿಸಲಾಗಿದೆ. ಮೋಜಿನ ಮಾತೆಂದರೆ ಇವುಗಳಲ್ಲಿ ೯೦% ಸೇವಕವರ್ಗ. ಇನ್ನೂ ಆಶ್ಚರ್ಯಕರ ಮಾತೆಂದರೆ ಈ ಸೇವಕವರ್ಗವೆಲ್ಲ ಅರಸ-ದಂಪತಿಯ ಸಂತಾನವೇ! ಸೇವಕವರ್ಗ ನಾಲ್ಕೂ ಕಡೆ ಸುತ್ತಾಡಿ ಸಿಹಿ, ತಿಣ್ಣೆ-ತಿಂಡಿ, ಕಾಳು-ಕಡಿ ಹುಡುಕುವವು, ಆಹಾರ ಸಂಗ್ರಹ ಕಂಡುಹಿಡಿದ ಸೇವಕರು ಅದು ಇರುವ ಜಾಗವನ್ನು ಅದರ ವಾಸನೆಯ ಮೂಲಕ ಉಳಿದ ಸೇವಕರಿಗೆ ತಿಳಿಸುವದರಿಂದ ಐದೇ ನಿಮಿಷಗಳಲ್ಲಿ ಅವು ಆಹಾರಕ್ಕಾಗಿ ಮುಗಿಬೀಳುವವು. ದ್ರವಪದಾರ್ಥಗಳನ್ನು ಬಾಯಲ್ಲಿ ಇಟ್ಟುಕೊಂಡರೆ, ಘನಪದಾರ್ಥಗಳನ್ನು ದವಡೆಗಳಲ್ಲಿ ಹಿಡಿದುಕೊಳ್ಳುವವು. ಸಾಯುತ್ತ ಬಿದ್ದ ಜಿರಳೆಯನ್ನು ಗೂಡಿಗೆ ಸಾಗಿಸುವಾಗ ಅವುಗಳ ಸಂಘಟನೆ, ಆಚರಿಸುವ ವಿಧಾನಗಳಿಗೆ ತಲೆದೂಗಬೇಕು. ಮಾನವರಲ್ಲಿಯಂತೆ ಇರುವೆ-ಸೇವಕವರ್ಗ ಸ್ವಾರ್ಥಪರವಲ್ಲ. ತಮಗೆ ದೊರೆತದ್ದೆಲ್ಲ ಗೂಡಿಗೇ ಕೊಂಡೊಯ್ದು ನಿರ್ಧರಿಸಿದ ಸ್ಥಾನದಲ್ಲಿ ಸಂಗ್ರಹಿಸುವವು. ಆರ್ದ್ರತೆಯಿಂದ ಧಾನ್ಯಗಳು ಚಿಗುರಿದಂತೆ, ಅವುಗಳ ಮೊಳಕೆಯನ್ನೇ ಕಡಿದುಹಾಕಿಬಿಡುವವು. ದ್ರವಪದಾರ್ಥಗಳನ್ನು ಸಂಗ್ರಹಿಸಲು ಡೊಳ್ಳುಹೊಟ್ಟೆಯ ಇರುವೆಗಳೇ ಬೇರೆ ಇರುವವು. ಪ್ರತಿಯೊಂದು ಸೇವಕ-ಜೀವಿಗೆ ದಿನಕ್ಕೆ ನಿರ್ದಿಷ್ಟಪಡಿಸಿದ ಆಹಾರವನ್ನೇ ಅವು ಸೇವಿಸುವವು.

ರಾಣಿಯ ಯೋಗಕ್ಷೇಮ ನೋಡಿಕೊಳ್ಳಲು ಬೇರೆಯೇ ಸೇವಕವರ್ಗವಿರುತ್ತದೆ. ಕಾಲಕಾಲಕ್ಕೆ ಆಹಾರ ಪೂರೈಸುವದು, ಮೈಯನ್ನು ದವಡೆಗಳಿಂದ ಸ್ವಚ್ಛ

ಮಾಡುವದು, ಹೆರಿಗೆಯಲ್ಲಿ ನೆರವಾಗುವದು ಇತ್ಯಾದಿ ಅವುಗಳ ಕರ್ತವ್ಯ. ರಾಣಿ ವಿಹಾರಕ್ಕಾದಿ ಗೂಡು ಬಿಟ್ಟು ಬಯಲಿನಲ್ಲಿ ಬಂದಾಗ ಅದರ ಸುತ್ತ ಅಂಗರಕ್ಷಕರೆಲ್ಲ ಸೇರಿ ಒಂದು ಪಡೆಯನ್ನೇ ನಿರ್ಮಿಸುತ್ತವೆ. ರಾಣಿಗೆ ತಂಗಾಳಿ ಸೋಕಿದಾಗ ಗೂಡಿಗೆ ಹಿಂದಿರುಗುವಂತೆ ಮನವೊಲಿಸುತ್ತವೆ. ಗೂಡಿನಲ್ಲಿ ಉಂಟಾದ ಕೊಳೆ, ಮೃತ ಇರುವೆಗಳ ದೇಹ ಮುಂತಾದವನ್ನು ಹೊತ್ತು ಹೊರಗೆ ಒಯ್ಯುತ್ತವೆ. ಇರುವೆಗೆ ಮೂತ್ರವೇ ಪ್ರಳಯವಂತೆ! ಇಂಥ ಪ್ರಳಯಕಾಲದಲ್ಲಿ ಧೃತಿಗೆಡದೇ ರಾಣಿಯನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿ, ಮೊಟ್ಟೆ-ಮರಿಗಳನ್ನು ಬಾಯಲ್ಲಿ ಹಿಡಿದು ಬೇರೆ ತಾಣಕ್ಕೆ ಸಾಗಿಸುವವು. ಇಂತಹ ಸಮಯದಲ್ಲಿ ಉದ್ದ ದವಡೆಯ ಸೈನಿಕರು ಬೆಂಗಾವಲಾಗಿ ನಿಲ್ಲುವರು.

ಕೆಲವು ಇರುವೆಗಳಲ್ಲಿ ಗುಲಾಮಗಿರಿ ಪದ್ಧತಿಯೂ ಇದೆ. ಅದಕ್ಕಾಗಿ ಒಂದು ಇನ್ನೊಂದರ ಮೇಲೆ ದಾಳಿಮಾಡುತ್ತವೆ. ಘನ-ಘೋರ ಯುದ್ಧವಾಗುತ್ತದೆ. ಒಂದು ಇನ್ನೊಂದರ ಮೀಸೆಯನ್ನು ತುಂಡರಿಸುತ್ತದೆ. ಕಾಲು ಮುರಿಯುತ್ತದೆ. ದವಡೆಯಿಂದ ಕಚ್ಚಿ ಉಂಟಾದ ಹುಣ್ಣಿನಲ್ಲಿ ತನ್ನ ಮೈಯಲ್ಲಿರುವ ಉರಿ ಏಳುವ ಫೊರಮಿಕ್ ಆಮ್ಲವನ್ನು ಸೇರಿಸುತ್ತದೆ. ತಲೆಯನ್ನು ಕಳೆದುಕೊಂಡ ಇರುವೆಗಳು ಮೈಯ್ಯ ತೀರಿಸಿಕೊಳ್ಳಲೋ, ವೈರಿಯನ್ನು ಆಕ್ರಮಿಸಲೋ ಎನ್ನುವಂತೆ ತಿರಗುತ್ತಿರುತ್ತವೆ. ಗೆದ್ದ ಇರುವೆಗಳು ತಮ್ಮ ಸತ್ತ ಬಾಂಧವರನ್ನು ಹೊತ್ತು ತಂದರೆ ಸೋತ ಇರುವೆಗಳು ಮೊಟ್ಟೆ-ಮರಿಗಳನ್ನು ಹೊತ್ತು ತರುವವು. ಗುಲಾಮರಾಗಿ ಬಂದ ಇರುವೆಗಳು ಎಂದೂ ಓಡಿಹೋಗಲು ಹವಣಿಸದೇ ತಮ್ಮ ಒಡತಿಯ ಸೇವೆಯನ್ನು ನಿಷ್ಠೆಯಿಂದ ಕೈಕೊಳ್ಳುವವು. ಕೆಲವು ಇರುವೆಗಳಲ್ಲಿಯಂತೂ ಗುಲಾಮರಿಲ್ಲದೇ ಗೂಡಿನಲ್ಲಿ ಯಾವ ಕೆಲಸಗಳೂ ನಡೆಯುವದಿಲ್ಲ. ಗೂಡಿನಲ್ಲಿ ಅತಿಥಿಗಳನ್ನು ಕರೆತರುವದೂ ಉಂಟು. ಸಸ್ಯ, ತಗಣಿ, ಎಫಿಡ, ಇರುವೆಗಳ ಆದರ ಆತಿಥ್ಯಕ್ಕೆ ಪಾತ್ರವಾದ ಕೀಟ. ಸೇವಕ-ಇರುವೆಗಳು ಗಿಡದಿಂದ ಗಿಡಕ್ಕೆ ಓಡಾಡಿ, ಅವುಗಳನ್ನು ಬಾಯಲ್ಲಿ ಹಿಡಿದು, ಗೂಡಿಗೆ ಸ್ಥಳಾಂತರಿಸುವವು. ಅವುಗಳಿಗೆ ಸಸ್ಯಾಹಾರ ಪೂರೈಸುವ ಸಲುವಾಗಿಯೇ ಕೃಷಿಮಾಡುವವು. ಎಫಿಡ ಮರಿಗಳನ್ನು ಆಗಾಗ್ಗೆ ವಾಯುವಿಹಾರಕ್ಕಾಗಿ ಎತ್ತಿಕೊಂಡು ಹೋಗುವವು. ಅವುಗಳ ಮೈಯಿಂದ ಹೊಮ್ಮುವ ಸಿಹಿ ದ್ರವ್ಯ ಅಮೃತದಂತೆ ಅವಕ್ಕೆ ಎನಿಸುವದರಿಂದ ಎಫಿಡಗಳಿಗೆ 'ಇರುವೆ-ಗೋವು' ಎಂಬ ಹೆಸರೂ ಇದೆ.

ಇರುವೆಗಳನ್ನು ಬೇಟೆಯಾಡಿ ಜೀವಿಸುವ ಕೀಟಗಳಿವೆ. ಅವಕ್ಕಾಗಿ ಒಂದು ಕುಣಿ ತೋಡಿ, ಇರುವೆ-ಭಕ್ಷಕ ಅದರ ತಳದಲ್ಲಿ ಕಾದು ಕೂತಿರುತ್ತದೆ. ಅತ್ತಿಂದಿತ್ತ ಓಡಿಯಾಡುವ ಇರುವೆಗಳು ಕಾಲು ಜಾರಿ ಕುಣಿಯಲ್ಲಿ ಬಿದ್ದವೆಂದರೆ ವೀರಸ್ವರ್ಗವನ್ನೇ ಪಡೆಯುವವು. ಎಂದಾದರೂ ಇರುವೆ-ರಾಣಿ ಇಂತಹ ಅಪಘಾತಕ್ಕೆ ಈಡಾದರೆ ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಗಬಾರದೆಂದು ಪ್ರತಿ ಗೂಡಿನಲ್ಲೂ ಯುವರಾಣಿಯರು ಇದ್ದೇ ಇರುತ್ತಾರೆ. ಅವುಗಳ ಸರದಿ ಬಂದಾಗ ತಾಯಿಯಂತೆ ಎಲ್ಲ ಕಾರ್ಯವಿಧಾನ ಮುಗಿಸಿ ರಾಣಿ-ಪದವಿ ಪಡೆಯುತ್ತವೆ.

ಜೇನ್ನೊಣಗಳು ಮಾನವ ಬೆಳೆಸಿದ ಹೂ-ಹಣ್ಣು ಗಿಡಗಳ ಪರಾಗದ ಪ್ರಸಾರ ಮಾಡುವದರಿಂದ, ಪ್ರತಿಯೊಂದು ಹೂವಿನಿಂದ ಸಂಗ್ರಹಿಸಿದ ಮಧುವನ್ನು ತನ್ನ ಬಾಯಿ ಚಪಲಕ್ಕಾಗಿ ಬಳಸುವದರಿಂದ, ಅವುಗಳ ಬಗ್ಗೆ ಹೆಚ್ಚಿನ ಆದರ ತೋರಿಸಿ ಮನೆಯ ತೋಟಗಳಲ್ಲಿ ಸಾಕಿ ಸಲಹುವನು. ಇರುವೆಗಳಂತೆ ಜೇನುನೊಣಗಳಲ್ಲಿಯೂ ಅನೇಕ ಪ್ರಕಾರಗಳುಂಟು. ಇವುಗಳಲ್ಲಿ ಸಂಘ-ಜೇನ್ನೊಣ ಮಾನವ ಸಾಕುವ ಕೆಲವೇ ಕೀಟಗಳಲ್ಲಿ ಒಂದು. ಇವುಗಳಲ್ಲಿಯೂ ರಾಣಿಯೇ ಪ್ರಬಲ. ರಾಜನ ಕೆಲಸ ರಾಣಿಯೊಂದಿಗೆ ನಡೆಸುವ ಪ್ರಣಯವೊಂದೇ. ಹೀಗಾಗಿ ಆಹಾರ ಕಡಿಮೆಯಾದಾಗ ಅದನ್ನು ಹೊರಗೆ ಅಟ್ಟಿ ಕೊಲ್ಲಲೂ ಹಿಂದೆ ಮುಂದೆ ನೋಡುವದಿಲ್ಲ. ಸೇವಕವರ್ಗ, ಶರೀರದಲ್ಲಿ ಉತ್ಪನ್ನವಾಗುವ ಮೇಣದಿಂದ ನೂರಾರು ಖಾನೆಗಳ ಗೂಡನ್ನು ಕಟ್ಟುವವು. ಪ್ರತಿಯೊಂದು ಗೂಡಿನಲ್ಲಿ ಒಂದೊಂದೇ ಮೊಟ್ಟೆ ಸೇರಿಸಲಾಗುತ್ತದೆ. ಮಧುವನ್ನು ಸಂಗ್ರಹಿಸಲು ಬೇರೆಯೇ ಕೋಣೆಗಳನ್ನು ಬಳಸಲಾಗುತ್ತದೆ. ಇವೇ ಹೂವಿನಿಂದ ಹೂವಿಗೆ ಹಾರುತ್ತ ಮಕರಂದವನ್ನು ಸಂಗ್ರಹಿಸುತ್ತವೆ. ಇವುಗಳ ಮಿಶ್ರಣಮಾಡಿ ತಮ್ಮ ಲಾಲಾರಸದೊಂದಿಗೆ ಸೇರಿಸಿದಾಗ ಅದು ಜೇನುತುಪ್ಪವಾಗುತ್ತದೆ. ಒಂದು ಗೂಡಿನ ಸೇವಕರು ಒಂದೇ ತರದ ಹೂ-ಗಿಡಗಳಿಗೆ ಭೆಟ್ಟಿ ಕೊಡುವದರಿಂದ ನಮಗೆ ಮಾವು, ಗೋಡಂಬಿ, ಸೀಗೇಕಾಯಿ ಹೀಗೆ ಬೇರೆ ಬೇರೆ ಜಾತಿಯ ಜೇನುತುಪ್ಪಗಳು ಮಿಶ್ರಣವಾಗದೆ ಸಿಗಲು ಸಾಧ್ಯವಿದೆ. ಮಳೆಗಾಲದಲ್ಲಿ ಇವುಗಳಿಗೆ ಮಧು ಸಿಗದೇ ಹಸಿವೆಯಿಂದ ಬಳಲಿ ಸಾವನ್ನು ಅಪ್ಪುವವು. ಅಂತಹ ಸಮಯದಲ್ಲಿ ಅವಕ್ಕೆ ಸಕ್ಕರೆ-ನೀರು ಪೂರೈಸಿದರೆ ಅವು ಬದುಕಿಕೊಳ್ಳುವವು. ಸರ್ವಸಾಧಾರಣವಾಗಿ ಒಂದು ಗೂಡಿನಲ್ಲಿ ಸುಮಾರು ಐವತ್ತೈದು ಸಾವಿರ ಪ್ರಜೆಗಳಿರುವರು. ಒಂದು ವರ್ಷದಲ್ಲಿ ಸುಮಾರು ಎರಡು ಲಕ್ಷ

ಪ್ರಜೆಗಳು ಜನ್ಮತಾಳುತ್ತವೆ. ಒಬ್ಬಳೇ ರಾಣಿ ಐದುಲಕ್ಷ ಮಕ್ಕಳನ್ನು ಕೊಡಬಲ್ಲಳು. ಇರುವೆಗಳಂತೆಯೇ ರಾಣಿ ಆಕಸ್ಮಿಕವಾಗಿ ನಿಧನಹೊಂದಿದರೆ ಯುವರಾಣಿ ಪಟ್ಟ ಏರುವಳು. ಆದರೆ ಇರುವೆಗಳಂತೆ ಒಂದೇ ಗೂಡಿನಲ್ಲಿ ಸದಾಕಾಲ ಇರದೆ ಆಗಾಗ ಗುಳೇ ಹೋಗುವವು. ಮಹಾರಾಣಿಯನ್ನು ಹಿಂಬಾಲಿಸಿ ಹೊರಡುವ ಪ್ರಜೆಗಳು ಸುಮಾರು ಮೂವತ್ತುಸಾವಿರ ಇರುವರೆಂದು ಅಂದಾಜು ಮಾಡಲಾಗಿದೆ. ಅವುಗಳ ಈ ವರ್ತನೆಯಿಂದಲೇ ಜೇನು ಸಾಕುವದು ಸುಲಭವಾಗಿದೆ. ಮಾನವನಿರ್ಮಿತ ಗೂಡಿನಲ್ಲಿ ರಾಣಿ-ಹುಳು ತಂದು ಬಿಟ್ಟರೆ ಪ್ರಜೆಗಳು ತಂತಾನೇ ಬಂದು ವಾಸಿಸುತ್ತಾರೆ.

ಶಂಖ, ನಕ್ಷತ್ರ-ಮೀನುಗಳು ಒಂಟಿಜೀವಿಗಳು. ಮೀನುಗಳಲ್ಲಿ ಸಾಮಾಜಿಕ ಜೀವನವಿಲ್ಲದಿದ್ದರೂ ಅವು ಗುಂಪುಗಟ್ಟಿ ಜೀವಿಸುವದು ಹೆಚ್ಚು. ಅಂತೆಯೇ ಮೀನುಗಾರರಿಗೆ ಒಂದೇ ಬಗೆಯ ಮೀನು ಹಿಡಿಯುವದು ಸಾಧ್ಯವಾಗಿದೆ. ಕೆರೆ ಹೊಂಡಗಳಲ್ಲಿ ಕಪ್ಪೆಗಳ ಸಮೂಹಗಳೇ ಕಂಡುಬಂದರೂ ಅವಕ್ಕೆ ಒಂದರ ಸಲುವಾಗಿ ಇನ್ನೊಂದು ಎಂಬ ಪ್ರವೃತ್ತಿ ಇಲ್ಲ. ಓತಿಕಾಟ-ಉಡಗಳೂ ಒಂಟಿಜೀವಿಗಳೇ! ಹಕ್ಕಿಗಳು ಕುಟುಂಬ-ಜೀವನಕ್ಕೆ ಹೆಸರುವಾಸಿ. ಕಾಡಿನಲ್ಲಾಗಲಿ ಊರಿನಲ್ಲಾಗಲಿ, ಮರದ ಮೇಲಾಗಲಿ ಅವು ತಮ್ಮತಮ್ಮ ರಾಜ್ಯಗಳನ್ನು ನಿರ್ಧರಿಸಿಕೊಂಡು ಬಿಡುತ್ತವೆ. ಅವುಗಳ ಅತಿಕ್ರಮಣವಾದಾಗ ಚೀರಾಡಿ ಹಾರಾಡುತ್ತವೆ. ಆಕ್ರಮಣಗಾರರನ್ನು ಓಡಿಸುವ ತನಕ ವಿಶ್ರಾಂತಿಸುವದಿಲ್ಲ. ಎಷ್ಟೋ ಪಕ್ಷಿಗಳು ಏಕಪತ್ನೀವೃತಸ್ಥರಂತೆ, ಪತಿವ್ರತೆಯರಂತೆ ದಾಂಪತ್ಯ-ಧರ್ಮವನ್ನೂ ಆಚರಿಸುವವು. ಪಕ್ಷಿಗಳಲ್ಲಿ ಕೆಲವು ಹಾಡುವವು. ಕೆಲವು ನರ್ತಿಸುವವು. ಆಕರ್ಷಕ ರೂಪವುಳ್ಳವು ಎಲ್ಲವೂ ಗಂಡುಹಕ್ಕಿಗಳೇ!

ಸಸ್ತನ-ಪ್ರಾಣಿಗಳು ಸಾಮಾಜಿಕ ಜೀವಿಗಳೆಂದು ಹೆಸರುವಾಸಿಯಾಗಿವೆ. ಕಾಡಾನೆಗಳು ಗುಂಪಾಗಿ ಬದುಕಿ ತಂಡಗಳಲ್ಲಿಯೇ ತಿರುಗುತ್ತವೆ. ಒಂದನ್ನು ನೋವಿಗೆ ಗುರಿಪಡಿಸಿದರೆ ಎಲ್ಲವೂ ಮೇಲೇರಿ ಬರುತ್ತವೆ. ಅಪಾಯ ಬರಲಿದೆ ಎಂದಾಗ ಘೀಳಿಟ್ಟು ಉಳಿದವುಗಳನ್ನು ಎಚ್ಚರಿಸುತ್ತವೆ. ಇದರಂತೆ ಹುಲಿ, ಸಿಂಹ, ಚಿರತೆಗಳು ಉಳಿದ ಪ್ರಾಣಿಗಳಿಗೆ ಕ್ರೂರಿಗಳಾಗಿ ಕಂಡರೂ ತಮ್ಮ ಜೀವ-ಸಂಗಾತಿಯನ್ನು ಮರಿಗಳನ್ನು ಮಮತೆಯಿಂದ ಸಲಹುತ್ತವೆ. ನೀರಿನಲ್ಲಿ ಇರುವ ಸಸ್ತನ ಪ್ರಾಣಿಗಳು ಸಂಘಜೀವನ ನಡೆಸುತ್ತವೆ. ಕಪಿವರ್ಗ ಒಂದರ ಹೇನು ಇನ್ನೊಂದು

ಹೆಕ್ಕುವಾಗ, ಹತ್ತಾರು ಕೂಡಿ ಕಣ್ಣುಮುಚ್ಚಾಲೆ ಆಡುವಾಗ ಮಾನವನಂತೆ ಸಿಗರೇಟು ಸೇದಿ ಆತ ಕಲಿಸಿದ್ದೆಲ್ಲ ಕಲಿತು, ವಿವಿಧ ಯಂತ್ರೋಪಕರಣಗಳನ್ನೂ ನಡೆಸುವಾಗ ಅವು ನಮ್ಮ ಸಂಬಂಧಿಗಳು ಹೌದೆಂದು ಅನಿಸದೇ ಇರುವದೇ?

ನಾವು ಸಂಘಜೀವನಕ್ಕಾಗಿ ಅತಿಯಾಗಿ ಅಭಿಮಾನಪಡುತ್ತೇವೆ. ಆದರೆ ಈ ಸಾಂಘಿಕ ಪ್ರವೃತ್ತಿಯೇ ನಮ್ಮನ್ನು ಸ್ವಾರ್ಥಿ, ಸಂಕುಚಿತ ಮನೋವೃತ್ತಿಯುಳ್ಳವರನ್ನಾಗಿ ಮಾಡಿರಬೇಕು. ಬಾಯಿಂದ ನಾವು ವಿಶ್ವಕುಟುಂಬಿಗಳೆಂದರೂ ನೆರೆರಾಜ್ಯಗಳನ್ನು ಕಂಡರೆ ಆಗುವದಿಲ್ಲ. ನೆರೆಭಾಷೆ ಕೇಳಿದರೆ ಸಹಿಸುವದಿಲ್ಲ. ಪಾಕಿಸ್ತಾನ ಚೀನಗಳೊಡನೆ ಮೈತ್ರಿ ಇಲ್ಲ. ನಿಸರ್ಗದತ್ತವಾಗಿ ಬಂದ ಪೆಟ್ರೋಲನ್ನು ಉಳಿದ ಜನಾಂಗಗಳ ಹಿತಸಾಧನೆಗೆ ಕೊಡಲು ಅರಬರು ಸಿದ್ಧರಿಲ್ಲ. ಭೂಮಿಯು ಒಂದು ಭಾಗದಲ್ಲಿ ಹಸಿವೆಯಿಂದ ಮಾನವನು ಸಾಯುತ್ತಿದ್ದಾಗ ಇನ್ನೊಂದು ಭಾಗದಲ್ಲಿ ಜೀರ್ಣವಾಗದಷ್ಟು ಆಹಾರ ಬೆಳೆದು ನಂತರ ಹಾಳುಮಾಡುತ್ತಾರೆ. ಜಗತ್ತಿನಲ್ಲಿ ಅಸಂಖ್ಯ ಬಡವರು ನಿರ್ಗತಿಕರಿದ್ದರೂ ಅಣ್ವಸ್ತ್ರ, ಯುದ್ಧಗಳನ್ನು ನಿಲ್ಲಿಸಿ ಅದರಲ್ಲಿ ಖರ್ಚಾಗುವ ಹಣವನ್ನು ಮಾನವನ ಕಲ್ಯಾಣಕ್ಕಾಗಿ ಬಳಿಸಲು ನಮ್ಮಿಂದ ಸಾಧ್ಯವಾಗಲಿಲ್ಲ. ಇಬ್ಬರಿದ್ದಾಗಿ ಇನ್ನೊಬ್ಬರು ಜೀವಿಸುವ ಕಲೆಯನ್ನು ನಾವು ಕೀಟಗಳಿಂದ ಕಲಿಯಬೇಕೆಂದು ಕಾಣುತ್ತದೆ.

ಎಂಟು : ನಾದಲೋಲರು

ಸಂಪರ್ಕ ಸಂಘಜೀವನದ ಉಸಿರು. ಮಾನವನಿಗೆ ಮಾತನಾಡಲು ಬಾರದಿದ್ದರೆ ಅವನು ಚಂದ್ರಲೋಕಕ್ಕೆ ಹೋಗುವದಿರಲಿ ತನ್ನ ಊರು ಬಿಟ್ಟು ಹೊರಗೆ ಹೋಗುತ್ತಿದ್ದನೋ ಇಲ್ಲವೋ! ಸಾಂಘಿಕ ಜೀವನ ನಡೆಸುವ ಜೀವಿಗಳಲ್ಲಿ ಒಂದಿಲ್ಲ ಒಂದು ಬಗೆಯ ಸಂಪರ್ಕ-ವ್ಯವಸ್ಥೆ ಇದ್ದದ್ದು ಕಂಡುಬರುತ್ತದೆ. ಇರುವೆಗಳ ಸಾಲು ಹೊರಟಾಗ ಕಣ್ಣಿಟ್ಟು ನೋಡಿದರೆ, ವಿರುದ್ಧ ದಿಕ್ಕಿನಿಂದ ಬರುವ ಕೆಲಸ-ಗಾರರು ಒಂದು ನಿಮಿಷ ಜೊತೆಗಿದ್ದು ಮೀಸೆಗಳನ್ನು ಸ್ಪರ್ಶಿಸಿಕೊಳ್ಳುವದು ಕಾಣದಿರದು. ಇದು ವಿಚಾರವಿನಿಮಯ ಮಾಡಿಕೊಳ್ಳುವ ಇರುವೆಗಳ ಸಂಪರ್ಕ ಭಾಷೆ. ಇರುವೆಯೊಂದು ಆಹಾರ ಹುಡುಕುತ್ತ ತಿರುಗುವಾಗ ಉಂಡಿಯೊಂದನ್ನು ಕಂಡರೆ ಅದರ ಸುವಾಸನೆ ಹೊತ್ತು ತನಗೆ ಭೇಟಿಯಾದ ಬಂಧುಗಳಿಗೆಲ್ಲ ಆ ವಾಸನೆಯನ್ನು ಮೀಸೆಗೆ ಸವರುತ್ತ ಹೋಗುತ್ತದೆ. ಪ್ರತಿ ಇರುವೆಯೂ ಇದನ್ನೇ ಮಾಡುವದರಿಂದ ಮೊದಲ ಇರುವೆ ಲಾಡುವನ್ನು ಕಂಡ ಐದೇ ನಿಮಿಷಗಳಲ್ಲಿ ಐನೂರು ಇರುವೆ ಲಾಡುವಿಗೆ ಮುತ್ತಿಕೊಂಡಿರುತ್ತವೆ. ಇರುವೆಗಳ ಮೀಸೆ

ಗಳಲ್ಲಿ ವಾಸನೆ ಗ್ರಹಿಸುವ ಅತಿ ಸೂಕ್ಷ್ಮ ಗ್ರಂಥಿಗಳು ಇವೆ. ಈ ಗ್ರಂಥಿಗಳ ಆಧಾರ ದಿಂದಲೇ ಒಂದು ಇರುವೆ ಹೊರಟ ವಾಸನೆ ಹಿಡಿದು ಇನ್ನೊಂದು ಅದೇ ದಾರಿ ಯಿಂದ ಹೊರಡುವದರಿಂದ ಇರುವೆಗಳು ಸಾಲಾಗುತ್ತವೆ, ಈ ಸಾಲಿಗೆ ಸ್ವಲ್ಪ ವಾದರೂ ಆತಂಕವಾದರೆ ಅವು ಲಾಡುವಿಗೆ ಮುಟ್ಟುವ ಬದಲು ಬೇರೆ ಎಲ್ಲಿಗೋ ಮುಟ್ಟುವವು.

ಹಲವಾರು ಪಾತರಗಿತ್ತಿಗಳು, ತಮ್ಮ ಪತಿ ಪ್ಯಾರಿಸಿನ ಸುಗಂಧದ್ರವ್ಯ ತಂದು ಕೊಡದಿದ್ದರೂ ತಾವೇ ಸಿದ್ಧಮಾಡಿಕೊಳ್ಳುತ್ತವೆ. ರಸಿಕ ಗಂಡು, ಮೂರು-ನಾಲ್ಕು ಮೈಲುಗಳ ದೂರದಿಂದಲೇ ತನ್ನ ಮೀಸೆಯ ಸಹಾಯದಿಂದ ಸುಗಂಧವನ್ನು ಗುರುತಿಸಿ ಹೆಣ್ಣು ಇದ್ದ ಸ್ಥಳಕ್ಕೆ ಬಂದು ತಲುಪುವದು. ಒಂದೇ ಹೆಣ್ಣು ಹುಳುವಿಗೆ ಆಕರ್ಷಿತವಾಗಿ ಮೂರು-ನಾಲ್ಕು ಗಂಡು-ಹುಳು ಬಂದಾಗ, ಕಾದು ಸರತಿಯಿಂದ ಸ್ತ್ರೀ-ಹುಳದ ಸಹವಾಸ ಪಡೆಯುವವು. ಗಂಡಿನ ಮೀಸೆಗೆ ಮೇಣ ಸವರಿದರೆ ಹತ್ತಿರವೇ ಸುಳಿಯುತ್ತಿರುವ ಸುಂದರಿಯಿಂದಲೂ ಆತ ಆಕರ್ಷಿತವಾಗುವದಿಲ್ಲ. ಅದೇ ಹೆಣ್ಣಿನ ಸುಗಂಧಗ್ರಂಥಿಗಳನ್ನಷ್ಟೇ ಬೇರ್ಪಡಿಸಿ ಇಟ್ಟರೆ ಗಂಡು-ಹುಳುಗಳು ಆಕರ್ಷಿಸಲ್ಪಡುತ್ತವೆ. ಗಿಡಮರಗಳಿಗೆ ಅವನ್ನು ಸವರಿದರೂ ಆಕರ್ಷಿತವಾಗುತ್ತವೆ. ಈ ನಡವಳಿಕೆಯ ಲಾಭ ಪಡೆದು ಮಾನವನು ಬೆಳೆ ನಾಶಮಾಡುವ ಕೀಟಗಳು ತಯಾರಿಸುವ ಸುಗಂಧವನ್ನು ಕೃತ್ರಿಮವಾಗಿ ತಯಾರಿಸಿ ಪಂಜರದೊಳಗಿಟ್ಟು ಅದರಿಂದ ಆಕರ್ಷಿತವಾಗಿ ಬಂದು ಪಂಜರದಲ್ಲಿ ಸೆರೆಯಾಳಾಗಿ ಬಿದ್ದ ಗಂಡುಗಳನ್ನು ನಾಶಮಾಡಿ ತನ್ನ ಬೆಳೆಗಳನ್ನು ಸಂರಕ್ಷಿಸಿಕೊಳ್ಳುವ ಹೊಸ ಅಸ್ತ್ರವನ್ನು ಬಳಸುತ್ತ ಇದ್ದಾನೆ.

ಮುಂಜಾವಿನಲ್ಲಿ ಗೂಡಿನಿಂದ ಹೊರಗೆ ಹೋದ ಜೇನುನೊಣಗಳು ತಾವು ಭೇಟಿ ಕೊಟ್ಟ ಹೂವಿನ ಪರಾಗದ ವಾಸನೆಯನ್ನು ಹೊತ್ತು ತಂದು ಉಳಿದ ಕೆಲಸ ಗಾರರಿಗೆ ಸವರುವದರಿಂದ ಒಂದು ಗೂಡಿನ ನೊಣಗಳೆಲ್ಲ ಒಂದೇ ತರದ ಹೂವಿಗೆ ಹೋಗಿ ಒಂದೇ ಜಾತಿಯ ಮಧುವನ್ನು ಸಂಗ್ರಹಿಸುತ್ತವೆ. ಇರುವೆಗಳಂತೆ ಇವು ಸಾಲು ಹಿಡಿದು ಹೋಗಲಾರವಾದ್ದರಿಂದ ಹೂವುಗಳಿರುವ ದಿಕ್ಕು, ದೂರಗಳನ್ನು ತಿಳಿಸಬೇಕಾಗುವದು. ಅದಕ್ಕಾಗಿ ಅವು ಗೋಲಾಕಾರ, ಅರ್ಧಗೋಲಾಕಾರವಾಗಿ ನರ್ತಿಸಿ, ರೆಕ್ಕೆಗಳನ್ನು ವಿವಿಧ ರೀತಿಯಲ್ಲಿ ಬಡಿದು ಸಂಗಡಿಗರಿಗೆ ಸರಿಯಾದ ಮಾಹಿತಿಯನ್ನು ಪೂರೈಸುವವು. ಸೂರ್ಯನನ್ನೇ ಆಧಾರವಾಗಿಟ್ಟುಕೊಂಡು

ತಾವು ಹೋಗಬೇಕಾದ ಹೂವಿಗೆ ಸರಿಯಾಗಿ ಹೋಗಿ ತಲುಪುವವು. ಸೂರ್ಯನು ಮೇಲೇರಿ ಬಂದಂತೆ ಅವು ತಾವು ಹಾರಬೇಕಾದ ಕೋನದಲ್ಲಿಯೂ ಬದಲಾವಣೆ ಮಾಡಿಕೊಂಡು ಅದೇ ಸ್ಥಳಕ್ಕೆ ತಿರುಗಿ ಹಾರುವವು. ಮುಂಜಾನೆ ಕೆಲವು ಜೇನ್ನೊಣಗಳನ್ನು ಬಂಧಿಸಿ ಮಧ್ಯಾಹ್ನ ಬಿಡುಗಡೆಮಾಡಿದರೆ ಅವು ದಾರಿ ತಿಳಿಯದೇ ಕಂಗಾಲಾಗಿರುತ್ತವೆ.

ಕೀಟಗಳಿಗೆ ಕಂಠವಿಲ್ಲ. ಹೀಗಾಗಿ ಅವು ವಾದ್ಯಗಾರರ ಗುಂಪಿಗೆ ಸೇರಿವೆ. ಬೇಸಿಗೆಯ ಕಾಲದಲ್ಲಿ ಕಿರ್, ಕಿರ್, ಕಿರ್ऽऽऽ ಎಂದು ಒಂದೇಸವನೆ ಬರುವ ಕರ್ಕಶ ನಾದವನ್ನು ಎಲ್ಲರೂ ಕೇಳಿದರೂ ಈ ನಾದ ಹೊರಡಿಸುವ ಸಾಯಕೆಡಾ-ಕೀಟವನ್ನು ಕಂಡುಹಿಡಿಯಲು ತೀಕ್ಷ್ಣ ಕಣ್ಣುಗಳು ಬೇಕು. ಸಸ್ಯ-ತಗಣೆ(ಎಫಿಡ)ಯ ಜಾತಿಗೆ ಸೇರಿದ, ತನ್ನ ಮೊಟ್ಟೆಗಳನ್ನು ಟೊಂಗೆಗಳಲ್ಲಿ ಛಿದ್ರಮಾಡಿ ಇಡುವ ಪಾರದರ್ಶಕ ರೆಕ್ಕೆಗಳುಳ್ಳ ಒಂದು ಇಂಚು ಉದ್ದದ ಕೀಟ ಇದು. ಅದರ ಹೃದಯಸ್ಥಾನದಲ್ಲಿ ಮಾನವನ ಢೋಲು-ವಾದ್ಯ ಹೋಲುವ ಅವಯವ ಇದೆ, ಶರೀರದ ಪೊಳ್ಳಿಗೆ ದೇಹ-ಕವಚದ ಚರ್ಮ ಹೊದಿಸಲಾಗಿದೆ. ಈ ನಿಸರ್ಗನಿರ್ಮಿತ ಢೋಲಿನ ಮೇಲೆ ಸತತವಾಗಿ ಬಡಿದುಕೊಳ್ಳಲು ಮಾಂಸಖಂಡದಿಂದ ನಿರ್ಮಿತವಾದ ಬಡಿಗೆ ಇದೆ. ಮಾನವನು ಬಡಿದು ಎಳೆದು ತನ್ನ ಢೋಲಿನ ಶ್ರುತಿಮಾಡಿದರೆ, ಸಾಯಕೆಡಾದ ಢೋಲು ಅದರ ಇಚ್ಛೆಯಂತೆ ಹಿಗ್ಗುತ್ತದೆ. ಕುಗ್ಗುತ್ತದೆ. ಆದ್ದರಿಂದ ಮುಂಜಾನೆಯಿಂದ ರಾತ್ರಿಯ ವರೆಗೆ, ಹುಟ್ಟಿನಿಂದ ಸಾವಿನ ವರೆಗೆ ಎಡಬಿಡದೇ ಅದು ತನ್ನ ಏಕತಾಲದ ವಾದ್ಯ ನಡೆಸಿರುತ್ತದೆ.

ಮಲೆನಾಡಿನ ಕಾಡುಗಳಲ್ಲಿ ಓಡಿಯಾಡಿದವರಿಗೆ ಇಲ್ಲವೆ ಕಾಡಿನ ಅಂಚಿನಲ್ಲಿ ವಾಸಿಸುವವರಿಗೆ ಕೀಟ-ಕೋಟಿಯ ಅನಂತ ವಾದ್ಯಗೋಷ್ಠಿಗಳ ಪರಿಚಯ ಚೆನ್ನಾಗಿರುತ್ತದೆ. ಅದರಲ್ಲೂ ಆಕಾಶಕ್ಕೆ ಕನ್ನ ಕೊರೆದಂತೆ ಧೋಧೋ ಮಳೆ ಸುರಿವಾಗ, ಕೀಟಗಳು ಮರಗಳಲ್ಲಿ ಅವಿತು ಕುಳಿತು ಬರಲಿರುವ ವಸಂತಕಾಲದ ಸಮ್ಮೇಳನದಲ್ಲಿ ಭಾಗವಹಿಸುವದಕ್ಕಾಗಿ ವಾದ್ಯ-ತಾಲೀಮು ನಡೆಸುತ್ತವೆ. ನೃತ್ಯ, ವಾದ್ಯ, ಸಂಗೀತ, ನಾಟಕ ಚಲಚ್ಚಿತ್ರದ ತಾಲೀಮು ಬೇಸರ ಹುಟ್ಟಿಸುವಂತೆ ಕೀಟ ವಾದ್ಯವೂ ಬೇಸರ ಬರಿಸುವಂತಾಗಬಹುದು. ಕೀಟಗಳ ಹಿಮ್ಮೇಳವಾದ್ಯದಲ್ಲಿ ಮಳೆರಾಯನು ಭೂಮಿಗೆ ಇಳಿಯುವದನ್ನು ಉತ್ಸಾಹದಿಂದ ರಸಿಕತೆಯಿಂದ ಕೇಳಿದರೆ, ಭೀಮಸೇನ ಜೋಶಿಯವರ ಭಾವಗೀತ, ರಾಜಗುರುಗಳ ವಚನ ಕೇಳಿದ

ರಸಾನುಭವವಾಗುತ್ತದೆ. ಉದಾಹರಣೆಗೆ ಚಿಮ್ಮುಂಡೆ ಎಲ್ಲ ಆರ್ದ್ರವಾತಾವರಣ ದಲ್ಲಿಯೂ ವಾಸಿಸುತ್ತವೆ. ಅದು ತನ್ನ ರೆಕ್ಕೆ ಮತ್ತು ಶರೀರಗಳ ಘರ್ಷಣೆಯಿಂದ ಗಿರ್, ಗಿರ್, ಗಿರ್ss ಎಂಬ ಸಂಗೀತ ಹೊರಡಿಸುತ್ತದೆ. ತನ್ನ ಬೋಲನ್ನು ಅದು ತಾಸಿಗೆ ಸುಮಾರು ಐದುಸಾವಿರ ಸಲ ಉಚ್ಚರಿಸುತ್ತದೆ. ಕೆಲವು ಚಿಮ್ಮುಂಡೆ ಗಳಂತೂ ರಾತ್ರಿಯಿಡೀ ಹಾಡುತ್ತ ಕಳೆಯುತ್ತವೆ. ಅಂದರೆ ಆ ಹನ್ನೆರಡು ತಾಸಿನಲ್ಲಿ ಅರವತ್ತುಸಾವಿರ ಸಲ ತನ್ನ ಬೋಲನ್ನು ತಿರುತಿರುಗಿ ಹೇಳಿರಬೇಕು. ಇಂತಹ ಸಂಗೀತಗಾರರು ಮಾನವರಲ್ಲಿ ಎಂದಾದರೂ ಹುಟ್ಟಿಬಂದಾರೆ!

ಹಂಪೆಯಲ್ಲಿ, ಮಧುರೆಯಲ್ಲಿ ಪಾಷಾಣದ ವಿವಿಧ ಗಾತ್ರದ ಏಳು ಕಂಬ ಗಳನ್ನು ಜೋಡಿಸಿ ನಿಲ್ಲಿಸಲಾಗಿದೆ. ಇವುಗಳ ಮೇಲೆ ಗಟ್ಟಿಪದಾರ್ಥದಿಂದ ಬಾರಿಸಿದರೆ, ಸಪ್ತಸ್ವರಗಳು ಹೊರಡುತ್ತವೆ. ಬೇಲೂರಿನ ಶಿಲಾಬಾಲಿಕೆಯೊಬ್ಬಳು ಎಡಗೈಯಲ್ಲಿ ಏರು-ತಗ್ಗುಗಳಿದ್ದ ವಾದ್ಯ ಹಿಡಿದು ಬಲಗೈಯಲ್ಲಿದ್ದ ಕೋಲನ್ನು ಅದರ ಮೇಲೆ ನುಡಿಸುವದನ್ನು ಕಟೆಯಲಾಗಿದೆ. ಮಿಡತೆ, ಜಿಟ್ಟೆಗಳು ಇಂತಹ ವಾದ್ಯಗಳನ್ನೇ ಬಳಸುತ್ತವೆ. ಅವುಗಳ ಕಾಲು, ರೆಕ್ಕೆ, ಶರೀರಗಳ ಮೇಲೆ ಹಲವು ಬಗೆಯ ಮುಳ್ಳು, ಏರು-ತಗ್ಗುಗಳಿವೆ. ಇವುಗಳ ಮೇಲೆ ಇನ್ನೊಂದು ಅವಯವ ಜೋಡಿಸಿದಾಗ ನಾದ ಹೊರಹೊಮ್ಮುವದು. ಕೆಲವು ವಾದ್ಯಗಳು ಹಾರುವಾಗಲೇ ನುಡಿದರೆ, ಇನ್ನೂ ಕೆಲವು ತಂಬೂರಿ ಮೀಟುವಂತೆ ಶಾಂತಚಿತ್ತವಾಗಿ ಒಂದೆಡೆ ಕುಳಿತು ನುಡಿಸುತ್ತವೆ. ಕಣಜ, ಸೊಳ್ಳೆ ಮುಂತಾದವು ಹಾರುವಾಗ ತಮ್ಮ ರೆಕ್ಕೆ ಗಳನ್ನು ಅತಿವೇಗದಿಂದ ಬಡಿದುಕೊಳ್ಳುವದರಿಂದ ಅವುಗಳ ರೆಕ್ಕೆಗಳಿಂದ ನಾದ ಹೊಮ್ಮುತ್ತದೆ. ಜೀರುಂಡೆ ಮತ್ತು ದುಂಬಿಗಳು ತಮ್ಮ ಗಟ್ಟಿಯಾದ ಹಲ್ಲು ಗಳನ್ನು ಕಟಿಯುವದರಿಂದ, ರೆಕ್ಕೆಗಳ ಘರ್ಷಣೆಯಿಂದ ನಾದ ಹೊರಡಿಸುತ್ತವೆ. ಹಲವಾರು ಕೀಟಗಳ ವಾದ್ಯಗೋಷ್ಠಿ ಉಷ್ಣತಾಮಾನ ಏರಿದಂತೆ ರಂಗೇರುವದ ರಿಂದ ಅವುಗಳಿಗೆ ಉಷ್ಣತಾಮಾಪಕ ಎಂದು ಕರೆಯಬಹುದಾಗಿದೆ.

ಕೀಟರಾಜ್ಯದಲ್ಲಿ ಇಷ್ಟೆಲ್ಲ ವಾದ್ಯಗಾರರು ಇದ್ದರೂ ಅವುಗಳನ್ನು ಕೇಳಲು ಕಿವಿಗಳೇ ಇಲ್ಲವಲ್ಲ ಎಂದು ನಮ್ಮೆಲ್ಲರ ಆತಂಕ. ಆದರೆ ಅವುಗಳ ಮೈತುಂಬೆಲ್ಲ ನಾದತರಂಗಗಳಂತೆ ಮಿಡಿಯುವ ಸೂಕ್ಷ್ಮ ಅವಯವಗಳು ಇರುತ್ತವೆ, ಅವು ಗಳಿಂದ ಸ್ವಜಾತಿಯ ಕೀಟಗಳಾದರೂ ವಾದ್ಯ ಕೇಳಿ ಆನಂದಿಸುತ್ತವೆ ಎಂದು ನಂಬ ಲಾಗಿದೆ, ಕೆಲವು ಚಿಮ್ಮುಂಡೆಗಳನ್ನು ನಾವು ಅನುಕರಣೆ ಮಾಡಿದರೆ ಅವು ತಿರುಗಿ

ನಮ್ಮನ್ನು ಅನುಕರಿಸುತ್ತವೆ. ಅವುಗಳಿಗೆ ಸದ್ದು ಕೇಳಿಸದಿದ್ದರೆ ಅನುಕರಣೆ ಹೇಗೆ ಸಾಧ್ಯ? ಇನ್ನೂ ಕೆಲವು ಚಿಮ್ಮುಂಡೆಗಳಿಗೆ ಸಮ್ಮೇಳನದ ವಾದ್ಯಗೋಷ್ಠಿ ನಡೆಸುವದು ಸೇರುತ್ತದೆ. ಒಂದು ಸ್ವರವೆತ್ತಿದರೆ ಸಾಕು ಸಾವಿರಾರು ಚಿಮ್ಮುಂಡೆ ಹಾಡಲು ಪ್ರಾರಂಭಿಸುತ್ತವೆ.

ಮಾನವನ ಕಿವಿಗಳು ಆಲಿಸಲಾರದ ಸಾವಿರಾರು ನಾದಗಳನ್ನು ಕೀಟಲೋಕ ಹೊರಡಿಸುತ್ತದೆ. ಇಂತಹ ವಾದ್ಯಗಳನ್ನು ಹಿಡಿದಿಡಲು ಇಂದು ವಿವಿಧ ತರದ ಟೇಪ್-ರಿಕಾರ್ಡರಗಳು ಲಭ್ಯವಿರುವದರಿಂದ ಆಯಾ ಸದ್ದುಗಳನ್ನು ಸೆರೆಹಿಡಿದು ನಮ್ಮ ಕಿವಿಗಳಿಗೆ ಕೇಳುವಂತೆ ನುಡಿಸಿ ಅವುಗಳ ಅಭ್ಯಾಸ ನಡೆಸಿದ್ದಾರೆ. ಅವುಗಳನ್ನು ಕೇಳುತ್ತ ಕುಳಿತರೆ ಯಾವದೊ ಆರ್ಕೆಸ್ಟ್ರಾದಲ್ಲಿ ಮೈಮರೆತಿದ್ದೇವೆ ಎಂದು ಅನಿಸಿ ಬಿಡುತ್ತದೆ. ಕೀಟಗಳಲ್ಲಿ ವಾದ್ಯ ನುಡಿಸುವವವೆಲ್ಲ ಗಂಡುಗಳೇ! ಆದರೆ ಈ ವಾದ್ಯ ಕೇಳಿ ಹೆಣ್ಣು-ಕೀಟಗಳು ಆಕರ್ಷಿತವಾಗುವದಿಲ್ಲವಾದ್ದರಿಂದ ಅದು ಸ್ತ್ರೀ ಆಕರ್ಷಕ ಸಾಧನವಲ್ಲವೆಂದು ಹೇಳಬಹುದು. ಇಲ್ಲವಾದರೆ ಇಡೀ ರಾತ್ರಿ ವಾದ್ಯ ನಡೆಸುವ ಚಿಮ್ಮುಂಡೆ ಎಷ್ಟು ಸ್ತ್ರೀ-ಕೀಟಗಳಿಗೆ 'ಹೀರೊ' ಆಗಬೇಕಾಗುತ್ತಿತ್ತೊ ಏನೋ!

ಗಿಳಿ, ಕೋಕಿಲಗಳ ಗಾನ ಕೇಳಿ ಆನಂದಿಸುವವರು ಇದ್ದಂತೆ ಕೀಟಗಾನ ಕೇಳಿ ಆನಂದಿಸುವವರಿದ್ದಾರೆ. ಜಪಾನಿಗಳಿಗೆ ಕೀಟಗಾನ ಬಲು ಪ್ರೀತಿ. ಅಂತೆಯೇ ಅವುಗಳಿಗಾಗಿ ಪಂಜರ ಮಾಡಿ ಮನೆಗಳಲ್ಲಿಯೇ ಸಾಕುತ್ತಾರೆ. ಚಿಮ್ಮುಂಡೆ ಶುಭ ಅಶುಭವನ್ನು ತನ್ನ ವಾದ್ಯದ ಮೂಲಕ ಮೊದಲೇ ತಿಳಿಸುವದೆಂದು ಇಟಾಲಿಯನ್ನರು ನಂಬುವದರಿಂದ ಅವನ್ನು ಕೊಂಡು ಮನೆಯಲ್ಲಿ ಇಟ್ಟು ಸಾಕುತ್ತಾರೆ.

ಮೀನುಗಳು ಸಾಂಘಿಕ-ಜೀವನ ನಡೆಸುವದಿಲ್ಲವಾದ್ದರಿಂದ ಅವು ನಾದ ಹೊರಡಿಸುವದು ತೀರ ಕ್ವಚಿತ್ತಾಗಿದೆ. ಆದೇ ಕಪ್ಪೆಗಳಲ್ಲಿ ಸಂತಾನೋತ್ಪತ್ತಿಗಾಗಿ ಗಂಡಿನ ಕೊರಳ ಹತ್ತಿರ ಇರುವ ಜೋಡಿ ವಾದ್ಯದ ಅಂಗದಿಂದ ಟೊರ್ ಟೊರ್ ಟೊರ್ ಎಂದು ನಾದ ಹೊರಡಿಸುತ್ತದೆ. ಇದನ್ನು ಮಳೆಗಾಲದಲ್ಲಿ ಹೆಣ್ಣು ಕಪ್ಪೆಯನ್ನು ಆಕರ್ಷಿಸಲು ಬಳಸಲಾಗುತ್ತಿದೆ. ಕೆಲವು ಓತಿಕಾಟಗಳು ಬಾಲವನ್ನು ಬಡಿದು ಸದ್ದು ಮಾಡುತ್ತವೆ. ಅಮೇರಿಕೆಯ ಉಂಗುರುಬಾಲದ ಹಾವು ತನ್ನ ಬಾಲದ ಸುತ್ತಿರುವ ಹಲವಾರು ಗಟ್ಟಿಯಾದ ಉಂಗುರಗಳನ್ನು ನೆಲಕ್ಕೆ ಅಪ್ಪಳಿಸಿ "ಕಿಟಲ್ ಕಿಟಲ್" ಎಂಬ ಸದ್ದು ಹೊರಡಿಸುತ್ತಿರುತ್ತದೆ. ನಾಗರಹಾವಿನಂತಹ ಅನೇಕ ಹಾವುಗಳು ತಮ್ಮ ಮೈಯನ್ನು ಉಬ್ಬಿಸಿ ಜೋರಾಗಿ ಶ್ವಾಸೋಚ್ಛ್ವಾಸ

ನಡೆಸಿ ವೈರಿಗಳನ್ನು ಎಚ್ಚರಿಸುವ ನಾದ ಹೊರಡಿಸುತ್ತವೆ.

ಪಕ್ಷಿವರ್ಗ ಬಣ್ಣಕ್ಕೆ ಹೆಸರಾದಂತೆ ಹಾಡುಗಾರಿಕೆಗೂ ಹೆಸರುವಾಸಿಯಾಗಿದೆ. ಇವೆರಡು ವಿಶೇಷ ಗುಣಗಳು ಅವುಗಳಲ್ಲಿ ಇಲ್ಲದಿದ್ದರೆ ಬಹುಶಃ ಅವು ನಮ್ಮನ್ನು ಇಷ್ಟು ಆಕರ್ಷಿಸುತ್ತಿರಲಿಲ್ಲ. ಸೊಲೊಮನ್ ದೊರೆ ಮಾಯಾ ಉಂಗುರ ಧರಿಸಿದಾಗ ಪಶುಪಕ್ಷಿಗಳ ಭಾಷೆ ಅರಿತುಕೊಳ್ಳುತ್ತಿದ್ದ ಎಂದು ಹೇಳಲಾಗಿದೆ. ಕೇಕಯ ಮಹಾರಾಜನು ರಾಣಿಯೊಂದಿಗೆ ಅಂತಃಪುರದಲ್ಲಿ ಇದ್ದಾಗ ಸಮೀಪದಲ್ಲಿಯೇ ಹಕ್ಕಿ ಜೋಡಿ ನಡೆಸಿದ ಸಂಭಾಷಣೆ ಕೇಳಿ ನಕ್ಕನಂತೆ. ಪತ್ನಿ ನಗೆಯ ಕಾರಣವನ್ನು ವಿಚಾರಿಸಿದಾಗ ತನಗೆ ಹಕ್ಕಿಗಳ ಭಾಷೆ ಬರುವದೆಂದೂ ಆದರೆ ತಾನು ಕೇಳಿದ್ದನ್ನು ಬೇರೆಯವರಿಗೆ ವಿವರಿಸಿದರೆ ಆ ವಿದ್ಯೆ ನಶಿಸಿ ಹೋಗುವದೆಂಬೂ ದೊರೆ ಹೇಳಿದ. ಶ್ರೀರಾಮನನ್ನು ಅಡವಿಗೆ ಅಟ್ಟಿದ ಕೈಕೇಯಿಯ ತಾಯಿ ಅಷ್ಟಕ್ಕೇ ಬಿಟ್ಟಾಳೇ! ರಂಪಾಟ ಮಾಡಿ ತನ್ನ ಬಗ್ಗೆಯೇ ಹಕ್ಕಿಗಳ ವಿಚಾರವಿಮರ್ಶೆ ನಡೆದದ್ದರಿಂದ ಅರಸು ಹೇಳಲು ಹಿಂಜರಿಯುತ್ತಿದ್ದಾನೆ ಎಂದು ಮೂದಲಿಸಿದಾಗ, ಪತಿದೇವ ಈ ವರದಾನವನ್ನು ತನಗೆ ದಯಪಾಲಿಸಿದ ಮುನಿಗೇ ಹೋಗಿ ಮುಂದೇನು ಮಾಡುವದು ಎಂದು ವಿಚಾರಿಸಿದ. ಪತ್ನಿಯನ್ನು ತ್ಯಜಿಸುವದೊಂದೇ ಮಾರ್ಗ ಎಂಬ ಸಲಹೆ ಪಡೆದು ಅದರಂತೆ ನಡೆದುಕೊಂಡ.

ಛಾಂದೋಗ್ಯ ಉಪನಿಷತ್ತಿನಲ್ಲಿ ಹಂಸಭಾಷೆಯ ಉಲ್ಲೇಖ ಬರುತ್ತದೆ. ಒಂದು ಸಂಜೆ ಹಂಸಗಳು ಗಗನಮಾರ್ಗವಾಗಿ ಹಾರುತ್ತಿದ್ದಾಗ್ಗೆ ಒಂದು ಇನ್ನೊಂದಕ್ಕೆ ಹೇಳಿತು: "ಇಲ್ಲಿಯ ಜನಶ್ರುತಿ, ಅರಸು ಅನೇಕ ದಾನ-ಧರ್ಮಗಳನ್ನು ಮಾಡಿ ಬಹು ಖ್ಯಾತನಾಗಿದ್ದಾನೆ. ಆತನ ರಾಜ್ಯದಿಂದ ಹಾರುವಾಗ ಎಚ್ಚರ ವಹಿಸಬೇಕು" ಇದನ್ನು ಕೇಳಿದ ಹಂಸ ನಕ್ಕು "ಈ ಅರಸನ ಧರ್ಮಜ್ಞಾನ ರೈಕ್ವನ ಶ್ರುತಿಗೆ ಸರಿಗಟ್ಟಬಹುದೇ?" ಎಂದು ಕೇಳಿತು. ಪಕ್ಷಿ-ಭಾಷೆ ಬಲ್ಲ ಅರಸು ಇದನ್ನು ಕೇಳಿ ಆ ರೈಕ್ವನನ್ನೂ ಹುಡುಕಿಕೊಂಡು ಹೋಗಿ ಮೈತುರಿಸಿಕೊಳ್ಳುತ್ತ ಬಂಡಿಯೊಂದರ ಕೆಳಗೆ ಕುಳಿತ ಬಡಪಾಯಿಯೇ ರೈಕ್ವನೆಂದು ಪತ್ತೆಹಚ್ಚಿ ಅವನಿಂದ ಬ್ರಹ್ಮಜ್ಞಾನ ಪಡೆಯುತ್ತಾನೆ. ನಂತರದ ಮಾನವರಲ್ಲಿ ಈ ವಿದ್ಯೆಯಲ್ಲಿ ಪರಿಣಿತರು ಇದ್ದರೋ ಇಲ್ಲವೋ ತಿಳಿಯದು. ಆದರೆ ಆಧುನಿಕ ಯುಗದ ವಿಜ್ಞಾನಿಗಳು ಈ ವಿದ್ಯೆ ಸಾಧಿಸಿಕೊಂಡಿದ್ದಾರೆ. ಜರ್ಮನಿಯ ವಿಜ್ಞಾನಿ ಲೊರೆಂಝರು ಪಕ್ಷಿಯ ಹಾಡು ಹಾಡಿದರೆ ಆ ವರ್ಗದ ಹಕ್ಕಿಗಳು ಹಾರಿಬಿಡುತ್ತವೆ! ಬೇರೆ ಬೇರೆ ರಾಷ್ಟ್ರಗಳಲ್ಲಿ

ಇಂಥ ವಿಜ್ಞಾನಿಗಳು ಕಂಡುಬರುತ್ತಾರೆ. ಅಮೇರಿಕೆಯಲ್ಲಿ ಪಕ್ಷಿಗಳಂತೆ ಸಿಳ್ಳು ಹಾಕುವ ಪೀಪಿಗಳು ಮಾರಲು ಸಿಗುತ್ತವೆ. ಅವನ್ನು ಬಾರಿಸಿದರೆ ಹಕ್ಕಿಗಳು ತಪ್ಪದೇ ಹಾರಿಬರುತ್ತವೆ. ಹಕ್ಕಿ-ಹಾಡುಗಳನ್ನು ಟೇಪ್‌ರಿಕಾರ್ಡರಗಳಲ್ಲಿ ಸೆರೆಹಿಡಿದು ತಿರುಗಿ ನುಡಿಸಿದರೆ ಸ್ವಜಾತಿಯ ಪಕ್ಷಿಗಳು ಮರುಧ್ವನಿ ಕೊಡುತ್ತವೆ. ಪ್ರಣಯಗೀತ ನುಡಿಸಿದರೆ ಕಾಮಾತುರತೆ ತೋರಿಸುತ್ತವೆ. ವೈರಿ-ಹಕ್ಕಿಗಳ ಧ್ವನಿ ನುಡಿಸಿದ್ದನ್ನು ಕೇಳಿ ನಡುಗಿ ಪಲಾಯನ ಮಾಡುವ ಹಕ್ಕಿಗಳು ಇವೆ. ಸ್ವಜಾತಿಯ ಹಕ್ಕಿಯ ಸ್ವರ ಕೇಳಿ ತನ್ನ ವಾಸಸ್ಥಳದಲ್ಲಿ ಅತಿಕ್ರಮಣ ಮಾಡಿದ್ದಕ್ಕೆ ಅದನ್ನು ಶಿಕ್ಷಿಸಲು ಹೊರಟ ಹಕ್ಕಿಗಳೂ ಇವೆ! ಎಷ್ಟೋ ಹಕ್ಕಿಗಳು ವಿಮಾನನಿಲ್ದಾಣದಲ್ಲಿ ಹಾರಾಡಿ, ಉಡ್ಡಾಣಕ್ಕೆ ತೊಂದರೆಯೊಡ್ಡುವದರಿಂದ ಅವನ್ನು ಓಡಿಸಲು ಇಂಥ ಸದ್ದುಗಳನ್ನು ಬಳಸುವರು.

ಹಕ್ಕಿಗಳಿಗೆ ಕಂಠವಿದ್ದು ತಮ್ಮ ಹಾಡುಗಾರಿಕೆಯನ್ನು ವಿವಿಧ ಕಾರ್ಯಗಳಿಗೆ ಬಳಸಿಕೊಳ್ಳುತ್ತವೆ. ಗುಬ್ಬಚ್ಚಿಮರಿಗೆ ಹಸಿವಾದಾಗ ಚಿಂವ್ ಚಿಂವ್ ಎಂದು ತಾಯಿಯನ್ನು ಎಚ್ಚರಿಸುತ್ತದೆ. ಹಸಿವು ಹೆಚ್ಚಾದಾಗ ಚೀರಲು ಪ್ರಾರಂಭಿಸುತ್ತವೆ. ಅರಣ್ಯದಲ್ಲಿ ಇದೇ ಚೀತ್ಕಾರ ತಾಯಿಗೆ ಮರಿ ಎಲ್ಲಿದೆಯೆಂದು ತಿಳಿಯಲು ಸಹಾಯ ಮಾಡುತ್ತದೆ. ಗುಟುಕು ಕೊಟ್ಟು ತಾಯಿ ಮಗುವನ್ನು ಕೊಕ್ಕಿನಿಂದ ನೇವರಿಸಿ "ಮಗು, ಹಸಿವಿನಿಂದ ಬೆಂಡಾದೆಯಾ? ಹುಳ-ಹುಪ್ಪಡಿ ಬೇಗಸಿಗಲಿಲ್ಲ. ಇನ್ನೊಂದು ಗುಟುಕು ಬೇಗ ತಂದುಕೊಡುತ್ತೇನೆ. ಅಲ್ಲಿಯ ತನಕ ಆಡಿಕೊಂಡಿರು ಮರಿ." ಎಂಬರ್ಥದ ಸಂತೈಸುವ ನಾದ ಹೊರಡಿಸಿ ತಿರುಗಿ ಹಾರುತ್ತದೆ. ಹೇಂಟೆ ಗಗನ ದಲ್ಲಿ ಹದ್ದನ್ನು ಕಂಡಾಗ ಮರಿಗಳನ್ನೆಲ್ಲ ಎಚ್ಚರಿಸುವ ಕಹಳೆಯನ್ನೂದುತ್ತದೆ. ಪ್ರತಿಯಾಗಿ ಮರಿಗಳು ಅಸಹಾಯದ ನಾದ ಹೊರಡಿಸಿ ಮರೆಯಾಗುವವು. ಕೆಲವು ಹಕ್ಕಿಗಳು ವೈರಿದರ್ಶನಮಾತ್ರದಿಂದ ಎಚ್ಚರಿಕೆಯ ಕೂಗನ್ನು ಕೊಟ್ಟು ಎಲ್ಲವೂ ಒಂದೆಡೆ ಧಾವಿಸಿ ಬಂದು ಚೀರುತ್ತ ವೈರಿಯನ್ನು ಓಡಿಸಿಬಿಡುವವು. ಕೆಲಸದಲ್ಲಿ ಮೈಮರೆತ ಮಾನವ ಸಿಳ್ಳುಹಾಕುತ್ತಿರುವಂತೆ ಕೆಲಸದಲ್ಲಿ ತೊಡಗಿದ ಹಕ್ಕಿಗಳು ತಮ್ಮಷ್ಟಕ್ಕೆ ಹಾಡಿಕೊಳ್ಳುವದೂ ಉಂಟು. ಒಂದು ಪಕ್ಷಿಯ ಸರಹದ್ದಿನಲ್ಲಿನ್ನೊಂದು ಬಂದರೆ ಮೊದಲು ಎಚ್ಚರಿಕೆಯ ಕೂಗು ಹೊರಡಿಸಿ ಅದನ್ನು ಲೆಕ್ಕಿಸದಿದ್ದರೆ ಚೀರಲು ಪ್ರಾರಂಭಿಸಿ ನಂತರ ಕಾದಾಡಲು ಪಾರಂಭಿಸುವದು. ಅದೇ ಬೇರೊಂದು ಹೆಣ್ಣು ಹಕ್ಕಿ ಬಂದರೆ ಪ್ರೇಮಗೀತ ಹಾಡಿ ಒಲಿಸಿಕೊಳ್ಳಲು ಯತ್ನಿಸುವದು.

ಮಾನವನ ಭಾಷೆ ಅನುಕರಣೆಯಿಂದ ಬರುವಂತಹದು. ಆದ್ದರಿಂದ ಮನೆ

ಮಂದಿಯಿಂದ, ಗುರುವಿನಿಂದ ಅದನ್ನು ಕಲಿಯಬೇಕಾಗುತ್ತದೆ. ಅದೇ, ಹಕ್ಕಿಯ
ಮರಿಗಳನ್ನು ಪಾಲಕರಿಂದ ಬೇರ್ಪಡಿಸಿ ಇಟ್ಟರೂ ತನ್ನ ಅನುವಂಶಿಕ ಹಾಡು
ಹಾಡಲು ಪ್ರರಂಭಿಸುತ್ತವೆ. ಆದರೆ ಕೋಗಿಲೆಯ ವರ್ಗದಲ್ಲಿ ಮಕ್ಕಳು ಹಾಡುಗಾರ
ತಂದೆಯಿಂದ ಕಲಿಯಬೇಕಾಗುತ್ತದೆ. ಅಂತಹ ತರಬೇತಿ ಸಿಗದಿದ್ದರೆ ಅವು ಅಪಸ್ವರ
ದಿಂದ ಹಾಡಲು ಪ್ರಾರಂಭಿಸುತ್ತವೆ. ಕೋಗಿಲೆ ಅನುಕರಣ ಮಾಡುವದರಲ್ಲಿ
ಹೆಸರುವಾಸಿ. ನಾವೂ ಕೂಹೂ ಗೊಟ್ಟರೆ ಅವೂ ಹೆಚ್ಚೆಚ್ಚು ಹಾಡುವವು ನಾದದಂತೆ
ಸಂಜ್ಞಾ ಸೂಚಕ ಸದ್ದಿನಿಂದ ಕೆಲ ಹಕ್ಕಿಗಳು ಸಂಪರ್ಕ ಬೆಳೆಸುತ್ತವೆ. ಮರಕುಟಿಕ
ಕೊಕ್ಕಿನಿಂದ ಮರವನ್ನು ಕುಟುಕಿ ಸಪ್ಪಳ ಮಾಡಿದರೆ, ಕೆಲವು ಹಕ್ಕಿಗಳು ರೆಕ್ಕೆಯನ್ನು
ಬಡಿದು ಸಂಪರ್ಕ ಬೆಳೆಸುವವು. ಹಕ್ಕಿಗಳಿಗೆ ಕಣ್ಣುಗಳ ಹತ್ತಿರ ಇರುವ ಕುಣಿಯಲ್ಲಿ
ಜೋಡಿ ಕಿವಿಗಳಿರುತ್ತವೆ.

ಸಸ್ತನವರ್ಗದ ಮೂಕಭಾಷೆ-ಹಾಡುಗಾರಿಕೆಯನ್ನು ನಾವು ಪ್ರತಿದಿನ ಅರ್ಥ
ಮಾಡಿಕೊಂಡು ಜೀವಿಸುತ್ತೇವೆ. ಹಸಿವಾದಾಗ, ಕಳ್ಳ ಬಂದಾಗ, ಮಳೆ ಬಂದಾಗ,
ತನಗೆ ಆಶ್ರಯಕೊಡುವಂತೆ ಸೂಚಿಸಲು ನಾಯಿಗಳು ವಿವಿಧ ಪ್ರಕಾರದ ಸ್ವರ
ಗಳನ್ನು ಹೊರಡಿಸುತ್ತವೆ. ಅದರಂತೆ ಬೆಕ್ಕು ಮರಿಗೆ ಹಾಲು ಕುಡಿಸುವಾಗ,
ಪ್ರಿಯತಮನ ಕರೆಗೆ ಓಗೊಡುವಾಗ, ಒಡತಿಯಿಂದ ಮುದ್ದು ಮಾಡಿಸಿಕೊಳ್ಳು
ವಾಗ ಬೇರೆ ಬೇರೆ ಧ್ವನಿ ಹೊರಡಿಸುವದು. ಇದೇ ಪ್ರಕಾರ ಹಲವಾರು ಸಾಕು
ಪ್ರಾಣಿಗಳು ತಮ್ಮ ಆನಂದ, ಭಯ, ದುಃಖಗಳನ್ನು ನಾದದ ಮೂಲಕ ಬೇರೆ
ಯವರಿಗೆ ತಿಳಿಸುವವು. ಈ ನಿಯಮ ಕಾಡು-ಪ್ರಾಣಿಗಳಿಗೂ ಅನ್ವಯಿಸುವದು.
ಆನೆ ಘೀಳಿಡುವದು, ಹುಲಿಯ ಗರ್ಜನೆ, ನರಿಯ ಕೂಗುಗಳೆಲ್ಲ ನಮ್ಮ ಮಾತು
ಕತೆಯಂತೆ ಸಾಮಾನ್ಯ. ಆದರೆ ಇವನ್ನೆಲ್ಲ ಅಪಶಕುನಗಳೆಂದು ಅಪಾರ್ಥಮಾಡಿ
ತಮ್ಮ ಜೀವನದ ದಾರಿ ಬದಲುಮಾಡಿಕೊಂಡವರು ನಮ್ಮಲ್ಲಿ ಲೆಕ್ಕವಿಲ್ಲದಷ್ಟು
ಜನರಿದ್ದಾರೆ. ಶುಭಕಾರ್ಯಕ್ಕೆ ಹೊರಟಾಗ ಹಲ್ಲಿ ಲೊಚ್ ಲೊಚ್ ಎಂದು
ಸದ್ದು ಮಾಡಿದರೆ, ಗೂಗೆ ಕೂಗಿದರೆ ಅಪಶಕುನವೆಂದು, ಸಾವು-ನೋವು ಖಂಡಿತ
ವೆಂದು ಮನೆಯನ್ನು ಬಿಟ್ಟವರಿದ್ದಾರೆ. ಅಳುಧ್ವನಿಯಲ್ಲಿ ನಾಯಿ ಬೊಗಳಿದರೆ
ಅದು ಯಮಧರ್ಮರಾಯನಿಗೆ ಆಮಂತ್ರಣವೆಂದು ನಡುರಾತ್ರಿ ಎದ್ದು ಅದರ
ಕಾಲುಮುರಿವಂತೆ ಬಡಿದೇ ಬಂದು ಮಲಗುವರು. ಮಾನವನ ಚಟುವಟಿಕೆಗಳಿಗೂ
ಇವಕ್ಕೂ ಯಾವ ಸಂಬಂಧವೂ ಇಲ್ಲದ್ದರಿಂದ ಇದೊಂದು ಭ್ರಮೆ ಎನಿಸುವದು.



ಅಲಂಕಾರದಲ್ಲಿ ಪ್ರಾಣಿ :

೧. ಮತ್ಸ್ಯಚಕ್ರ, ೩೦

೨. ಹೂ-ಬಳ್ಳಿಯಲ್ಲಿ ಹಂಸ, ೯೬

೩. ಕಾಲ್ಪನಿಕ ಹಂಸ, ೧೨

೪. ನೀರು ಕುಡಿಯುವ ಮಯೂರದ್ವಯ, ೩೪

೫. ಅಧಿಕ-ಪ್ರಸಂಗ ಕೋತಿ, ೧೪

೬. ಅಲಂಕಾರ-ಪಟ್ಟಿಕೆಯಲ್ಲಿ ಪ್ರಾಣಿ, ೧೫









ಪ್ರಾಣಿ-ಪರಿಸರ

೧. ಹೂ-ಹಣ್ಣು ಹಕ್ಕಿಯ ಪರಿಸರ. ೬೦
೨. ಹುಲಿಯು ಸಂಪ್ಯೆ ಹಂದಿಯುದನ್ನು ಅವಲಂಬಿಸುತ್ತದೆ. ೭
೩. ಸಸ್ಯ-ಪ್ರಾಣಿಗಳ ಪರಸ್ಪರಾವಲಂಬನ. ೧೬
೪. ಪರಿಸರ ಹದಗೆಡಲು ಸ್ವಾರ್ಥಿ ಮಾನವನೇ ಕಾರಣ. ೧೫



ಪಶು ಮತ್ತು ಮಾನವ:

೧. ಹಂದಿ-ಬೇಟೆ, ೪೨
೨. ಚಿಗರೆ-ಬೇಟೆ, ೧೫
೩. ಹುಲಿಯೊಡನೆ ಸೆಣಸಾಟ, ೪೨
೪. ಗೂಳಿಯೊಡನೆ ದ್ವಂದ್ವ, ೧೪
೫. ಬೇಟೆಯೊಡನೆ ಮರಳುವದು, ೧೨
೬. ಕಾಡುಹಂದಿಯೊಡನೆ ಹೋರಾಟ, ೨೯




೧



೨



೩



೪



೫



೬

ಶಿಲ್ಪಿ-ಚಾತುರ್ಯ :

೧. ನಾಲ್ಕು ದೇಹ, ಒಂದೇ ಶಿರದ ಚಿಗರೆ, ೫೧

೨. ಒಂದೇ ದೇಹ ಮೂರು ಶಿರದ ಗೋವು, ೪೭   ೩. ಗೋಹಸ್ತಿ, ೪೭

೪. ಕನ್ಯೆಯರಿಂದ ರೂಪಿತವಾದ ಅಶ್ವ

೫. ನಾಲ್ಕು ಆನೆಗಳನ್ನು ಒಟ್ಟಿಗೆ ಒಯ್ಯುವ ಗಂಡಭೇರುಂಡ, ೫

೬. ನವಕನ್ಯೆಯರಿಂದ ರೂಪಿತವಾದ ಗಜ.

ಒಂಬತ್ತು : ನಾಮಕರಣ

ನಮ್ಮ ಪೂರ್ವಜರಿಗೆ ವಾಹನ-ಸಂಪರ್ಕ, ವೈಜ್ಞಾನಿಕ-ಸೌಲಭ್ಯಗಳು ಇಲ್ಲದಿದ್ದರೂ ಉತ್ತಮ ಕಲ್ಪನಾಶಕ್ತಿ ಇತ್ತು ಎಂಬುದು ಮುಂದಿನ ಪೀಳಿಗೆಗಾಗಿ ಅವರು ಬಿಟ್ಟು ಹೋದ ವೇದ, ಉಪನಿಷತ್, ಪುರಾಣಾದಿಗಳು ಸಾಕ್ಷಿ ನುಡಿಯುತ್ತಿವೆ. ಇಂದು ಎಲ್ಲ ಜೀವಶಾಸ್ತ್ರಜ್ಞರ ಮಾನ್ಯತೆ ಪಡೆದ ಜೀವಿಗಳ ವಿಕಾಸದ ತಂತ್ರದ ಮೇರೆಗೆ ಮೊಟ್ಟ ಮೊದಲು ಜೀವಿಗಳು ನೀರಿನಲ್ಲಿ ಹುಟ್ಟಿ ನಂತರ ಭೂಮಿಗೆ ಬಂದು ಅನಂತರ ಗಗನಸಂಚಾರಿಗಳಾದವು. ಬೃಹತ್ ವಿಷ್ಣುಪುರಾಣವೂ ಇದನ್ನೇ ಹೇಳುತ್ತದೆ. ಜೀವಿಗಳ ಸಂಖ್ಯೆಯ ಬಗ್ಗೆಯೂ ಈ ಗ್ರಂಥದಲ್ಲಿ ಹೇಳಿದೆ. ಒಂಬತ್ತು ಲಕ್ಷ ನೀರಿನಲ್ಲಿ ಹುಟ್ಟಿದ ಪ್ರಾಣಿಗಳು, ಪಶುಗಳು ಮೂವತ್ತು ಲಕ್ಷ, ಪಕ್ಷಿಗಳು ಹತ್ತು ಲಕ್ಷ ಮತ್ತು ವಾನರರು ನಾಲ್ಕು ಲಕ್ಷ ಇರುವರೆಂದು ಹೇಳಲಾಗಿದೆ. ಈ ಪುರಾಣ ಬರೆದಾದ ನಂತರ ಗಂಗಾನದಿಯಲ್ಲಿ ಬಹಳ ನೀರು ಹರಿದಿದೆ, ಕಲ್ಪನಾಜೀವಿಯಾಗಿದ್ದ ಮಾನವನು ಇಂದು ವಿಜ್ಞಾನಿಯೂ ಆಗಿದ್ದಾನೆ. ಆದ್ದರಿಂದ ಹಿಂದೆಂದೂ ಊಹಿಸದಷ್ಟು ದೊಡ್ಡ ಜ್ಞಾನಭಾಂಡಾರ ಅವನದಾಗಿದೆ.

ಇಷ್ಟಾದರೂ ಜಗತ್ತಿನಲ್ಲಿ ಎಷ್ಟು ಪ್ರಾಣಿ-ಜಾತಿಗಳಿವೆ, ಎಷ್ಟು ವೈಯಕ್ತಿಕ ಗುಂಪುಗಳಿವೆ ಎಂಬುದನ್ನು ಕೇಳಿದರೆ ಆತ ಕಲ್ಪನಾಶಕ್ತಿಗೇ ಶರಣುಹೋಗಬೇಕು!

ಪ್ರಾಣಿಶಾಸ್ತ್ರಜ್ಞರು ಸುಮಾರು ೧,೧೧೫,೦೦೦ ಪ್ರಾಣಿ-ಜಾತಿಗಳಿವೆ ಎಂಬುದನ್ನು ಊಹಿಸಿದರೆ, ಇನ್ನೂ ಕೆಲವರು ಅದನ್ನು ೧,೫೦೦,೦೦೦ ಸಂಖ್ಯೆಗೆ ಏರಿಸುತ್ತಾರೆ. ಇದರಲ್ಲಿ ಸುಮಾರು ೯೦೦,೦೦೦ ಅಂದರೆ ಶೇಕಡಾ ೭೦ರಿಂದ ೮೦ರಷ್ಟು ಕೀಟ-ಜಾತಿಗಳೇ ಇವೆ. ಅಲ್ಲದೆ ಪ್ರತಿವರ್ಷ ಸುಮಾರು ೬೦೦೦-೭೦೦೦ ಹೊಸ ಹೊಸ ಪ್ರಾಣಿಗಳು ಮಾನವನ ಕಣ್ಣಿಗೆ ಬೀಳುತ್ತವೆ, ಇವು ಹೊಸದಾಗಿ ನಿರ್ಮಿತವಾದವಲ್ಲ. ಆದರೆ ಇಷ್ಟು ವರ್ಷ ಅವುಗಳ ಮೇಲೆ ಕಣ್ಣು ಹಾಯ್ದಿರಲಿಲ್ಲ. ಈ ಪ್ರತಿಯೊಂದು ವರ್ಗದಲ್ಲೂ ಪ್ರತ್ಯೇಕ ಪ್ರಾಣಿಗಳು ಎಷ್ಟಿರಬಹುದೆಂದು ಲೆಕ್ಕಾಚಾರ ಮಾಡುವದು ಅತ್ಯಾಧುನಿಕ ಕಾಂಪ್ಯುಟರಕ್ಕೂ ನಿಲುಕದ ಮಾತು, ಆದರೆ ಕೆಲವು ಗುಂಪುಗಳ ಸದಸ್ಯ-ಪ್ರಾಣಿಗಳ ಸಂಖ್ಯೆ ಸೂಚಿಸಿದರೆ ಜಗತ್ತಿನಲ್ಲಿರುವ ಪ್ರಾಣಿಗಳ ಬೃಹತ್ ಸಂಖ್ಯೆಯು ಕಲ್ಪನೆ ಬರುವಂತಿದೆ.

ಮಳೆ-ಚಳಿಗಾಲದಲ್ಲಿ ಅಷ್ಟಾಗಿ ಕಾಣಬಾರದ ನೊಣಗಳು ಬೇಸಿಗೆಯಲ್ಲಿ ಎಲ್ಲೆಡೆಗೆ ರಾಜ್ಯವಾಳುತ್ತವೆ. ಕಾರಣ ಬೇಸಿಗೆಯಲ್ಲಿ ಸಂತಾನೋತ್ಪಾದನಕಾರ್ಯದಲ್ಲಿ ಅವು ತೊಡಗಿರುತ್ತವೆ. ಆದ್ದರಿಂದ ಬಲ್ಲವರು, ಚಳಿಗಾಲದಲ್ಲಿ ಒಂದು ನೊಣ ಕೊಂದರೆ ಬೇಸಿಗೆಯಲ್ಲಿ ಸಾವಿರ ಕೊಂದಂತೆ ಎಂದಿದ್ದಾರೆ, ನೊಣಗಳ ಇಡೀ ಸಂತಾನ ಪ್ರೌಢಾವಸ್ಥೆಗೆ ಮುಟ್ಟುವಂತೆ ಇದ್ದರೆ, ಬೇಸಿಗೆಯ ಪ್ರಾರಂಭದಲ್ಲಿದ್ದ ಒಂದು ನೊಣ-ದಂಪತಿಯಿಂದ ಬೇಸಿಗೆ ಮುಗಿಯುವ ತನಕ ೧೯೧,೦೦೦,೦೦೦ ೦೦೦,೦೦೦,೦೦೦,೦೦೦, ಮರಿ-ಪ್ರತಿನಿಧಿಗಳು ಬರಬಲ್ಲವು. ಕುಂಬಳಬಳ್ಳಿಯ ಮೇಲೆ ಜೀವಿಸುವ ಎಫಿಡದ ಸಂತಾನವನ್ನು ಅದರ ಎಂತಹ ವೈರಿಯಿಂದಲೂ ಸಂಪೂರ್ಣವಾಗಿ ನಾಶಮಾಡಲು ಸಾಧ್ಯವಿಲ್ಲ ಎಂಬ ಪ್ರತೀತಿಯಿದೆ. ಒಂದು ಎಫಿಡ ಕೇವಲ ೪೧ ಮರಿಗಳಿಗೆ ಜನ್ಮಕೊಡುತ್ತವೆ. ಆದರೆ ಒಂದೇ ಒಂದು ಬೇಸಿಗೆಯಲ್ಲಿ ಎಫಿಡವು ಹದಿನಾರು ತಲೆಮಾರುಗಳನ್ನು ಉತ್ಪಾದಿಸುವದರಿಂದ ಒಂದೇ ಎಫಿಡದ ಸಂತಾನ ೧,೫೬೦,೦೦೦,೦೦೦,೦೦೦,೦೦೦,೦೦೦,೦೦೦,೦೦೦ದಷ್ಟು ಆಗುವ ಸಾಧ್ಯತೆಯಿದೆ. ಇರುವೆ-ರಾಣಿ ದಿನವೊಂದಕ್ಕೆ ೩೪೦ ಮೊಟ್ಟೆಗಳನ್ನು ಇಟ್ಟರೆ ಜೇನು-ರಾಣಿ೨೦೮೦ ಇಡುತ್ತದೆ. ವ್ಯಯಕ್ತಿಕ ಸಂತಾನೋತ್ಪತ್ತಿ ಕಾರ್ಯ-ಕ್ರಮದಲ್ಲಿ ಒರಲೆ-ರಾಣಿಯನ್ನು ಮೀರಿಸುವ ಇನ್ನೊಂದು ಜೀವಿ ಇರಲಿಕ್ಕಿಲ್ಲ

ಗೂಡಿನ ಅತೀ ಆಳದ ಸಂರಕ್ಷಿತ ಕೋಣೆಯಲ್ಲಿ ವಾಸಿಸುವದರಿಂದ ಸಹಜ ವಾತಾವರಣದಲ್ಲಿ ಅದು ೧೫ರಿಂದ ೫೦ವರ್ಷಗಳ ವರೆಗೆ ಬಾಳಬಲ್ಲದು. ಈ ರಾಣಿ ದಿನ ಒಂದಕ್ಕೆ ೭೦೦೦ ತತ್ತಿಗಳನ್ನಿಟ್ಟರೆ, ಅದರ ಜೀವಮಾನದಲ್ಲಿ ಸಂತತಿ ಸಂಖ್ಯೆ ಎಷ್ಟು ಹೆಚ್ಚಿಸುವದೆಂದು ಲೆಕ್ಕಮಾಡಲು ಗಣಿತ-ತಜ್ಞನೇ ಬೇಕು. ಗುಳೇ ಹೊರಟ ಮಿಡತೆಗಳೂ ಅಸಂಖ್ಯಾತವಾಗಿರುತ್ತವೆ. ಇವುಗಳ ಹಾವಳಿ ಹೆಚ್ಚಾದ ಮೂರು ತಿಂಗಳಲ್ಲಿ ೪೫೦ ಟನ್ ಮೊಟ್ಟೆಗಳನ್ನೂ, ೧೨೦೦ ಟನ್ ಮಿಡತೆಗಳನ್ನೂ ಶೇಖರಿಸಲಾಯಿತು. ಕೆಲವು ಬಾರಿ ಮಿಡತೆಗಳ ಗುಂಪು, ಧಾರವಾಡದಿಂದ ಬೆಂಗಳೂರಿನ ಅಂತರದಷ್ಟು ಉದ್ದ, ಧಾರವಾಡದಿಂದ ಕಡಲ ಅಂಚಿನವರೆಗಿನಷ್ಟು (ನೂರು ಮೈಲು) ಅಗಲ ಮತ್ತು ಅರ್ಧ ಮೈಲು ಎತ್ತರವಾಗಿರುತ್ತವೆ. ಇದರಲ್ಲಿ ಕಡಿಮೆ ಎಂದರೆ ೧೨೪,೦೦೦ ಲಕ್ಷ ಮಿಡತೆಗಳಾದರೂ ಇರಬೇಕೆಂದು ಅಂದಾಜು ಮಾಡಲಾಗಿದೆ. ಹೊಲಗಳಲ್ಲಿ ಕಾಡುಗಳಲ್ಲಿ ಪ್ರತಿ ಎಕರೆಗೆ ೨೦೦೦ ದಿಂದ ೪೦೦೦ ಲಕ್ಷ ಜೀವಿಗಳು ಜೀವಿಸುತ್ತವೆ ಎಂದು ಕಂಡುಹಿಡಿಯಲಾಗಿದೆ. ಇವುಗಳಲ್ಲಿ ಹೆಚ್ಚಿನ ಜೀವಿಗಳು ಕೃಷಿಗೆ, ಅರಣ್ಯಕ್ಕೆ ಹಿತಕಾರಿ. ಸಮಕಳಿಯಿಂದ ಅವು ನಾಶವಾಗುವಂತಾದರೆ ಸಸ್ಯಜೀವನಕ್ಕೆ ಬಾಧೆತಟ್ಟುತ್ತದೆ. ಗಂಗಾನದಿಯಲ್ಲಿಯ ಕಟ್ಲಾಮೀನು ಒಂದೂವರೆ ಲಕ್ಷ ತತ್ತಿಗಳನ್ನು ಇಟ್ಟರೆ ರುಹು ಎರಡು-ಮೂರು ಲಕ್ಷ ಸಹಜವಾಗಿ ಕೊಡುವದು. ಈ ಅಂಕಿ-ಸಂಖ್ಯೆಗಳಿಂದಲೇ ಪ್ರಾಣಿಗಳ ಖಾನೇ ಸುಮಾರಿ ತೆಗೆಯುವದು ಎಷ್ಟು ಕಷ್ಟವೆಂಬ ಕಲ್ಪನೆ ಬರುವಂತಿದೆ.

ಪ್ರಾಣಿಗಳ ಸಂಖ್ಯಾಬಲವನ್ನು ಕಂಡುಹಿಡಿಯಲು ವಿಜ್ಞಾನಿಗಳು ವಿವಿಧ ಉಪಾಯಗಳನ್ನು ಕೈಕೊಂಡಿದ್ದಾರೆ. ನೀರಿನಲ್ಲಿ ಇರುವ ಸೂಕ್ಷ್ಮ ಪ್ರಾಣಿಗಳನ್ನು ಎಣಿಸಲು ಆಳದ ವಿವಿಧ ಸ್ತರಗಳಲ್ಲಿ ಒಂದೊಂದು ಘನ ಅಡಿ ನೀರನ್ನು ಬೇರ್ಪಡಿಸಿ ಅದರಲ್ಲಿ ಇರುವ ಸಿಂಪಿಗಳನ್ನು ಎಣಿಸುವರು. ಇದರಂತೆ ದಿನದ, ತಿಂಗಳ, ವರ್ಷದ ವಿವಿಧ ಕಾಲದಲ್ಲಿ ಅವುಗಳ ಸಂಖ್ಯೆಯಲ್ಲಿ ಆಗುವ ಬದಲಾವಣೆಗಳನ್ನು ಅಭ್ಯಸಿಸುವರು. ಅತಿ ಸೂಕ್ಷ್ಮ ಪ್ರಾಣಿಗಳನ್ನು ನಾಯಲೊನ ಬಲೆಗಳಲ್ಲಿ ತಾಸಿಗೆ ಎಷ್ಟೆಷ್ಟು ಸಿಗುವವು ಎಂದು ಎಣಿಸುವರು. ಸ್ವಲ್ಪ ದೊಡ್ಡ ಪ್ರಾಣಿಗಳನ್ನು ಅಲ್ಲಿ ತಂದು ಪ್ರಯೋಗಾಲಯಗಳಲ್ಲಿ ಇಟ್ಟು ಅವುಗಳ ಸಂತತಿನಿರ್ಮಾಣಸಾಮರ್ಥ್ಯವನ್ನು ನಿರ್ಧರಿಸುವರು. ಇದರಂತೆ ಭೂಮಿಯ ಮೇಲಿನ ಘನಪೂಟಿನ ಮಣ್ಣನ್ನು ಬೇರ್ಪಡಿಸಿ ಅದರಲ್ಲಿಯ ಜೀವಿಗಳನ್ನು ಎಣಿಸುವರು. ಸಸ್ಯಜೀವಿಗಳನ್ನು ಬೇರಿನಲ್ಲಿ,

ಬೊಡ್ಡೆಯಲ್ಲಿ, ಎಲೆ, ಹೂ, ಕಾಯಿ, ಹಣ್ಣುಗಳಲ್ಲಿಯೋ ಎಣಿಸಿ ಸರಾಸರಿ ತೆಗೆಯುವರು. ಕಾಡುಗಳಲ್ಲಿ ಅಲೆಯುವ ಪಶು-ಪಕ್ಷಿಗಳ ಸಂಖ್ಯೆ ಕಂಡುಹಿಯುವದು ಹೆಚ್ಚು ಕಷ್ಟಕರ. ಚಿಗರೆಗಳನ್ನು ಎಣಿಸಬೇಕಾದರೆ ಬಲೆಗಳನ್ನು ಹಾಕಿ ಸುಮಾರು ನೂರು ಚಿಗರೆಗಳನ್ನು ಹಿಡಿದು ದೂರದಿಂದಲೇ ಕಾಣುವಂತಹ ಬಣ್ಣವನ್ನು ಅವುಗಳ ಬಾಲಕ್ಕೆ ಬಡಿದು ಬಿಟ್ಟುಬಿಡುವರು. ಕೆಲ ಕಾಲದ ನಂತರ ತಿರುಗಿ ಬಲೆ ಹಾಕಿ ಹಿಡಿದಾಗ ಸಿಕ್ಕ ನೂರು ಚಿಗರೆಗಳಲ್ಲಿ ಹತ್ತು ಬಣ್ಣ ಬಡಿದುಕೊಂಡ ಬಾಲದವು ಇದ್ದರೆ ಹಿಂಡಿನಲ್ಲಿ ಒಂದು ಸಾವಿರ ಚಿಗರೆಗಳು ಇರಬಹುದು ಎಂದು ಅಂದಾಜು ಮಾಡಲಾಗುತ್ತದೆ. ಇವುಗಳಲ್ಲಿ ಗಂಡು-ಹೆಣ್ಣುಗಳ ಪ್ರಮಾಣ, ಸಂತತಿ-ನಿರ್ಮಾಣ ಶಕ್ತಿ ಮುಂತಾದವುಗಳನ್ನು ಅಭ್ಯಸಿಸಿ ಅವುಗಳ ಸಂಖ್ಯೆ ಬೆಳೆಯುತ್ತಿದೆಯೋ ಕುಗ್ಗುತ್ತಿದೆಯೋ ಎಂದು ನಿರ್ಧರಿಸಿ ಅವುಗಳನ್ನು ನಿಯಂತ್ರಣದಲ್ಲಿಡುವ ಉಪಾಯುಗಳನ್ನು ಕೈಕೊಳ್ಳಲಾಗುತ್ತಿವೆ. ಹುಲಿ, ಸಿಂಹ, ಚಿರತೆಗಳನ್ನು ಸುಲಭವಾಗಿ ಹಿಡಿಯಲು ಸಾಧ್ಯವಾಗದ್ದರಿಂದ ಅವುಗಳು ಮೂರ್ಛೆ ಹೋಗುವಂತೆ "ಟ್ರಾಂಕ್ವಿಲಾಯಿಝರ್" ಅಮಲಿನ ಚುಚ್ಚುಮದ್ದನ್ನು ಶರೀರದಲ್ಲಿ ಬಂದೂಕಿನಿಂದ ಸೇರಿಸಿ ನಂತರ ಚಿಗರೆಯಂತೆಯೇ ಗುರುತು ಹಾಕಿ ಎಣಿಸಲಾಗುತ್ತದೆ. ಪಕ್ಷಿಗಳನ್ನು ಹಿಡಿದು ಕಾಲಿಗೋ, ಕೊರಳಿಗೋ ಎಲ್ಯುಮಿನಿಯಮ್ ತಗಡಿನ ಬಿಲ್ಲೆಗಳನ್ನು ಕಟ್ಟಿ ಹಾರಲು ಬಿಟ್ಟು ನಂತರ ಸಿಕ್ಕ ಹಕ್ಕಿಗಳಲ್ಲಿ ಎಷ್ಟು ಬಿಲ್ಲೆ ಉಳ್ಳವು ಎಂದು ತಿಳಿದುಕೊಂಡು ಅವುಗಳ ಸಂಖ್ಯಾಪ್ರಮಾಣದ ಅಂದಾಜು ಮಾಡಲಾಗುತ್ತದೆ. ಯಾವ ವಿಧಾನ ಬಳಸಿದರೂ ಸರಿಯಾದ ಅಂಕಿ-ಸಂಖ್ಯೆಗಳು ಸಿಗುವದು ತೀರ ಕಷ್ಟದ ಮಾತು. ತಲೆ ಇದ್ದವರು ಅನಿಸಿಕೊಂಡ ಮಾನವರು ತಲಾ ನಂಬರು ಎಣಿಸುವದೇ ಎಷ್ಟೊಂದು ಕಷ್ಟವಾದಾಗ ಉಳಿದ ಪ್ರಾಣಿಗಳ ಮಾತೇನು?

ಹಾಗೆಯೇ ಪ್ರಾಣಿಕೋಟಿಯಲ್ಲಿ ಒಂದರಿಂದ ಇನ್ನೊಂದನ್ನು ಬೇರ್ಪಡಿಸಲು ಪ್ರತಿಯೊಂದಕ್ಕೂ ಒಂದೊಂದು ಹೆಸರು ಕೊಡುವದು ಸುಲಭಸಾಧ್ಯವಾದ ಮಾತಲ್ಲ. ಧೀಮಂತಜೀವಿಯೆಂದು ಮೆರೆಯುವ ಮಾನವನ ವಂಶಜರಿಗೆಲ್ಲ ಪ್ರತ್ಯೇಕ ಹೆಸರು ಕೊಡಲು ಸಾಧ್ಯವಾಗುತ್ತಿಲ್ಲ. ಅಂತೆಯೇ ನಮ್ಮಲ್ಲಿ ಚಂದ್ರಶೇಖರ, ಕೃಷ್ಣಮೂರ್ತಿ, ಜಾನ್, ಮೇರಿ, ಬಸವರು ಎಷ್ಟು ಲಕ್ಷ ಇದ್ದಾರೋ ಏನೋ! ಪ್ರತ್ಯೇಕಿಸಲು ಶಾರ್ದೂಲಸಿಂಗ, ಬಾಟ್ಲಿವಾಲಾ, ಕುದುರೆಮೋತಿಗಳಂತಹ ಅಡ್ಡ ಹೆಸರುಗಳನ್ನು ಪಡೆಯುವ ಪ್ರಸಂಗ ಬಂದಿದೆ, ಸಾಕಿದ ಗಿಳಿಗೆ ವಿಠು ಎಂದೂ

ನಾಯಿಗೆ ಟಿಪ್ಪೂ, ಮೋತಿಯೆಂದೂ ನಾಲ್ಕಾರು ಹೆಸರುಗಳಿಗಿಂತ ಬೇರೆಯವು ಹೊಳೆಯುವದೇ ಇಲ್ಲ. ಮಾನವನನ್ನು ಅನುಕರಿಸಿ ಪ್ರಾಣಿಗಳಲ್ಲಿ ಹೆಸರು ಇಡುವ ಪರಿಪಾಠ ಇದೆಯೋ ಇಲ್ಲವೋ ಗೊತ್ತಿಲ್ಲ. ಇದ್ದರೂ ಮಾನವನಂತೆ ಇಂದಿರಾ, ಸರೋಜಿನಿ, ರಾಜೀವ, ಸಂಜೀವ ಎಂದು ಇಡುವವೆಂದು ಹೇಳಲಾಗುವದಿಲ್ಲ. ಬದಲಾಗಿ ಪೀಡಕ ಕೀಟಗಳು ತಮ್ಮಲ್ಲಿ ಶೂರರೆನಿಸಿಕೊಂಡವರಿಗೆ. ಮಾನವ ವಿಪರೀತನ್ ನರಹಿಂಸಕನ್, ಸಂತಾನಪ್ರವೀಣನ್, ವಂಶೋದ್ಧಾರಕನ್ ಎಂಬ ಅನ್ವರ್ಥಕ ಹೆಸರುಗಳನ್ನು ಕೊಡುತ್ತಿದ್ದವೋ ಏನೋ!

ನಾವು ಪ್ರತಿದಿನ ಕಾಣುವ ಲಕ್ಷಾಂತರ ಜೀವಿಗಳಿಗೆ ಕನ್ನಡ-ಭಾಷೆಯಲ್ಲಿ ಹೆಸರುಗಳೇ ಇಲ್ಲ. ಜಿಟ್ಟೆ, ನೊಣ, ಮಿಡತೆ, ಕಣಜ ಸೊಳ್ಳೆಗಳಂತಹ ಹತ್ತಾರು ಹೆಸರುಗಳನ್ನು ಬಿಟ್ಟರೆ ಉಳಿದವುಗಳನ್ನೆಲ್ಲ ಕೀಟ ಮತ್ತು ಹುಳ-ಹುಪ್ಪಡಿಗಳೆಂದೇ ನಾವು ಸಂಭೋಧಿಸುತ್ತೇವೆ. ತೀರ ಇತ್ತೀಚೆಗೆ ಪ್ರಕಟವಾದ ಕನ್ನಡ ವಿಶ್ವಕೋಶ ಸಹಾಯಕ್ಕೆ ಬಂದೀತೆಂದು ನೋಡಿದರೆ ಅದರಲ್ಲಿ ಬಳಸಿದ ಹೆಸರುಗಳೆಲ್ಲ ಇಂಗ್ಲಿಷಿನಿಂದ ಎರವಲು ಪಡೆದವುಗಳೇ! ಮಾನವನಿಗೆ ಗೊತ್ತಿದ್ದ ಜಾಗತಿಕ ಪ್ರಾಣಿಗಳಲ್ಲಿ ೪೭ ಸಾವಿರ ಕೆಳದರ್ಜೆಯ ಪ್ರಾಣಿಗಳು, ೯.೫ ಲಕ್ಷ ಕೀಟವರ್ಗಕ್ಕೆ ಸೇರಿದವು, ೮೦ ಸಾವಿರ ಶಂಖವರ್ಗದವು, ಎಲ್ಲ ಬೆನ್ನೆಲವು ಇದ್ದ ಪ್ರಾಣಿವರ್ಗ ಸುಮಾರು ೩೮ ಸಾವಿರ ಜಾತಿಯವು. ನಮ್ಮ ಸಹಪ್ರಾಣಿಗಳಿಂದ ಲಾಭಪಡೆಯಬೇಕಾದರೆ, ಅವುಗಳಿಂದ ರಕ್ಷಣೆ ಪಡೆಯಬೇಕಾದರೆ, ಅವನ್ನು ನಿಯಂತ್ರಿಸಬೇಕಾದರೆ, ಒಂದನ್ನು ಇನ್ನೊಂದು ಜಾತಿಯಿಂದ ಬೇರ್ಪಡಿಸಲು ಸ್ಪಷ್ಟ ನೆಲೆಯಿರಬೇಕು. ನಾಯಿ, ಬೆಕ್ಕು, ಸಿಂಹ, ಹುಲಿಗಳೆಲ್ಲ ಒಂದೇ ಗುಂಪಿಗೆ ಸೇರಿದವು, ಆದರೆ ಮಾಂಸಾಹಾರಿ ಕಾಡುಪ್ರಾಣಿ ಯಾವದೆಂದು ಹೇಗೆ ತಿಳಿಯಬೇಕು? ನಾಯಿಯಲ್ಲೂ ಅನೇಕ ಪ್ರಭೇದಗಳಿವೆ: ಆಲ್ ಸೇಶನ್, ಬುಲ್‌ಡಾಗ್, ಟೆರಿಯರ್, ಬಿಡಾಡಿ ಇತ್ಯಾದಿ. ಆದ್ದರಿಂದ ಜಾತಿಗೊಂದು ಹೆಸರು ಕೊಡುವದು ಅತ್ಯವಶ್ಯ.

ನಾಮಕರಣದ ಈ ಬೃಹತ್ ಯೋಜನೆಯನ್ನು ೧೭೫೮ರಲ್ಲಿಯೇ ಲಿನಿಯಸ್ ಎಂಬ ವಿಜ್ಞಾನಿ ಪ್ರಾರಂಭಿಸಿದನು. ಅವನು ೮೨೪ ಪುಟದ ಪುಸ್ತಕವೊಂದನ್ನು ಬರೆದು ಅದರಲ್ಲಿ ೪೩೭೬ ಪ್ರಾಣಿಗಳ ಹೆಸರುಗಳನ್ನು ನಮೂದಿಸಿದ್ದಾನೆ. ಅವನ ಈ ಕೆಲಸಕ್ಕಾಗಿ ಎಂತಹ ಪ್ರತಿಫಲ ಕೊಟ್ಟರೂ ಕಡಿಮೆಯೇ! ಅಲ್ಲಿಂದ ಕೇವಲ ಒಂದು ಶತಮಾನದಲ್ಲಿ ೧೦೦,೦೦೦ ಪ್ರಾಣಿಗಳ ಹೊಸ ಹೆಸರುಗಳನ್ನು ಜೋಡಿಸ

ಲಾಯಿತು. ಕ್ರಿ, ಶ, ೧೯೦೦ರ ಪ್ರಾರಂಭದಲ್ಲಿ ೩೦೦,೦೦೦ ಪ್ರಾಣಿಗಳಿಗೆ ಹೆಸರು ಕೊಡಲಾಯಿತು. ಇಂದು ಮಾನವನಿಗೆ ತಿಳಿದ ಪ್ರಾಣಿಗಳ ಹೆಸರುಗಳನ್ನಷ್ಟೇ ಬರೆದರೆ ಅದಕ್ಕಾಗಿ ನಾಲ್ಕು ಸಾವಿರ ಪುಟದ ಗ್ರಂಥ ಬೇಕಾದೀತು. ಈ ಪ್ರಾಣಿಗಳಿಗೆಲ್ಲ ವೈಜ್ಞಾನಿಕ ಹೆಸರುಗಳನ್ನು ಬಳಸಿದರೆ, ಇಂಗ್ಲಿಷ್, ಜರ್ಮನ್, ಫ್ರೆಂಚ್, ರಶಿಯನ್ ಯಾವ ಭಾಷೆಯವರಿಗೂ ಆ ಪ್ರಾಣಿಯು ಹೆಸರು ಕೂಡಲೇ ತಿಳಿಯುವದು; ನಾವು 'ಒಂಟೆ-ಹುಳ' ಎಂದು ಕರೆಯುವ ಕೀಟದ ಹೆಸರನ್ನು ಇಂಗ್ಲಿಷಿನಲ್ಲಿ 'ಕೆಮಲ್ ವರ್ಮ್' ಎಂದು ಭಾಷಾಂತರಿಸಿದರೆ, ಯಾವ ಇಂಗ್ಲಿಷ್ ಪಂಡಿತನಿಗೂ ಈ ಕೀಟ ಯಾವದು ಎಂದು ಖಚಿತ ಹೇಳಲಾಗದು. ಅದರಂತೆ ಈ ಕೀಟದ ಇಂಗ್ಲಿಷ್ ಹೆಸರು ಮೆಂಟಿಸ್ ಎಂದು ಕನ್ನಡದಲ್ಲಿ ಬರೆದರೆ ಇಂಗ್ಲಿಷ್ ಓದದವರಿಗೆ ಹೇಗೆ ತಿಳಿಯಬೇಕು? ಅಲ್ಲದೆ ಒಂಟೆ-ಹುಳಗಳಲ್ಲಿ ಅನೇಕ ಭೇದಗಳಿದ್ದು ಪ್ರತಿಯೊಂದು ಜಾತಿಗೆ ಬೇರೆ ಬೇರೆ ಹೆಸರು ಇಡುವದು ಅವಶ್ಯ. 'ಮೆಂಟಿಸ್ ರಿಲಿಜಿಯೋಸಾ ಲಿ' ಎಂದು ಬರೆದರೆ ಇದು ಯುರೋಪಖಂಡದಲ್ಲಿರುವ ಒಂಟೆ-ಹುಳವೆಂದು ಜಗತ್ತಿನ ಬೇರೆ ಬೇರೆ ಮೂಲೆಯವರಿಗೆ ಕೂಡಲೇ ಗೊತ್ತಾಗುವದು.

ಈ ಪದ್ಧತಿಯ ಪ್ರಕಾರ ಪ್ರತಿಯೊಂದು ಪ್ರಾಣಿಯ ಹೆಸರು ಎರಡು ಶಬ್ದಗಳಿಂದ ಕೂಡಿದ್ದಿರಬೇಕು. ಈ ಶಬ್ದಗಳನ್ನು ಆರಿಸುವಾಗ ಆ ಪ್ರಾಣಿಯ ಗುಣ-ಧರ್ಮಗಳನ್ನು ಸುಲಭವಾದಿ ತಿಳಿಯುವಂತೆ ಇದ್ದರೆ ಉತ್ತಮ. ಪ್ರತಿಯೊಂದು ಪ್ರಾಣಿಯ ವೈಜ್ಞಾನಿಕ ಹೆಸರಿನ ಮುಂದೆ ಆ ಹೆಸರು ಕೊಟ್ಟವರ ಹೆಸರನ್ನು ನಮೂದಿಸಬೇಕು ಎಂಬುದು ರೂಢಿ. ಒಂಟೆ-ಹುಳದ ಹೆಸರನ್ನು ಪ್ರಥಮತಃ ಲಿನಿಯಸನೇ ಪ್ರಕಟಿಸಿದ್ದರಿಂದ ಹೆಸರಿನ ಮುಂದೆ 'ಲಿ' ಎಂದು ಬರೆಯಲಾಗುತ್ತದೆ. ಜೋಶಿಯವರು ಕೋಲಾರದಲ್ಲಿ ಬೇರೆಯೇ ಜಾತಿಯ ಒಂಟೆ-ಹುಳವೊಂದನ್ನು ಹುಡುಕಿದರೆಂದು ಇಟ್ಟುಕೊಳ್ಳೋಣ. ಅದಕ್ಕೆ ಮೆಂಟಿಸ್-ಕೋಲಾರಿಸ್ 'ಜೊ' ಎಂದು ಬರೆದರೆ ವೈಜ್ಞಾನಿಕ ಹೆಸರಾಯಿತು. ಇದೇ ಒಂಟೆ-ಹುಳಕ್ಕೆ ಬೇರೊಬ್ಬನು ಬೇರೆಯೇ ಹೆಸರು ಕೊಟ್ಟು ತನ್ನ ಹೆಸರನ್ನು ಅದಕ್ಕೆ ಜೋಡಿಸಬೇಕು ಎಂದು ವಾದಿಸಬಹುದು. ಇಂತಹ ತೊಂದರೆಗಳನ್ನು ನಿವಾರಿಸುವ ಸಲುವಾಗಿ "ಅಂತರ್‌ರಾಷ್ಟ್ರೀಯ ಪ್ರಾಣಿ- ನಾಮಕರಣ ಸಂಸ್ಥೆ"ಯೊಂದನ್ನು ಸ್ಥಾಪಿತಲಾಗಿದೆ. ವಿಜ್ಞಾನಿಗಳಲ್ಲಿ ಮತಭೇದವಾದಾಗ ಈ ಸಂಸ್ಥೆಯ ತೀರ್ಮಾನವೇ ಅಂತಿಮವಾದದ್ದು. ಎಷ್ಟೋ ಸಲ ಒಂದೇ ಪ್ರಾಣಿಯು ಬೇರೆ ಬೇರೆ ಜೀವನಾವಸ್ಥೆಗಳಿಗೆ ಗೊತ್ತಿಲ್ಲ

ದೆಯೋ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುತ್ತದೆ. ಆದರೆ ಸತ್ಯಸಂಗತಿ ತಿಳಿದ ನಂತರ ಹೆಚ್ಚಿನ ಹೆಸರುಗಳನ್ನು ಕೈಬಿಡಬೇಕಾಗುತ್ತದೆ. ಉದಾಹರಣಾರ್ಥವಾಗಿ ಜಿಟ್ಟೆ ಮತ್ತು ಮಿಡತೆಗಳು ತೀರ ಭಿನ್ನಪ್ರಾಣಿಗಳೆಂದು ಬೇರೆ ಬೇರೆ ಹೆಸರು ಕೊಡಲಾಗಿತ್ತು. ಆದರೆ ಹೆಚ್ಚಿನ ಸಂಶೋಧನೆಯ ನಂತರ ಜಿಟ್ಟೆಗಳೇ ಗುಳೇ ಹೋದಾಗ ಮಿಡತೆ ಎಂದು ಕರೆಯಲಾಗುತ್ತದೆ ಎಂದು ತಿಳಿದದ್ದರಿಂದ ಮಿಡತೆಯ ಒಂದು ವೈಜ್ಞಾನಿಕ ಹೆಸರನ್ನು ಬಿಟ್ಟುಕೊಡಲಾಯಿತು. ಒಂದೇ ಪ್ರಾಣಿಗೆ ದಿನ ಬಳಕೆಯ ಹತ್ತಾರು ಹೆಸರುಗಳಿವೆ. ದಕ್ಷಿಣ-ಕರ್ನಾಟಕದ ಒಂಟೆ-ಹುಳ, ಉತ್ತರ-ಕರ್ನಾಟಕದಲ್ಲಿ ಶಿವನಕುದುರೆಯಾಗುತ್ತದೆ. ಉತ್ತರ-ಭಾರತದಲ್ಲಿ ರಾಮನಕುದುರೆಯಾಗುತ್ತದೆ. ಹೀಗಾಗಬಾರದೆಂದು ಇವುಗಳಲ್ಲಿ ಯಾವ ದಿನಬಳಕೆಯ ಹೆಸರು ಇಡಬೇಕೆಂದು ಈ ವಿಶ್ವಸಂಸ್ಥೆಯೇ ನಿರ್ಧರಿಸುತ್ತದೆ. ಮಾನವನ ಮಕ್ಕಳ ಸಲುವಾಗಿ ಇಂಥದೊಂದು ಸಂಸ್ಥೆ ಇದ್ದರೆ ಸ್ಥೂಲಕಾಯೆ-ಲತಾ, ಚೋಟುದ್ದ ವೇಣಿ, ನಾಗವೇಣಿ, ಶಾಮಲವರ್ಣೆ, ಗುಲಾಬಿ ಎಂದು ಕರೆಯಲ್ಪಡುವ ಪರಿಪಾಠ ತಪ್ಪುತ್ತಿತ್ತು!

ನಾವೆಲ್ಲ ವೈಯಕ್ತಿಕ ಹೆಸರು ಪಡೆದರೂ, ಕಪ್ಪು ಬಿಳಿಯರು ಎಂದು ಭೇದ ಕಲ್ಪಿಸಿದರೂ ಭಾರತೀಯರು,ಚೀನೀಯರು ಎಂದೆನಿಸಿಕೊಂಡರೂ ಮಾನವಕೋಟಿ ಇಡೀ ಹೊಮೋಸೇಪಿಯ ಎಂದು ಒಂದೇ ವೈಜ್ಞಾನಿಕ ಹೆಸರನ್ನು ಪಡೆದಿದೆ. ಹಲವಾರು ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರಣಗಳಿಗಾಗಿ ನಮ್ಮ ನಮ್ಮ ವಂಶಗಳಲ್ಲಿಯೇ ನಾವು ಮದುವೆಯಾಗುತ್ತೇವೆ. ಆದರೆ ಯಾವದೇ ಉಪಜಾತಿಯ ಕನ್ಯೆ ಹೆಚ್ಚಿನ ಭೇದವುಳ್ಳ ಪಂಗಡವೊಂದರ ತರುಣನನ್ನು ಮದುವೆಯಾದರೂ ವಂಶೋದ್ಧಾರಕ ಹುಟ್ಟಿಯೇ ಹುಟ್ಟುವ. ಆದರೆ ನರ-ವಾನರರ ವಿವಾಹವಾದರೆ ಸಂತತಿಯಾಗಲಾರದು. ಇದಕ್ಕೆ ಕಾರಣವೆಂದರೆ ಪ್ರಾಣಿಗಳ ಉತ್ಕ್ರಾಂತಿ ಆಗುತ್ತ ನಡೆದಂತೆ ದೂರದ ಸಂಬಂಧ ಪ್ರಾಣಿಗಳ ಜನನೇಂದ್ರಿಯಗಳ ಜೀವಾಣಗಳು ಸುಲಭವಾಗಿ ಫಲಕಾರಿಯಾಗುವಂತೆ ಕೂಡಿಕೊಳ್ಳುವದಿಲ್ಲ. ಕುದುರೆ-ಕತ್ತೆಗಳ ಸಂಯೋಗದಿಂದ ಹೇಸರಗತ್ತೆ ಹುಟ್ಟಿಕೊಂಡರೂ ಅವು ಹತ್ತಿರದ ಸಂಬಂಧಿಗಳು ಎನಿಸಿದರೂ ಹೇಸರಗತ್ತೆ ನಪುಂಸಕವಾಗಿಬಿಡುದದು. ಹೀಗಾಗಿ ಈ ವಂಶದ ಬೆಳವಣಿಗೆಯಾಗದು. ಇದೇ ಕಾರಣಕ್ಕಾಗಿ ಮಾನವನು ಅನೈಸರ್ಗಿಕವಾದ ಕಾಮ ತೃಪ್ತಿಗೆಂದು ಹಲವಾರು ಪ್ರಾಣಿಗಳೊಡನೆ ಸಂಭೋಗ ನಡೆಸಿದರೂ ಅವುಗಳಿಂದ

ಹಯವದನ, ಗೋದೇಹಿ ಮುಂತಾದವುಗಳು ಹುಟ್ಟಿಕೊಳ್ಳುವದಿಲ್ಲ. ಬಿಳಿಯ ಕರಿಯರ ವಿವಾಹದಲ್ಲಿ ಅತಿ ಬಿಳೀ, ಅತಿ ಕರಿ, ಮಧ್ಯಮ, ಕಂದು ಮಕ್ಕಳು ಹುಟ್ಟಿಕೊಳ್ಳುವಂತೆ ಪ್ರಾಣಿ-ಮಾನವರಿಂದ 'ಮಹಾ-ಪ್ರಾಣಿ'ಗಳು ಹುಟ್ಟಿಕೊಳ್ಳುವಂತಿದ್ದರೆ ಜಗತ್ತಿನ ಜೀವಕೋಟಿ ಹೇಗೆ ಇರುತ್ತಿತ್ತೋ ಏನೋ!

•

ಹತ್ತು : ಕುಟುಂಬಯೋಜನೆ

ಧನ-ಧಾನ್ಯಗಳಲ್ಲಿ ಸಮೃದ್ಧ ದೇಶವೆಂದು ಹೆಸರು ಗಳಿಸಿದ ಅಮೇರಿಕೆಯೂ ತನ್ನ ಬೆಳೆಯುತ್ತಿರುವ ಜನಸಂಖ್ಯೆಯ ಬಗ್ಗೆ ಚಿಂತಿತವಾಗಿದೆ.. ಇದಕ್ಕೆ ಮುಖ್ಯ ಕಾರಣವೆಂದರೆ ವೈಜ್ಞಾನಿಕ ಪ್ರಗತಿಯಾದಂತೆ ಮಾನವನ ಜೀವನದ ಅವಶ್ಯಕತೆಗಳು ಬೆಳೆಯುತ್ತ ಹೋಗುತ್ತವೆ. ನಮ್ಮ ತಾತಂದಿರು ಹೆಸರೇ ಕೇಳದ ಹಲವಾರು ವಸ್ತುಗಳು ನಮಗೆ ಅತ್ಯವಶ್ಯವಾಗಿ ಈಗ ಬೇಕಾಗುತ್ತವೆ. ಕಾಲುನಡಿಗೆಯಲ್ಲಿ ನಡೆಯುವ ಆಫ್ರಿಕನ್ನರಿಗೆ ಸಾಯಿಕಲ್ ವಿಲಾಸೀ ವಸ್ತುವಾದರೆ ಭಾರತೀಯರಿಗೆ ಅತ್ಯವಶ್ಯ ವಾಹನವಾಗಿ ಪರಿಣಮಿಸಿದೆ. ನಮ್ಮಲ್ಲಿ ಕಾರು ಸಿರಿವಂತಿಕೆಯ ಪ್ರತೀಕವಾದರೆ ಅಮೇರಿಕೆಯಲ್ಲಿ ಅತ್ಯವಶ್ಯ-ವಸ್ತು. ಜಗತ್ತಿನ ಜನವಸತಿ ಭರದಿಂದ ಬೆಳೆದಂತೆ ಜೀವನಾವಶ್ಯಕತೆಯ ಸಾಮಗ್ರಿಗಳೂ ಬೆಳೆಯುತ್ತವೆ. ಆದರೆ ಆರ್ಥಿಕ ವ್ಯವಸ್ಥೆ ಅದಕ್ಕೆ ಅನುಗುಣವಾಗಿ ಬೆಳೆಯದಿದ್ದರೆ ಎಲ್ಲೆಡೆ ಹಾಹಾಕಾರ, ಅಸಂತೋಷಗಳು ಹಬ್ಬುತ್ತವೆ. ಜನವಸತಿ ಮತ್ತು ಹಣಕಾಸು ಸಮನಾಗಿ ಬೆಳೆದರೆ ಮಾತ್ರ ತೃಪ್ತಿಕರ ಜೀವನ ನಡೆಸಲು ಸಾಧ್ಯ. ಆರ್ಥಿಕವಾಗಿ ಮುಂದುವರೆದ ವರ್ಗ ತಮ್ಮ

ಮಕ್ಕಳು ಸದಾ ಅನುಕೂಲ ವಾತಾವರಣದಲ್ಲಿ ಬೆಳೆಯಬೇಕೆಂಬ ಹಂಬಲದಿಂದ ತಮ್ಮ ಆರ್ಥಿಕ ವ್ಯವಸ್ಥೆಗೆ ಅನುಗುಣವಾಗಿ ಕುಟುಂಬಯೋಜನೆಯನ್ನು ಹಿಂದಿನಿಂದಲೂ ಮಾಡುತ್ತ ಬಂದಿದೆ. ದೇವರು ಕೊಟ್ಟ ಮಕ್ಕಳೇ ತಮ್ಮ ಪಾಲಿನ ಸಿರಿ ಎಂದು ತಿಳಿದುಕೊಂಡ ವರ್ಗ ತಮ್ಮ ಈ ಸಿರಿಯನ್ನು ಎಂದಿಗೂ ನಿರ್ಲಕ್ಷಿಸಿರಲಿಲ್ಲ! ಆದರೆ ಹಿಂದೆ ಯುದ್ಧ, ಪಿಡುಗು-ರೋಗಗಳು ಮತ್ತು ಶೈಶವ-ಮರಣಗಳು ಅತಿ ಹೆಚ್ಚಾಗಿದ್ದರಿಂದ ಜನವಸತಿಯ ಮೇಲೆ ತಂತಾನೆ ನಿಯಂತ್ರಣ ಬರುತ್ತಿತ್ತು. ಆದರೆ ಹಲವಾರು ಸಂಶೋಧನೆಗಳಿಂದ ಔಷಧೋಪಚಾರಗಳಿಂದ ಮರಣ-ಸಂಖ್ಯೆ ಕಡಿಮೆಯಾದದ್ದರಿಂದ ದಲಿತ ವರ್ಗದ ಜನ-ಸಿರಿ ಭಯಂಕರ ಸಂಖ್ಯೆಯಲ್ಲಿ ಬೆಳೆಯುತ್ತಿದೆ. ಈ ಸ್ಥಿತಿಯಲ್ಲಿ ನಮ್ಮ ಕುಟುಂಬಯೋಜನೆ, ದೇಶದ, ಸಮಾಜದ, ಕುಟುಂಬದ ದೃಷ್ಟಿಯಿಂದ ಅತ್ಯಾವಶ್ಯಕವಿದ್ದರೂ ಹೆಚ್ಚಿನ ಜನ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಪ್ರಾಣಿಲೋಕದಲ್ಲಿ ಕುಟುಂಬಯೋಜನೆ ನಿಸರ್ಗದತ್ತವಾಗಿ, ಸತತವಾಗಿ ನಡೆದುಬಂದಿದೆ. ಅಮೀಬದಂತಹ ಕೆಳವರ್ಗದ ಪ್ರಾಣಿಗಳಲ್ಲಿ ಸಂತಾನೋ-ತ್ಪತ್ತಿಯೇ ಜೀವನದ ಅತಿ ಮುಖ್ಯ ಕಾರ್ಯ. ಒಂದೇ ಒಂದು ದಿನದಲ್ಲಿ ಹತ್ತಾರು ತಲೆಮಾರುಗಳಾಗಿ ಹೋಗಿ ಸಾವಿರಾರು ವ್ಯಕ್ತಿಗಳು ಹುಟ್ಟಬಹುದು. ಆದರೆ ಅವುಗಳಿಗೆ ಪಾಲಕರಿಂದ ಯಾವದೇ ತರದ ಪಾಲನ-ಪೋಷಣ ದೊರೆಯದ್ದರಿಂದ ಅವುಗಳಲ್ಲಿ ಬಹುಸಂಖ್ಯಾಕವಾದವು ವೈರಿಗಳಿಗೆ, ವಾತಾವರಣದ ಅನಿಷ್ಟಕ್ಕೆ ತುತ್ತಾಗುವವು. ಅದರಂತೆ ಪರಪುಷ್ಟ ಪ್ರಾಣಿಗಳಿಗೆ ಪ್ರತಿತಲೆಮಾರಿನಲ್ಲೂ ಸಾವು-ನೋವುಗಳನ್ನು ಅನುಭವಿಸಬೇಕಾದ್ದರಿಂದ ಅವು ಅಸಂಖ್ಯಾತ ತತ್ತಿಗಳನ್ನು ಉತ್ಪಾದಿಸಿದರೂ ಅವುಗಳಲ್ಲಿ ಕೆಲವೇ ಪ್ರೌಢಾವಸ್ಥೆಯನ್ನು ತಲುಪುವವು. ಹೆಚ್ಚಿನ ಕೀಟಗಳು ಭಾವೀ ತಲೆಮಾರಿನ ಯೋಗಕ್ಷೇಮವನ್ನು ಅನುಲಕ್ಷಿಸಿ ತಮ್ಮ ಮೊಟ್ಟೆಗಳು ಹೆಚ್ಚಿನ ಹಾನಿಗೆ ಒಳಗಾಗದಂತೆ ಮೊದಲೇ ಎಚ್ಚರಿಕೆ ವಹಿಸುತ್ತವೆ. ಜಿರಳೆ, ತತ್ತಿಗಳನ್ನು ಯಾರ ಕಣ್ಣಿಗೂ ಬೀಳದಂತೆ ಕಗ್ಗತ್ತಲಿನ ಮೂಲೆಯಲ್ಲಿ ಇಟ್ಟರೆ, ಒಂಟೆ-ಹುಳ ಮೊಟ್ಟೆಯ ಗಂಟನ್ನು ಗಿಡ ಒಂದಕ್ಕೆ ~~ಅಂಟಿಸಿಬಿಡುವವು~~. ಜಿಟ್ಟೆಗಳು ಮೊಟ್ಟೆಗಳನ್ನು ಮಣ್ಣಿನಲ್ಲಿ ಆಳಕ್ಕೆ ಹೂಳಿಬಿಡುವವು. ಇರುವೆ-ಭಕ್ಷಕ-ಕೀಟ ತನ್ನ ತತ್ತಿಗಳನ್ನು ಇತರ ಕೀಟಗಳು ಭಕ್ಷಿಸಬಾರದೆಂದು ರೇಶಿಮೆಯ ದೇಟಿನಿಂದ ಪರ್ಣಕ್ಕೆ ಅಂಟಿಸಿರುತ್ತದೆ, ಸಂಘಜೀವಿ ಕೀಟಗಳು ಮಕ್ಕಳು-ಮರಿಗಳನ್ನು ವಿಶೇಷ

ಅಂಟಿಸಿರುತ್ತವೆ.

ಆಸ್ಥೆಯಿಂದ ಬೆಳೆಸುವದು ಎಲ್ಲರಿಗೂ ತಿಳಿದ ವಿಷಯ.

ಮತ್ಸ್ಯವರ್ಗ ಸಾಂಘಿಕವಾದ, ಕೌಟುಂಬಿಕವಾದ ಜೀವನ ನಡೆಸದಿದ್ದರೂ ಪ್ರಜೋತ್ಪತ್ತಿಕಾರ್ಯದಲ್ಲಿ ಗಂಡುಹೆಣ್ಣು ಒಟ್ಟಾಗಿರುವವು. ಈ ಹೊತ್ತಿನಲ್ಲಿ ಗಂಡು ಜೀವನ-ಸಂಗಾತಿಯನ್ನು ಹುಡುಕಿಕೊಂಡು ದೂರ ದೂರ ಅಲೆಯುವದು. ಗರ್ಭಕೋಶ ಉಬ್ಬಿದ ಹೆಣ್ಣು-ಮೀನನ್ನು ಕಂಡಾಗ ಅಕ್ಕಪಕ್ಕದಲ್ಲಿಯೇ ನುಸುಳುತ್ತ ನರ್ತಿಸುತ್ತ ತನ್ನ ಭಾವೀ ಪೀಳಿಗೆಯ ತಾಯಿಯಾಗಲು ವಿನಂತಿಸಿಕೊಳ್ಳುವದು. ಮೃದುಹೃದಯದ ಹೆಣ್ಣು-ಜೀವ ಈ ಪ್ರೇಮದ ಕರೆ ನಿರಾಕರಿಸದೆ ಸಾವಿರಾರು ಮೊಟ್ಟೆಗಳನ್ನು ನೀರಿನಲ್ಲಿ ತೂರಿ ತನ್ನ ಶರೀರದ ಭಾರವನ್ನು ಕಡಿಮೆಮಾಡಿಕೊಳ್ಳುತ್ತದೆ. ಈ ನಿಮಿಷಕ್ಕಾಗಿ ಕಾದ ಗಂಡು ತನ್ನ ವೀರ್ಯವನ್ನು ಅದೇ ಕಾಲಕ್ಕೆ ಹೊರಹೊಮ್ಮಿಸಿ ಆ ಮೊಟ್ಟೆಗಳನ್ನು ಫಲವತ್ತಾಗಿ ಮಾಡುತ್ತದೆ. ವಿಫಲವಾದ ತತ್ತಿಗಳು ನಾಶಹೊಂದಿದರೆ, ಫಲಕಾರಿಯಾದವುಗಳು ನೀರನ್ನು ಹೀರಿ ಹಿಗ್ಗಿ ಬೆಳವಣಿಗೆಯನ್ನು ಪಡೆಯುವವು. ಸ್ವಲ್ಪ ಸಮಯದಲ್ಲಿಯೇ ಮೊಟ್ಟೆಯೊಳಗಿನ ಮರಿಯು ಬೆಳವಣಿಗೆ ಪೂರ್ಣವಾಗಿ ಹೊರಬಂದು ಅದು ಸ್ವತಂತ್ರಜೀವನ ನಡೆಸುತ್ತದೆ. ಬೆಳವಣಿಗೆಯ ವಿವಿಧ ಹಂತಗಳಲ್ಲಿ ಮೊಟ್ಟೆ, ಮರಿ-ಮೀನುಗಳು ದಂಡೆಯ ಮೇಲೆ ಬಂದು, ಬಿದ್ದು ತೆರೆಯ ಹೊಡೆತಕ್ಕೆ ಸಿಕ್ಕು, ಇತರ ಪ್ರಾಣಿಗಳು ಭಕ್ಷಿಸುವದರಿಂದ, ಸಾವಿರಾರು ಮೊಟ್ಟೆಗಳಿಂದ ಪ್ರೌಢಾವಸ್ಥೆಗೆ ಮುಟ್ಟುವ ಮೀನುಗಳು ಕೈಬೆರಳಿನ ಮೇಲೆ ಎಣಿಸುವಷ್ಟು ಇರುತ್ತವೆ.

ಮಂಡೂಕ-ರಾಜನಿಗೆ ಮತ್ಸ್ಯಸಂಸಾರ ನೋಡಿ ಜಿಗುಪ್ಸೆ ಬಂದಿರಬೇಕು. ಅಂತೆಯೇ ಅವನು ತನ್ನ ಜೀವನದಲ್ಲಿ ಹೆಚ್ಚು ಆದರವನ್ನು ವಹಿಸಿದ. ಮಳೆಗಾಲದಲ್ಲಿ ಹೆಣ್ಣನ್ನು ಹಿಂಬಾಲಿಸಿ ಹೋಗದೆ ತನ್ನ ಗಂಡು ಧ್ವನಿಯಿಂದ, 'ನಾನಿನಗಾಗಿ, ನೀನನಗಾಗಿ...ಟೊರೊ' ಟೊರೆ ಎಂದು ಹಾಡಿದಾಗ ಹೆಣ್ಣು ನಾಚುತ್ತ, ಬಳಕುತ್ತ ಪುಟ್ಟ ಪುಟ್ಟ ಹೆಜ್ಜೆಯಿಡುತ್ತ ಬರಲು, ನೋಡುತ್ತ ಕುಳಿತ ಗಂಡು ಚಂಗನೆ ಒಂದೇ ಜಿಗಿತಕ್ಕೆ ಅದನ್ನು ಬಾಹುಗಳಲ್ಲಿ ಬಂಧಿಸಿಬಿಡುವದು. ತೃಪ್ತಿಗೊಂಡ ಹೆಣ್ಣು ಮೊಟ್ಟೆಗಳನ್ನು ನೀರ ಮೇಲೆ ತೇಲಿಬಿಡುವದು. ಹೆಣ್ಣಿನ ಬೆನ್ನೇರಿ ಅಪ್ಪಿದ ಗಂಡೂ ವೀರ್ಯಸ್ಖಲನ ಮಾಡಿ ಮೊಟ್ಟೆಗಳನ್ನು ಫಲಕಾರಿಯಾಗಿ ಮಾಡುವದು. ಮೊಟ್ಟೆಗಳು ತೇಲಿ ಇಲ್ಲಿ ಅಲ್ಲಿ ಹೋಗದಂತೆ ಅವನ್ನು ಸಿಂಬಳದಿಂದ ಒಟ್ಟುಗೂಡಿಸಿ ಜಲ-ಗಿಡಗಳಿಗೆ ಅಂಟಿಸುವದರಿಂದ ಅವುಗಳ ಸಾವು-ನೋವಿನ ಪ್ರಮಾಣ ಕಡಿಮೆ.

ಮೀನು, ಕಪ್ಪೆಗಳಿಗೆ ನೀರಿನಲ್ಲಿ ಸಿಗುವ ಅನುಕೂಲಗಳು ಭೂಚರ-ಪ್ರಾಣಿಗಳಾದ ಉಡ, ಓತಿಕಾಟಗಳಿಗೆ ಇಲ್ಲವಾದ್ದರಿಂದ ಅವು ಸಂತಾನೋತ್ಪತ್ತಿಯಲ್ಲಿ ಅಲಕ್ಷ್ಯಮಾಡುವಂತಿಲ್ಲ. ಮೀನು ಕಪ್ಪೆಗಳಂತೆ ಮೊಟ್ಟೆಗಳನ್ನು ಭೂಮಿಯ ಮೇಲೆ ಇಟ್ಟರೆ ಇಲ್ಲಿಯ ವರೆಗೆ ಅವು ಜೀವಿಸಿರುವ ಸಾಧ್ಯತೆ ಇರುತ್ತಿರಲಿಲ್ಲ. ಭೂಮಿಯ ಮೇಲಿನ, ಚಳಿ, ಉಷ್ಣತೆ, ಬಿಸಿಲುಗಳಿಂದ ಮೊಟ್ಟೆಗಳನ್ನು ಸುರಕ್ಷಿತವಾಗಿಡುವದಕ್ಕಾಗಿ ಅವಕ್ಕೆ ನುಣ್ಣಗಿನ ಕವಚದ ಅವಶ್ಯಕತೆ ಬಿದ್ದಿತು. ಆದರೆ ಈ ಕವಚದಿಂದ ಪುರುಷ-ಜನನ-ಜೀವಾಣು ಒಳಗೆ ಸೇರಲಾರದ್ದರಿಂದ ಮೊಟ್ಟೆ, ಹೆಣ್ಣು-ಜೀವಿಯ ಶರೀರದಲ್ಲೆ ಫಲಕಾರಿ ಮಾಡುವ ವ್ಯವಸ್ಥೆ ಬೆಳೆದುಕೊಂಡಿತು. ಹಲ್ಲಿ ಜಾತಿಯಲ್ಲಿ ಓಡಾಡಿ, ಚೀರಾಡಿ, ಕಚ್ಚಾಡಿ, ಪ್ರೇಮದಾಟ ಮುಗಿದ ಮೇಲೆ ಗುದದ್ವಾರದಿಂದ ವೀರ್ಯಪ್ರದಾನವಾಗುತ್ತದೆ. ಬೆಳೆಯುವ ಮರಿಗೆ ಆಹಾರವೂ ಮೊಟ್ಟೆಯಲ್ಲಿಯೇ ಸೇರಿರುವದರಿಂದ ಮೀನು ಕಪ್ಪೆಗಳಿಗಿಂತ ಈ ಜಾತಿಯವು ೧೦ರಿಂದ ೧೦೦ಪಟ್ಟು ದೊಡ್ಡದಾಗಿರುತ್ತವೆ. ಇಷ್ಟಾದರೂ ಮೊಟ್ಟೆಗಳನ್ನು ವೈರಿಗಳು ನಾಶಮಾಡುವ ಸಂಭವ ಹೆಚ್ಚಿರುವದರಿಂದ ಎಲ್ಲ ಮೊಟ್ಟೆಗಳನ್ನು ಒಟ್ಟಿಗೆ ಇಡದೆ, ಇಟ್ಟ ಮೊಟ್ಟೆಗಳನ್ನು ಕಣ್ಣಿಗೆ ಕಾಣದಂತೆ ಮಾಡುವ ಪ್ರವೃತ್ತಿಯು ಉಡ-ವರ್ಗದಲ್ಲ ಬೆಳೆದು ಬಂದಿದೆ.

ಜೀವಿಗಳ ವಿಕಾಸ ಮುನ್ನಡೆ ಮಾಡಲು ಸಾಧ್ಯವೇ ಹೊರತು ತಿರುಗಿ ಪೂರ್ವಜರಂತೆ ಆಗಲು ಸಾಧ್ಯವಿಲ್ಲ. ಆದ್ದರಿಂದ ನೀರಿನಲ್ಲಿ ಉದಯಿಸಿದ ಮೀನುಗಳು ಉತ್‌ಕ್ರಾಂತಿಯಲ್ಲಿ ಕಪ್ಪೆಯಾದಿ ಕೆಲ ಕಾಲಕ್ಕಾಗಿ ಭೂಮಿಯ ಮೇಲೆ ಬರುವಂತಾದರೂ, ಸಂತಾನೋತ್ಪತ್ತಿಗಾಗಿ ತಿರುಗಿ ನೀರಿಗೇ ಧಾವಿಸಬೇಕಾಯಿತು. ಅದೇ ನೀರನ್ನು ಸಂಪೂರ್ಣವಾಗಿ ತ್ಯಜಿಸಿದ ಉಡ-ವರ್ಗದ ಆಮೆಗಳು ಪುನಃ ನೀರನ್ನು ಸೇರಿದರೂ ಮೊಟ್ಟೆಯಿಡಲು ತಿರುಗಿ ಭೂಮಿಗೇ ಬರಬೇಕು. ಇದೇ ಗುಂಪಿಗೆ ಸೇರಿದ ಮೊಸಳೆ, ನೀರಿನಲ್ಲಿ ಜೀವಿಸಿದರೂ ದಂಡೆಗೆ ಬಂದೇ ಮೊಟ್ಟೆ ಇಡುವದು. ನೀರುಗೋಳಿ-ಬಾತುಗೋಳಿಗಳಂತಹ ಹಕ್ಕಿಗಳು ತಮ್ಮ ಜೀವನದ ಹೆಚ್ಚಿನಭಾಗವನ್ನು ನೀರಿನಲ್ಲಿಯೇ ಕಳೆದರೂ ಇದೇ ನೇಮವನ್ನು ಅನುಸರಿಸುತ್ತವೆ. ಸಸ್ತನ-ವರ್ಗದ ಜಲಜೀವಿಗಳಾದ ತಿಮಿಂಗಲು ಡಾಲಫಿನ್‌ಗಳಂತಹ ಪ್ರಾಣಿಗಳು ಮರಿಗಳಿಗೇ ಜನ್ಮಕೊಡುತ್ತವೆ.

ಕುಟುಂಬಯೋಜನೆಯಲ್ಲಿ ಮಾನವ, ಹಕ್ಕಿಗಳಿಂದ ಕಲಿಯಬೇಕಾದದ್ದು

ಅಪಾರವಾಗಿದೆ, ಸಂಸಾರ ಹೂಡಬೇಕೆಂದು ನಿರ್ಧರಿಸಿದ ಗಂಡುಹಕ್ಕಿ ತನ್ನ ಗೃಹ ನಿರ್ಮಾಣಕ್ಕೆ 'ಪ್ಲಾಟ್' ಒಂದನ್ನು ಹುಡುಕಲು ಪ್ರಾರಂಭಿಸುತ್ತದೆ. ಯಾವುದೊಂದು ಗಿಡ-ಮರದ ಮೇಲೆ ಕುಳಿತು 'ಇದು ನನ್ನ ಸ್ವಾಧೀನವಾಗಿದೆ' ಎಂದು ಕೂಗಿ ಸುತ್ತಲಿನ ತನ್ನ ಜಾತಿ-ಬಾಂಧವರಿಗೆ ತಿಳಿಸಿದಾಗ ಅವು ತಮ್ಮ ಹಕ್ಕನ್ನು ಸ್ಥಾಪಿಸಲು ಯತ್ನಿಸುತ್ತವೆ. ಕೊನೆಗೆ ಅವನದು ಸ್ವಲ್ಟ ಇವನದು ಸ್ವಲ್ಪ ಪಡೆದು ತರುಣಪಕ್ಕಿ ತನ್ನದೇ ಸ್ಥಳ ಮಾಡಿಕೊಳ್ಳುತ್ತದೆ. ನಂತರ ತನ್ನ ರೆಕ್ಕೆಗಳನ್ನು ಮೆರೆಯಿಸುತ್ತ ರಾಗವೆಳೆಯುತ್ತ ಹೆಣ್ಣು-ಹಕ್ಕಿಯನ್ನು ವಶೀಕರಿಸಲು ಯತ್ನಿಸುತ್ತದೆ. ಭಾವೀ ಪತ್ನಿಗೆ ಆಹಾರವನ್ನು ಇವನು ಪೂರೈಸಬೇಕು. ಪ್ರೇಮಭಿಕ್ಷೆ ಬೇಡಬೇಕು ಹೆಣ್ಣು ಕಾಮಾತುರವಾಗುವ ವರೆಗೆ ಕಾಯಬೇಕು. ನಂತರ ವಂಶಪರಂಪರಾಗತವಾಗಿ ಬಂದ ರೂಢಿಯಲ್ಲಿಯೇ ತನ್ನದೇ ಗುಡಿ ಕಟ್ಟಿಕೊಳ್ಳಬೇಕು. ಅವುಗಳ ಪ್ರೇಮದ ಆಟವೂ ಮಾನವನಿಗೆ ಪಾಠವಾಗಬೇಕು. ಒಂದಿಷ್ಟೂ ಬೇಸರಪಡದೆ ಒಂದರ ಸಹವಾಸದಲ್ಲಿ ಇನ್ನೊಂದು ಮೈಮರೆತಿರುತ್ತವೆ. ಅವಕ್ಕೆ ಕೆಲಸದ ಆತುರವಿಲ್ಲ. ಹಣದ ಅವಶ್ಯಕತೆಯಿಲ್ಲ. ಬೇಕಷ್ಟು ವಿಹರಿಸಿದ ನಂತರ ಚೊಚ್ಚಲ ಬಾಣಂತನಕ್ಕೆ ಹೆಣ್ಣು ಕಾಯುತ್ತಿರುವಾಗ ಗಂಡು ಅದರ ಯೋಗಕ್ಷೇಮವೆಲ್ಲ ನೋಡಿಕೊಳ್ಳುತ್ತದೆ. ಹಕ್ಕಿಗಳು ತಮ್ಮ ಮೊಟ್ಟೆಗಳನ್ನು ಒಮ್ಮೆಲೆ ಇಡದೆ ಕಾಲಾವಧಿಯ ನಂತರ ಇಡುತ್ತ ಹೋಗುವವು. ಅವುಗಳಿಂದ ಹೆಚ್ಚಿನ ಮರಿಗಳು ಬದುಕಿಕೊಂಡರೆ ಮೊಟ್ಟೆ ಇಡುವದನ್ನು ಸ್ಥಗಿತಗೊಳಿಸುವವು. ಕೋಳಿಯು ಮೊಟ್ಟೆಗಳನ್ನು ದಿನವೂ ತೆಗೆಯದೆ ತಾಯಿಯ ಹತ್ತಿರ ಬಿಟ್ಟರೆ ಅದು ೮-೧೦ ಮೊಟ್ಟೆಗಳನ್ನು ಇಟ್ಟು ನಂತರ ನಿಲ್ಲಿಸುತ್ತದೆ. ಅದೇ ಅವನ್ನು ತೆಗೆಯುತ್ತ ಹೋದರೆ ವರ್ಷದಲ್ಲಿ ೩೦೦ ತತ್ತಿಗಳನ್ನಿಟ್ಟ ಕುಕ್ಕುಟ-ಮಾತೆಯರಿದ್ದಾರೆ. ಆದರೆ ಪಕ್ಷಿಗಳಿಗೆ ಎಷ್ಟು ಮರಿಗಳ ಯೋಗಕ್ಷೇಮ ತಮ್ಮಿಂದ ನೋಡಿಕೊಳ್ಳಲು ಸಾಧ್ಯ ಎಂಬ ಅರಿವು ಇದೆ ಎಂದ ಹಾಗಾಯಿತು. ಹೆಣ್ಣು ತತ್ತಿಗಳಿಗೆ ಕಾವು ಕೊಡುವಾಗ ಗಂಡು ಆಹಾರ ಪೂರೈಸಿ ಕಾವಲು ನಿಲ್ಲುವದು. ಹಕ್ಕಿಗಳ ಮೊಟ್ಟೆಯಲ್ಲಿ ಸಾಕಷ್ಟು ಆಹಾರದ ದಾಸ್ತಾನು ಇರುವದರಿಂದ ಮರಿಯ ಬೆಳವಣಿಗೆ ಸುಸೂತ್ರವಾಗಿ ನಡೆಯುವದು, ನಂತರ ತಮ್ಮ ಕೊಕ್ಕಿನಿಂದ ಕವಚವನ್ನು ಒಡೆದು ಅವು ಹೊರಗೆ ಬರುವವು. ಇಂತಹ ಮರಿಗಳು ಆರ್ದ್ರತೆಯಿಂದ ಆವರಿಸಿಕೊಂಡು ತಣ್ಣಗೆ ಇರುವದರಿಂದ ತಾಯಿ ಅವನ್ನು ತನ್ನ ಎದೆಗವಚಿಕೊಂಡು ಒಣಗಿಸಿ ಬೆಚ್ಚಗೆ ಇಡುತ್ತದೆ. ಕೋಳಿಯಂತಹ

ಹಕ್ಕಿಯ ಮರಿಗಳು ತೀರ ಅಸಹಾಯವಾಗಿರುವದರಿಂದ ಅವುಗಳ ಪಾಲನ ಪೋಷಣ, ಪಾಲಕರ ಮೇಲೆಯೆ ಇರುವದು. ಬೆಳೆಯುತ್ತಿರುವ ಮರಿಗಳಿಗೆ ಹಸಿವು ವಿಪರೀತ. ಪಾಲಕಪಕ್ಕಿಗಳು ಒಂದಿಷ್ಟೂ ಬೇಸರಿಸದೆ ತಮ್ಮ ಮರಿಗಳ ಹಸಿವು ಹಿಂಗುವ ತನಕ ಆಹಾರದ ಪೂರೈಕೆ ಮಾಡುತ್ತವೆ. ದಿನ ಒಂದಕ್ಕೆ ೨೦೦-೩೦೦ ಸಲ ಹಾರಿ ಬಂದು ತಂದ ಆಹಾರವನ್ನು ಮರಿಗಳಿಗೆ ತಿನ್ನಿಸುವ ಹಕ್ಕಿಗಳಿವೆ. ಕೆಲವು ಹಕ್ಕಿಗಳು ಆಹಾರವನ್ನು ಅರೆ ಜೀರ್ಣಿಸಿ ಗುಟುಕಿನ ರೂಪದಲ್ಲಿ ಮರಿಗಳಿಗೆ ಕೊಡುವವು. ಹದ್ದಿನಂತಹ ದೊಡ್ಡ ಹಕ್ಕಿಗಳು ಪುಟ್ಟ ಪ್ರಾಣಿಗಳನ್ನೇ ಮರಿಗಳಿಗೆ ಆಹಾರವಾಗಿ ತಂದು ಕೊಡುತ್ತವೆಯಾದ್ದರಿಂದ ದಿನದಲ್ಲಿ ಎರಡು-ಮೂರು ಬಾರಿ ಮಾತ್ರ ಆಹಾರ ಪೂರೈಸುವವು.

ಮೊಟ್ಟೆ ಮತ್ತು ಕಾವು ಕೊಡುವ ಹಕ್ಕಿಗಳನ್ನು ನೋಡಿದಾಗ ಬಾಯಲ್ಲಿ ನೀರು ಬಿಡುವ ಎಷ್ಟೋ ವೈರಿಗಳು ಇರುತ್ತವೆ. ಆದ್ದರಿಂದ ಅವುಗಳ ಸಂರಕ್ಷಣೆ ಅತ್ಯವಶ್ಯ. ಆದಕ್ಕಾಗಿ ಹೆಚ್ಚಿನ ಹಕ್ಕಿಗಳು ತಮ್ಮ ಗೂಡುಗಳನ್ನು ಗುಪ್ತಸ್ಥಳದಲ್ಲಿ ಕಟ್ಟುತ್ತವೆ. ಕೆಲವು ಪಕ್ಷಿಗಳು ವೈರಿಗಳನ್ನು ಮೋಸಗೊಳಿಸುವ ಸಲುವಾಗಿ ಬೇರೆ ಒಂದು ತಾಣದಲ್ಲಿ ಕಾವು ಕೊಡುತ್ತಿರುವಂತೆ ನಟಿಸುತ್ತವೆ. ಕೆಲವು, ವೈರಿಯಿಂದ ಮರಿಗಳನ್ನು ಮರೆಯಿಸಲು ತಾವು ಗಾಯಾಳುಗಳಂತೆ ಬಿದ್ದಿರುತ್ತವೆ. ಗೂಗೆಯಂತಹ ಹಕ್ಕಿಗಳು ರೆಕ್ಕೆಗಳನ್ನು ಬಿಚ್ಚಿ ಇದ್ದುದಕ್ಕಿಂತ ಹೆಚ್ಚು ಭಯಾನಕ ಅನಿಸುವಂತೆ ಮಾಡುತ್ತವೆ.

ಬೆಳೆಯುತ್ತಿರುವ ಮರಿಗಳಿಗೆ ತಾಯಿ ಹಾರಲು ಕಲಿಸುತ್ತದೆ. ಗುಬ್ಬಚ್ಚಿಗಳು ಒಂದೊಂದೇ ಮರಿಗೆ ವಿದ್ಯಾಭ್ಯಾಸ ಕಲಿಸಿದರೆ ಕೋಳಿಗಳು ಸಂತಾನಸಮೂಹವನ್ನು ಕೂಡಿಸಿ ಶಿಕ್ಷಣ ಕೊಡುತ್ತವೆ. ಕಡಲುತೀರದಲ್ಲಿ ವಾಸಿಸುವ ಪೆಂಗ್ವಿನ್ ಹಕ್ಕಿ ಶಿಶುವಿಹಾರವನ್ನೆ ಪ್ರಾರಂಭಿಸಿ ಅನೇಕ ಎಳೆಪಕ್ಕಿಗಳಿಗೆ ಶಿಕ್ಷಣ ಕೊಡುತ್ತದೆ. ಪೆಂಗ್ವಿನಕ್ಕೆ ಮರಿಗಳೆಂದರೆ ತುಂಬ ಅಕ್ಕರೆ. ಅನಾಥ ಮರಿಗಳನ್ನು ಕಂಡಾಗ ಬೆಳೆಸುವದಕ್ಕಾಗಿ ತಮ್ಮ ತಮ್ಮಲ್ಲಿ ಕಾದಾಡುವದೂ ಇದೆ. ಮಾನವರಿಗೆ ಇಂಥ ಬುದ್ಧಿ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಸಸ್ತನ-ಪ್ರಾಣಿಗಳು ಬೆಳೆಯುವ ಮರಿಗಳಿಗೆ ಸಂಪೂರ್ಣ ಸಂರಕ್ಷಣೆ ಕೊಡುವ ಸಲುವಾಗಿ ಫಲಕಾರಿಯಾದ ಮೊಟ್ಟೆಯನ್ನು ಗರ್ಭಕೋಶದಲ್ಲಿಯೆ ಇಟ್ಟುಕೊಂಡು ಪಾಲನ- ಪೋಷಣ ಮಾಡುತ್ತವೆ. ಸಂಪೂರ್ಣ ಬೆಳವಣಿಗೆಯಾಗುವ ಮೊದಲೆ

ಜನ್ಮತಾಳುವ ಕಾಂಗರೂ-ಮರಿಯನ್ನು ಕೂಡ ತಾಯಿ ತನ್ನ ಚೀಲದಲ್ಲಿ ಇಟ್ಟು ಸಂರಕ್ಷಿಸುತ್ತದೆ, ಜಗತ್ತಿನಲ್ಲಿ ಬಂದ ನಂತರ ಮರಿಗಳಿಗೆ ತರಬೇತಿ ನೀಡುವದು, ಮರಿಯ ಸಂರಕ್ಷಣೆ ತಮ್ಮ ಕರ್ತವ್ಯವೆಂದು ಪಾಲಕವರ್ಗ ತಿಳಿದು ಪಾಲಿಸುತ್ತದೆ. ಮರಿ-ಆನೆಗೆ ಸ್ವಲ್ಪವಾದರೂ ಗಂಡಾಂತರ ಬರುವ ಸೂಚನೆ ಕಂಡರೆ ತಾಯಆನೆ ಜೀವದ ಹಂಗುದೊರೆದು ಮರಿಯನ್ನು ಸಂರಕ್ಷಿಸುತ್ತದೆ. ಮಕ್ಕಳ ಪಾಲನ-ಪೋಷಣೆಯಲ್ಲಿ ಮಾನವ ಉಳಿದೆಲ್ಲ ಪ್ರಾಣಿಗಳನ್ನು ಮೀರಿಸುತ್ತಾನೆ. ಕೆಲವರಿಗಂತೂ ಸಾಯುವ ತನಕ ತಂದೆ-ತಾಯಿಯ ಪೋಷಣೆಯ ರೂಢಿಯಾದಿಬಿಟ್ಟಿರುತ್ತದೆ. ಈ ವರ್ಗದಲ್ಲಿ ಪ್ರತಿಸಲ ೧ರಿಂದ ೧೦ ಮರಿಗಳಿಗೆ ಜನ್ಮಕೊಡುವ ಪ್ರಾಣಿಗಳು ಸಮಾವೇಶವಾಗುತ್ತವೆ.

ಪ್ರಾಣಿ-ಜಗತ್ತಿನ ಕುಟುಂಬಯೋಜನೆ ನೋಡಿದರೆ ಅಲಕ್ಷ್ಯದ ಪಾಲಕರಿಗೆ ಅತಿ ಹೆಚ್ಚು ಮರಿಗಳಾಗಿ ಅತಿ ಕಡಿಮೆ ಮಕ್ಕಳು ಜೀವನದ ವಸಂತಕಾಲ ನೋಡಲು ಬದುಕುವವು. ಪರಪುಷ್ಟ ಪ್ರಾಣಿಗಳಲ್ಲಿ ಸಂತತಿನಿರ್ಮಾಣವಾಗುವಷ್ಟು ಮತ್ಸ್ಯ ವರ್ಗದಲ್ಲಾಗುವದಿಲ್ಲ. ಮೀನಿನಷ್ಟು ಕಪ್ಪೆಗಳಿರುವದಿಲ್ಲ. ಭೂಚರ ಉಡವರ್ಗದಲ್ಲಿ ಇನ್ನೂ ಕಡಿಮೆ. ಹಕ್ಕಿಗಳಂತೂ ತಮ್ಮ ಕುಟುಂಬದ ಪರಿಮಿತಿಯನ್ನು ತಾವೇ ನಿರ್ಧರಿಸುತ್ತವೆ. ಹಕ್ಕಿಗಳಿಗಿಂತ ಹೆಚ್ಚಿನ ಸಂರಕ್ಷಣೆ ಕೊಡಬಲ್ಲ ಸಸ್ತನಿಗಳಲ್ಲಿ ಇನ್ನೂ ಕಡಿಮೆ ಸಂತಾನವಾಗುತ್ತದೆ. ಸಸ್ತನಿ-ವರ್ಗಗಳಿಗೆ ನಿಯತಕಾಲಿಕವಾದ ಮಿಲನ (ಸಂಭೋಗ)ದ ನಿಯಮವನ್ನು ಮಾನವ ಮುರಿದಿದ್ದಾನೆ. ಆದ್ದರಿಂದ ಧೀಮಂತವೆಂದು ಅನಿಸಿಕೊಳ್ಳುವ ಅವನು ಉಳಿದೆಲ್ಲ ಪ್ರಾಣಿಗಳಿಗಿಂತ ಕುಟುಂಬಯೋಜನೆಗೆ ಹೆಚ್ಚಿನ ಮಹತ್ವ ಕೊಡಬೇಕು. ತನಗೆ ದೊರಕದ ಎಷ್ಟೋ ಸೌಲಭ್ಯಗಳು ಸಿಗುವಂತಾಗಬೇಕು, ಅದನ್ನು ಪೂರೈಸಬೇಕಾದರೆ ತಾನು ತನ್ನ ಕುಟುಂಬವನ್ನು ಯೋಜಿಸಿ ಅದರಂತೆ ನಡೆಯಬೇಕು ಎಂದು ಪ್ರತಿಯೊಬ್ಬ ಮಾನವನೂ ಸಂಕಲ್ಪ ಮಾಡಿ ಅದರಂತೆ ನಡೆದರೆ ಭೂಮಿ ಸ್ವರ್ಗವಾದೀತು.

ಹನ್ನೊಂದು : ಗಂಡು-ಹೆಣ್ಣು

ನಮ್ಮದು ಜಾತ್ಯತೀತ ರಾಷ್ಟ್ರವೆಂದು ಜಗತ್ತಿಗೆ ಸಾರಿಹೇಳುವದಕ್ಕಾಗಿ ಅಲ್ಪಸಂಖ್ಯಾತವರ್ಗದ ಮುಖಂಡನನ್ನು ರಾಷ್ಟ್ರಪತಿಯಾಗಿ ಮಾಡಬೇಕಾಗುತ್ತದೆ. ಹರಿಜನರಿಗೆ ಮಂತ್ರಿಸ್ಥಾನ ಕೊಡಬೇಕಾಗಿ ಬಂದಂತೆ, ಗಂಡು-ಹೆಣ್ಣು ಸಮಾನರು ಎಂದು ಸಿದ್ಧಮಾಡುವ ಸಲುವಾಗಿ ಸ್ತ್ರೀಯಳನ್ನು ಆಡಳಿತಾಧಿಕಾರಿಯನ್ನಾಗಿ ಮಾಡಲಾಗುತ್ತಿದೆ; ಸಮಾನ-ಹಕ್ಕುಗಳನ್ನು ದಯಪಾಲಿಸಲಾಗಿದೆ. ಆದರೆ ಹೀಗೆ ಮಾಡುವದರಿಂದ ನಮ್ಮ ಹೃದಯದಲ್ಲಿ ಜಾತೀಯತೆ ಆಳವಾಗಿ ಬೇರುಬಿಟ್ಟಿದೆ. ಹೆಣ್ಣು ಅಬಲೆಯಾದ್ದರಿಂದ ಆವಳಿಗೆ ಸಹಾಯ ಬೇಕು ಎಂದು ನಾವು ಸಾರಿದಂತೆ ಆಗಲಿಲ್ಲವೇ? ಪರಪುಷ್ಟ ಪ್ರಾಣಿಗೆ ಸ್ವತಂತ್ರ ಜೀವನ ನಡೆಸಲು ಸಹಾಯಮಾಡಲು ಅದಕ್ಕೆ ಬೇಕಾಗುವ ಆಹಾರ-ಸಂರಕ್ಷಣ ಪೂರೈಸಿದರೆ ಅದು ಎಂದಾದರೂ ಸ್ವತಂತ್ರ ಪ್ರಾಣಿಯಾಗಲು ಸಾಧ್ಯವೆ? ಅದರಂತೆ ಈ ವಿಧಾನಗಳಿಂದ ಜಾತ್ಯತೀತ ರಾಷ್ಟ್ರ ಕಟ್ಟಲು ಅಸಾಧ್ಯವಾದಂತೆ, ಹೆಣ್ಣನ್ನು ಗಂಡಿನ ಸಮಾನ ಮಾಡಲು ಈ ಕೃತ್ರಿಮ ಉಪಾಯಗಳು ಸಹಾಯ ಮಾಡಲಾರವು. ಇವೆಲ್ಲ ಹೃದಯವಿಕಾಸದಿಂದ

ಆಗಬೇಕಾದವೇ ಹೊರತು ಒತ್ತು-ಗುಂಡಿ ಒತ್ತುವದರಿಂದ ಆಗುವದಿಲ್ಲ.

ಹೆಣ್ಣು, ಗಂಡು ಎಂದರೆ ಸೂರ್ಯ-ಚಂದ್ರರಿದ್ದಂತೆ, ಒಂದೇ ರಥದ ಎರಡು ಗಾಲಿಗಳಿದ್ದಂತೆ ಎಂದು ಪೂರ್ವಜರು ವರ್ಣಿಸಿದ್ದಾರೆ. ಶಾರೀರಿಕ, ಮಾನಸಿಕ ಮತ್ತು ಕೌಟುಂಬಿಕ ರೀತಿಗಳನ್ನು ಆಳವಾಗಿ ಅಭ್ಯಸಿಸಿದರೆ ಅವರಿಬ್ಬರೂ ಒಬ್ಬರಿಗೆ ಒಬ್ಬರು ಪೂರಕವಾಗಿ, ಜೀವನದ ಪೂರ್ತಿ ಘಟಕ ಅನಿಸಿಕೊಳ್ಳುತ್ತಾರೆ ಎಂಬುದು ಗೊತ್ತಾಗುವದು. ಒಬ್ಬರು ದಿಟ್ಟತನ, ಶೌರ್ಯ, ಕ್ರೌರ್ಯಕ್ಕೆ ಹೆಸರಾದರೆ ಇನ್ನೊಬ್ಬರು ಸಂಯಮ, ಪ್ರೇಮಕ್ಕಾಗಿ ಹೆಸರುವಾಸಿ. ಒಂದಿಲ್ಲದೆ ಇನ್ನೊಂದು ಅಪೂರ್ಣವಾದರೂ ಗಂಡು ಹೆಣ್ಣಿನ ಸಮಾನತೆಯು ಕಾಳಗ ಶತಮಾನಗಳಿಂದ ನಡೆದೇಬಂದಿದೆ. ಇಂದು ಲಿಂಗ-ಸಮಾನತೆ ಸಾಧಿಸುವ ಹವ್ಯಾಸದಲ್ಲಿ ವೇಷಭೂಷಣ ಗಳಿಂದ ಗಂಡು ಹೆಣ್ಣನ್ನು ಹೊರನೋಟಕ್ಕೆ ಬೇರ್ಪಡಿಸುವದು ದುಸ್ತರದ ಮಾತಾಗಿದೆ. ಇಷ್ಟಾದರೂ ಅವರಲ್ಲಿರುವ ಶಾರೀರಿಕ ವ್ಯತ್ಯಾಸ ಮಾಯವಾಗಲು ಹೇಗೆ ಸಾಧ್ಯ? ಎಂತಹ ವೇಷ ಧರಿಸಿದರೂ ತೀಕ್ಷ್ಣ ನೋಟ ಇರುವವರಿಗೆ ಹೊರ ನೋಟದಿಂದಲೂ ಸ್ತ್ರೀ-ಪುರುಷರನ್ನು ಪ್ರತ್ಯೇಕಿಸಲು ಸಾಧ್ಯವಿದೆ. ವ್ಯಾಯಾಮ ಮಾಡಿದ ಗಂಡಸಿಗೂ ವಕ್ಷಭಾಗ ಉಬ್ಬಿರಬಹುದು. ಅದರಂತೆ ಪುರುಷರ ಎದೆ ಯನ್ನು ಪಡೆದ ಸ್ತ್ರೀಯರೂ ಇರುತ್ತಾರೆ ಎಂದು ಇಟ್ಟುಕೊಂಡರೂ ಸ್ತ್ರೀಯ ನಿಲುವೇ ಪುರುಷರಿಗಿಂತ ತೀರ ಭಿನ್ನವಾಗಿರುತ್ತದೆ. ಪುರುಷರಲ್ಲಿ ಶರೀರ, ಕೈ-ಕಾಲು ಗಳು, ಕಕ್ಷಗಳು ಸಮಾಂತರವಾಗಿದ್ದರೆ ಸ್ತ್ರೀಯ ನಡುಭಾಗ ಹೆಚ್ಚಾಗಿ ಹಿಗ್ಗಿರು ವಂತಿದ್ದು ಕಾಲುಗಳು ಬಾಹ್ಯವಿಶಾಲಕೋನ ಮಾಡಿದರೆ ಕೈಗಳು ಶರೀರದೊಡನೆ ವಿಶಾಲಕೋನ ಮಾಡಿರುತ್ತವೆ. ಅಸ್ಥಿಪಂಜರಗಳಲ್ಲೂ ಸ್ತ್ರೀ-ಪುರುಷಭೇದ ಕಲ್ಪಿಸ ಬಹುದು. ಸ್ತ್ರೀಯರಲ್ಲಿ ಎದೆಗುಂಡಿ ಮತ್ತು ಸೊಂಟದೆಲವುಗಳು ಶಾಶ್ವತವಾಗಿ ಕೂಡಿರದೆ, ಪ್ರಸೂತಿಕಾಲದಲ್ಲಿ ಹಿಗ್ಗಲು ಸಹಾಯವಾಗುವಂತೆ ಮೃದುವಾದ ಸ್ನಾಯುಗಳಿಂದ ಜೋಡಿಸಲು ಅನುಕೂಲವಾಗಿರುತ್ತವೆ.

ವೈಜ್ಞಾನಿಕವಾಗಿ ನೋಡಿದರೆ ಸ್ತ್ರೀ ಪುರುಷನಾಗಿದ್ದಾನೆ, ಪುರುಷನು ಸ್ತ್ರೀ ಯಾಗಿದ್ದಾಳೆ. ಇಲ್ಲದಿದ್ದರೆ ಪುರುಷರಲ್ಲಿ ಕೆಲಸಕ್ಕೆ ಬಾರದ ಸ್ತನಭಾಗ ಇರುವ ಅವಶ್ಯಕತೆ ಏನಿತ್ತು? ಅದರಂತೆ ಸ್ತ್ರೀಯರಲ್ಲೂ ಪುರುಷಲಿಂಗವನ್ನು ಹೋಲುವ 'ಕ್ಲಾಯಟೆರಸ್', ಜನನೇಂದ್ರಿಯದಲ್ಲೇ ಇರುವದೇಕೆ? ವೃತ್ತಪತ್ರಿಕೆಗಳಲ್ಲಿ ಆಗಾಗ ಹೆಣ್ಣು ಗಂಡಾದದ್ದು, ಗಂಡು ಹೆಣ್ಣಾದದ್ದು ಓದುತ್ತಿರುತ್ತೇವೆ. ಅಂತಹ ಸಂದರ್ಭ

ದಲ್ಲಿ ನಿರುಪಯುಕ್ತವಾದ ಈ ಅವಯುವಗಳೇ ಕಾರ್ಯಗತವಾಗುತ್ತವೆ, ಇಂದು ಯಶಸ್ವಿ ಆಪರೇಶನ್‌ಗಳಿಂದ ಲಿಂಗಾಂತರ ಮಾಡಲು ಸಾಧ್ಯವಿದೆ, ಮಾಡಿಕೊಂಡೂ ಇದ್ದಾರೆ. ಅಂದಮೇಲೆ ಒಂದನ್ನು ಇನ್ನೊಂದಕ್ಕೆ ಪರಿವರ್ತಿಸುವಷ್ಟು ಸಾಮ್ಯ ಆವರಿಬ್ಬರಲ್ಲಿಯೂ ಇದೆ ಎಂದಾಯಿತಲ್ಲವೇ? ಪ್ರತಿವ್ಯಕ್ತಿಯಲ್ಲಿಯೂ ಸ್ತ್ರೀ-ಪುರುಷಾಂಶಗಳೆರಡೂ ಇದ್ದೇ ಇರುತ್ತವೆ. ಸ್ತ್ರೀ ಅಂಶ ಅಧಿಕವಾದಿರುವವಳಿಗೆ ಸ್ತ್ರೀ ಎಂದೂ ಪುರುಷಾಂಶ ಹೆಚ್ಚಿರುವವರಿಗೆ ಪುರುಷರೆಂದೂ ಕರೆಯುವದು ವಾಡಿಕೆಯಿಂದ ಬಂದಿದೆ. ಎಡಮ್ಸನ ತತ್ವದ ಪ್ರಕಾರ ಪುರುಶಾಂಶ/ಸ್ತ್ರೀ ಅಂಶವು ಒಂದು ಇದ್ದರೆ ವ್ಯಕ್ತಿ ಪುರುಷನೆಂದೂ ಅದು ೦.೫ ಇದ್ದರೆ ಹೆಣ್ಣೆಂದು ಪರಿಗಣಿಸಲ್ಪಡುತ್ತದ. ಆದರೆ ಜಗತ್ತಿನಲ್ಲಿ ಬರೇ ೧ ಮತ್ತು ೦.೫ ಗಳಿರುವ ವ್ಯಕ್ತಿಗಳಿಂದೇ ೦.೬ ೦.೭ ೦.೮.೦.೯ ಮತ್ತು ಅವುಗಳ ಮಧ್ಯವರ್ತಿ ವ್ಯಕ್ತಿಗಳೂ ಇದ್ದಾರೆ. ಆದರಂತೆ ೦ ೫ ಕಡಿಮೆಯ ೧.೦ಕ್ಕಿಂತ ಹೆಚ್ಚು ಇರುವವರೂ ಇದ್ದಾರೆ. ಅಂತೆಯೇ ನಮಗೆ ಅತಿ ಕರುಣಾಳು ಹೆಣ್ಣುಗಳು ಸಿಗುವಂತೆ ಅತಿ ಕ್ರೂರಿ ಗಂಡಸರೂ ಕಂಡು ಬರುತ್ತಾರೆ. ೦.೭ಕ್ಕಿಂತ ಹೆಚ್ಚು ಅಳತೆ ಇದ್ದ ಹೆಣ್ಣು 'ಗಂಡುಬೀರಿ' ಎನಿಸಿಕೊಳ್ಳುತ್ತಾಳೆ. ಅದರಂತೆ ೦.೮ಕ್ಕಿಂತ ಕಡಿಮೆಯುವನು ಹೆಣ್ಣಾ ಅನಿಸಿಕೊಳ್ಳುತ್ತಾನೆ. ಗಂಡು ಹೆಣ್ಣಿನ ಪ್ರಮಾಣ ೦.೭೫ ಆದಾಗ ವ್ಯಕ್ತಿ 'ಅರೆಗಂಡ' ಅನಿಸಿಕೊಳ್ಳುತ್ತಾನೆ. (ತ್ತದೆ). ಇಂತಹ ವ್ಯಕ್ತಿಗಳಲ್ಲಿ ಸ್ತ್ರೀಜನನೇಂದ್ರಿಯಗಳು ಇದ್ದರೆ ಸ್ತನಗಳು ಬೆಳೆದಿರುವದಿಲ್ಲ. ಗಡ್ಡ ಬಂದಿರುತ್ತದೆ. ಅದೇ ಪುರುಷ ಜನನೇಂದ್ರಿಯಗಳು ಇದ್ದವರಿಗೆ ಎದೆ ಉಬ್ಬಿರುತ್ತದೆ. ಗಡ್ಡ ಬಂದಿರುವದಿಲ್ಲ. ಹೀಗಿದ್ದ ವ್ಯಕ್ತಿಗಳು ನಪುಂಸಕರು. ಶಿಶುವಿನ ಬೆಳವಣಿಗೆ ಅವಲೋಕಿಸಿದಾಗ ಸುರುವಿನಲ್ಲಿ ಗಂಡು ಹೆಣ್ಣು ಭೇದವಿಲ್ಲದೇ ಇಬ್ಬರ ಜನನೇಂದ್ರಿಯಗಳು ಒಂದೇ ರೀತಿಯಾಗಿ ಬೆಳೆಯಲು ಪ್ರಾರಂಭವಾಗುತ್ತವ. ಆದರೆ ಕೆಲಕಾಲದ ನಂತರ ಮಗು ಪಾಲಕರಿಂದ 'ಅಅ' ಕ್ರೊಮೊರ್ಷೋಮ ಪಡೆದಿದ್ದರೆ ಸ್ತ್ರೀ ಜನನೇದ್ರಿಯವು ತೀವ್ರವಾಗಿ ಬೆಳೆಯಲಾರಂಭಿಸಿ ಪುರುಷಜನನೇಂದ್ರಿಯದ ಅಂಶ ಕುಂಠಿತವಾಗುತ್ತದೆ. ಅದೇ ಮಗು 'ಅಬ' ಕ್ರೊಮೊರ್ಷೋಮ ಪಡೆದರೆ ವಿರುದ್ಧ ರೀತಿಯ ಬೆಳವಣಿಗೆ ಪ್ರಾರಂಭವಾಗುತ್ತದೆ. ಹುಟ್ಟಿದ ಮಗು ಗಂಡೋ ಹೆಣ್ಣೋ ಎಂದು ದೇಹರಚನೆಯಿಂದ ನಾವು ಹೇಳಬಹುದಾದರೂ ಲೈಂಗಿಕವಾಗಿ ಅದು ನಪುಂಸಕವಾಗಿರುತ್ತದೆ. ಮಗು ೧೨-೧೪ ವರ್ಷ ಬೆಳೆದ ನಂತರವೇ ಅದರ ಜನನೇಂದ್ರಿಯಗಳು ಕಾರ್ಯಾರಂಭ

ಮಾಡುವವು. ಈ ಅಂಗಗಳು 'ಹಾರ್ಮೋನು' ರಸಾಯನ ಸಿದ್ಧ ಮಾಡಿ ರಕ್ತಕ್ಕೆ ಒಪ್ಪಿಸುವದರಿಂದ ಅದರ ಪ್ರಭಾವದಿಂದಾಗಿ ಸ್ತ್ರೀಯರಲ್ಲಿ ನಡು ಹಿಗ್ಗುವದು, ಸ್ತನ ಉಬ್ಬಿಕೊಳ್ಳುವದು. ಪುರುಷರಲ್ಲಿ ಗಡ್ಡ ಮೀಸೆಗಳು ಬರುವವು. ಧ್ವನಿ ಬದಲಾಗುವದು. ವಿರುದ್ಧ ಲಿಂಗದವರಲ್ಲಿ ಆಕರ್ಷಣೆಗೆ ಪ್ರಾರಂಭವಾಗುವದು. ಸ್ತ್ರೀ-ಹಾರ್ಮೋನುಗಳನ್ನು ಪುರುಷರಿಗೆ ಕೊಟ್ಟಾಗ ತಾತ್ಕಾಲಿಕವಾಗಿ ಅವನ ಎದೆಯೂ ಉಬ್ಬಿಕೊಳ್ಳುವದು !

ಮಾನವರಲ್ಲಿ ಹೆಣ್ಣು, ಹೊನ್ನು, ಮಣ್ಣಿಗಾಗಿ ವೈಮನಸ್ಸು, ಕಲಹ, ಕಾದಾಟ, ಯುದ್ಧಗಳು ಸದಾಕಾಲ ನಡೆದೇ ಇದ್ದರೆ ಅಮೀಬದಂತಹ ಕೆಳವರ್ಗದ ಪ್ರಾಣಿಗಳಲ್ಲಿ ಈ ಯಾವ ಕಾರಣಕ್ಕಾಗಿಯೂ ಕಲಹವಾಗುವದಿಲ್ಲ. ಅವಕ್ಕೆ ಜನನೇಂದ್ರಿಯ ಎಂದು ಬೇರೆಯೇ ಅವಯವ ಒಂದು ಇಲ್ಲದ್ದರಿಂದ ಒಂದೇ ಪ್ರಾಣಿ ಪತಿ-ಪತ್ನಿಯಾಗಿರುತ್ತದೆ. ಎರೆಹುಳುವಿನಂತಹ ಪ್ರಾಣಿಗಳಲ್ಲಿ ಗಂಡು-ಹೆಣ್ಣು ಜನನೇಂದ್ರಿಯಗಳು ಬೇರೆ ಬೇರೆ ಇದ್ದರೂ ಅವು ಒಂದೇ ಪ್ರಾಣಿಯಲ್ಲಿರುತ್ತವೆ. ಎರೆಹುಳುಗಳು ಸಂಯೋಗಕಾಲದಲ್ಲಿ ವೀರ್ಯವನ್ನು ಕೊಟ್ಟು ಕೊಂಡುಕೊಳ್ಳುತ್ತವೆ. ಆದ್ದರಿಂದ ಅವುಗಳ ಮಕ್ಕಳಿಗೆ ಒಂದಕ್ಕೆ ತಾಯಿಯಾದದ್ದೇ ಇನ್ನೊಂದಕ್ಕೆ ತಂದೆಯಾಗಿರುತ್ತದೆ. ಕೆಲ ಪರಪುಷ್ಟ ಪ್ರಾಣಿಗಳಲ್ಲಿ ಇಂತಹದೇ ಏರ್ಪಾಡು ಇದ್ದರೂ ಸ್ವಜಾತಿಯ ಇನ್ನೊಂದು ಪರಪುಷ್ಟ ಪ್ರಾಣಿ ಸುಲಭವಾಗಿ ಸಿಗುವದಿಲ್ಲವಾದಾಗ ತನ್ನ ವೀರ್ಯ ತಾನೇ ಬಳಸಿ ಸಂತಾನೋತ್ಪತ್ತಿಯಲ್ಲಿ ತೊಡಗಿರುತ್ತದೆ. ಮುಂದಿನ ಪೀಳಿಗೆಗೆ ತಾಯಿಯೇ ತಂದೆಯೂ ಆಗಿರುತ್ತದೆ. ಕೆಲ ಕೀಟಗಳಲ್ಲಿ ಇದಕ್ಕೂ ರಂಜಕವಾದ ಸಂತಾನೋತ್ಪತ್ತಿ ನಡೆದಿರುತ್ತದೆ. ಅವುಗಳಲ್ಲಿ ಗಂಡು-ಹೆಣ್ಣು ಜನನೇಂದ್ರಿಯಗಳು ಬೇರೆ ಬೇರೆ ವ್ಯಕ್ತಿಗಳಲ್ಲಿ ಇದ್ದರೂ ಕೆಲ ಕೀಟಗಳಲ್ಲಿ ಗಂಡೇ ಇಲ್ಲದ್ದರಿಂದ ಹೆಣ್ಣೊಂದೇ ಸಂತಾನನಿರ್ಮಾಣಕಾರ್ಯದಲ್ಲಿ ತೊಡಗಿರುತ್ತದೆ. ಇವುಗಳು ವೀರ್ಯರಹಿತವಾಗಿ ಹುಟ್ಟಿದ್ದರಿಂದ ತಂದೆ ಇಲ್ಲದ ಮಕ್ಕಳು ಎನ್ನಬಹುದು. ಎಫಿಡಗಳಂತಹ ಕೀಟಗಳಲ್ಲಿ ಗಂಡು ಕೆಲ ಅವಧಿಯಲ್ಲಿ ಮಾತ್ರ ಹುಟ್ಟಿಕೊಳ್ಳುವದರಿಂದ ಅವುಗಳು ಇಲ್ಲದಾಗ ವೀರ್ಯರಹಿತ ಸಂತಾನ ನಿರ್ಮಿಸುತ್ತದೆ. ಮಾನವನ ರಕ್ತಪಾನ ಮಾಡುವ ತಗಣಿ ರಾಕ್ಷಸವಂಶಕ್ಕೆ ಸೇರಿರುವದರಿಂದ ಅದನ್ನು ಕೊಂದು ರಕ್ತ ಹರಡಿದರೆ ಅದರಲ್ಲಿಯೇ ಮರಿಗಳು ಜನ್ಮ ತಾಳುವವು ಎಂಬ ಮೂಢ ನಂಬಿಕೆ ಕೆಲವರಲ್ಲಿ ಇದೆ. ಎಫಿಡದಂತೆ ಈ ತಗಣಿಯೂ ವೀರ್ಯ

ರಹಿತ ಸಂತಾನ ನಿರ್ಮಿಸಬಲ್ಲುದಾದರಿಂದ ಬಹು ಬೇಗ ಅದರ ಸಂಖ್ಯೆ ಬೆಳೆದು ಬಿಡುವದು. ನಮ್ಮ ಪುರಾಣಗಳಲ್ಲೆಲ್ಲ ರಕ್ತಬೀಜದ ರಾಕ್ಷಸರಿದ್ದರು ಎಂದು ವರ್ಣಿಸಲಾಗಿದೆ. ವೀರ್ಯರಹಿತ ಸಂತಾನೋತ್ಪತ್ತಿ ಸಾಧ್ಯವಿತ್ತು ಎಂಬುದನ್ನು ಅವರು ಊಹಿಸಲು ಸಾಧ್ಯವಿದೆ.

ಪುರುಷ-ಸಂಸರ್ಗವಿಲ್ಲದೆ ಸ್ತ್ರೀಯ ಸಂತಾನೋತ್ಪತ್ತಿ ಸಾಮರ್ಥ್ಯ ವಿಜ್ಞಾನಿಗಳ ಲಕ್ಷ್ಯ ಸೆಳೆದಿದೆ. ಅಂತೆಯೇ ಈ ವಿಧಾನದ ಬಗ್ಗೆ ಬಹಳ ಸಂಶೋಧನೆಗಳು ನಡೆದವು. ಸಾಮಾನ್ಯವಾಗಿ ಸ್ತ್ರೀ-ಜನನ-ಜೀವಾಣುವಿನಲ್ಲಿ ಪುರುಷ-ಜನನ-ಜೀವಾಣು ಸೇರಿದ ನಂತರವೇ ಫಲಕಾರಿಯಾದ ಮೊಟ್ಟೆ ಬೆಳೆಯಲು ಪ್ರಾರಂಭವಾದರೂ ಪ್ರಯೋಗಾಲಯದಲ್ಲಿ ಅದಕ್ಕೆ ಸೂಕ್ಷ್ಮ ಸೂಜಿಯಿಂದ ನೋವನ್ನು ಮಾಡಿದಾಗ, ಉಷ್ಣತಾಮಾನ ಹೆಚ್ಚಿಸಿದಾಗಲೂ ಅದು ಬೆಳವಣಿಗೆ ತೋರಿಸಿತು. ಇದೇ ಪ್ರಕಾರ ಅನೇಕ ರಸಾಯನಗಳು, 'ಕ್ಷ' ಕಿರಣಗಳು, ಉಷ್ಣತಾಮಾನವೂ ಇಂತಹವೇ ಪರಿಣಾಮವನ್ನು ಕೊಟ್ಟವು. ಇವುಗಳ ಆಧಾರದ ಮೇಲೆ, ಮೊಟ್ಟೆಗಳು ಸ್ವಂತ ಬೆಳವಣಿಗೆಯ ಸಾಮರ್ಥ್ಯ ಪಡೆದವುಗಳೂ, ಆದರೆ ಪುರುಷರ ಜನನ ಜೀವಾಣು ಈ ಬೆಳವಣಿಗೆಗೆ ಉತ್ತೇಜನ ಕೊಡುವ ಸಾಧನ ಮಾತ್ರವಾಗಿದೆ ಎಂಬ ತೀರ್ಮಾನಕ್ಕೆ ಬಂದರು. ಅಂದರೆ ಸಂತಾನೋತ್ಪತ್ತಿಯಲ್ಲಿ ಪುರುಷರ ಪಾತ್ರ ತೀರ ಕಿರಿಯದು ಎಂದಾಯಿತು. ಇದೇ ಕಾರಣಕ್ಕಾಗಿ ಇರಬೇಕು ಪೂರ್ವಜರು ಭಾರತ ಮತ್ತು ಭೂಮಾತೆಯನ್ನು, ಪ್ರಕೃತಿಯನ್ನು ಸ್ತ್ರೀ ಹಿಂದು ಪರಿಗಣಿಸಿದ್ದಾರೆಯೇ ಹೊರತು ಪುರುಷನೆಂದಲ್ಲ. ಈ ಪ್ರಯೋಗಗಳನ್ನು ಮಾನವನ ಮೇಲೆಯೂ ಮುಂದುವರಿಸಿದರೆ ಗರ್ಭದಲ್ಲಿಯ ಮೊಟ್ಟೆಗೆ ಯಾವ ಉಷ್ಣತಾಮಾನ ದೊರೆತರೆ, ಇಲ್ಲವೆ ಯಾವ ರಸಾಯನದಿಂದ ಅದರ ಬೆಳವಣಿಗೆ ಪ್ರಾರಂಭವಾಗುವದು ಎಂದು ಅರಿವಾಗುವದು. ಆ ದಿನ ಬಂದರೆ ಮಾತ್ರೆಯೊಂದು ಸೇವಿಸಿದರೆ ಸ್ತ್ರೀಯು ಗರ್ಭ ಧರಿಸಬಹುದು, ವರಗಳು ಉಬ್ಬಿ, ಕೊಬ್ಬಿ, ಕನ್ಯಾಪಿತೃಗಳನ್ನು ಸುಲಿಯುವ ಇಂದಿನ ದಿನಗಳಲ್ಲಿ ಅಂತಹ ಮಾತ್ರೆಗಳು ಬಂದರೆ, ಸ್ತ್ರೀಯರೆಲ್ಲ ಪತಿಯ ಅವಶ್ಯಕತೆಯಿಲ್ಲದೇ ಸಂತಾನ ಪಡೆದು ಸಂಸಾರ ಹೂಡಬಹುದು! ಆಗ ಗಂಡು-ಜೇನಿನಂತೆ ಮಾನವ-ಗಂಡಸರು ಕೂಡ ಕೆಲಸಕ್ಕೆ ಬಾರದವರು ಎಂದು ಮೂಲೆಗುಂಪಾಗಿ ಕೂಡುವ ಪ್ರಸಂಗ ಬಂದೀತು!

ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಪುರುಷಸಂಪರ್ಕವಿಲ್ಲದೇ ಗರ್ಭಧಾರಣೆ

ಯಾದ ಅನೇಕ ಉದಾಹರಣೆಗಳಿವೆ. ಕುಂತಿಯು ವಿವಾಹಪೂರ್ವದಲ್ಲಿಯೇ ಸೂರ್ಯನಿಂದ ಗರ್ಭಧರಿಸಿ ಕರ್ಣನನ್ನು ಪಡೆದಳು. ಸೂರ್ಯತಾಪದಿಂದ ಸ್ತ್ರೀ ಗರ್ಭವತಿಯಾಗಬಲ್ಲಳು ಎಂಬ ಕಲ್ಪನೆ ಇದರಲ್ಲಿ ಸಮಾವೇಶವಾಗಬೇಕಾದರೆ ನಿಜಕ್ಕೂ ಆಶ್ಚರ್ಯಕರ. ಅಮೇರಿಕೆಯ ಬರಹಗಾರರ ಕಾಲ್ಪನಿಕ ಚಂದ್ರಯಾನ ಮತ್ತು ವಿಜ್ಞಾನಿಗಳ ನಿಯೋಜಿತ ಚಂದ್ರಯಾನಗಳ ನಡುವೆ ಸಾಮ್ಯ ಇರುವಂತೆ ಪೂರ್ವಜರ ಕಲ್ಪನೆ ಹಾಗೂ ಇಂದಿನವರ ಸಂಶೋಧನೆಗಳಲ್ಲಿ ಸಾಮ್ಯ ಏಕೆ ಇರಬಾರದು?

ಮಾನವರಲ್ಲಿ ಅವಳಿ-ಜವಳಿಗಳು ಹುಟ್ಟುವದು ಸಾಮಾನ್ಯ ಮಾತಾದರೂ ಕ್ವಚಿತ್ತಾಗಿ ೪ರಿಂದ ೬ರ ವರೆಗೆ ಹುಟ್ಟಿಕೊಳ್ಳುವದೂ ಇದೆ. ಎರಡು ಮಗು ಏಕ ಕಾಲದಲ್ಲಿ ಬೆಳೆಯುವದಕ್ಕೂ ಅವಳಿ-ಜವಳಿಗೂ ಬಹಳ ಅಂತರ. ಮೊದಲಿನದರಲ್ಲಿ ಎರಡು ಮಗುಗಳು ಎರಡು ಮೊಟ್ಟೆಗಳಿಂದ ಬೆಳೆದುಕೊಳ್ಳುವದರಿಂದ ಅವುಗಳಲ್ಲಿ ಯಾವ ಸಾಮ್ಯವೂ ಇರಲಿಕ್ಕಿಲ್ಲ. ಅವುಗಳ ಲಿಂಗವೂ ಬೇರೆಯೇ ಇರಬಹುದು. ಆದರೆ ಎರಡನೆಯವು ಒಂದೇ ಒಂದು ಮೊಟ್ಟೆಯಿಂದ ಬೆಳೆಯುವದರಿಂದ ಅವು ಕನ್ನಡಿಯೊಳಗಿನ ಪ್ರತಿಬಿಂಬ ಇದ್ದಂತೆ, ಅವುಗಳ ರೂಪ-ಲಾವಣ್ಯ, ಬುದ್ಧಿಮತ್ತೆ, ಎತ್ತರ, ಲಿಂಗ ಎಲ್ಲವೂ ಒಂದೇ ಆಗಿರುತ್ತವೆ. ಅವುಗಳಲ್ಲಿ ಒಂದಕ್ಕೆ ಅಪಘಾತವಾದರೆ ಇನ್ನೊಂದಕ್ಕೆ ನೋವಾಗುತ್ತದೆ ಎಂಬ ದಂತಕತೆಗಳೂ ಸಾಕಷ್ಟು ಇವೆ. ಕೆಲವು ಪರಪುಷ್ಟ ಕೀಟ-ಪ್ರಾಣಿಗಳಲ್ಲಿಯೂ ಅವಳಿ-ಜವಳಿ ಹುಟ್ಟಿಕೊಳ್ಳುವ ಪರಿಪಾಠವಿದೆ. ಆದರೆ ಅವು ಒಂದು ಮೊಟ್ಟೆಯಿಂದ ಕೇವಲ ಎರಡು ಜವಳಿ ಮಕ್ಕಳನ್ನು ಪಡೆದು ಸಂತೃಪ್ತರಾಗದೆ ಆ ಸಂಖ್ಯೆಯನ್ನು ಎರಡು ಸಾವಿರದಿಂದ ಮೂರು ಸಾವಿರದ ತನಕ ಒಯ್ಯುತ್ತವೆ. ಹೀಗೆ ನಿರ್ಮಾಣವಾಗುವ ಎಲ್ಲ ಪೀಳಿಗೆಗಳು ಒಂದೇ ಲಿಂಗದವಾಗಿರುತ್ತವೆ. ಕೆಲವು ಪರಪುಷ್ಟ ಜಂತುಗಳಲ್ಲಿ ಮರಿಯು ಪ್ರೌಢಾವಸ್ಥೆಗೆ ಮುಟ್ಟುವ ಮೊದಲೇ ಸಂತಾನೋತ್ಪತ್ತಿಯಲ್ಲಿ ತೊಡಗುವ ಪ್ರವೃತ್ತಿಯಿದೆ.

ಲಿಂಗಪರಿವರ್ತನೆಯ ಘಟನೆಗಳು ಭಾರತೀಯರಿಗಂತೂ ಹೊಸವಲ್ಲ. ಭಸ್ಮಾಸುರನು ತಪಸ್ಸು ಮಾಡಿದಾಗ ಸಾಕ್ಷಾತ್ ವಿಷ್ಣು ಪರಮಾತ್ಮನೇ ಚಿಂತಿತನಾಗಿ ಮೋಹಿನಿಯ ಸುಂದರ ಅಂಗಾಂಗಗಳನ್ನು ಪಡೆದು, ಆತನನ್ನು ನರ್ತನಕ್ಕೆ ಎಳೆದು ಭಸ್ಮಸಾತ್ ಮಾಡಿದ, ಆದರೆ ಪುರುಷ ಸ್ತ್ರೀರೂಪಿ ಹೇಗಾದ ಎಂದು ವಿವರಿಸಿಲ್ಲ.

ತೋರಿಕೆಯ ಲಿಂಗಾಂಗ ಪಡೆದರೂ ಶರೀರವೆಲ್ಲ ಪುರುಷನದೇ ಆಗಿತ್ತೇ? ರಾಕ್ಷಸನೊಬ್ಬನನ್ನು ನಾಶಮಾಡುವ ಸಲುವಾಗಿ ಲಿಂಗಾಂತರದ ಆಪರೇಶನ್ ಪಡೆದಿರಲಾರ ಪರಮಾತ್ಮ. ಭಕ್ತವೃಂದ ನಂಬಿರುವಂತೆ ಭಗವಂತನಿಗೆ ಯಾವುದು ತಾನೆ ಅಸಾಧ್ಯ?

ಮಹಾಭಾರತದ ಅಂಬೆಯದೂ ರೋಚಕ ಕಥಾನಕವಾಗಿದೆ. ಭೀಷ್ಮ ತನಗೆ ಒಲಿಯದ್ದಕ್ಕೆ ಸೇಡನ್ನು ತೀರಿಸಿಕೊಳ್ಳಲು ಘೋರ ತಪಸ್ಸನ್ನು ಆಕೆ ಕೈಕೊಂಡಳು. ಪುರುಷನಿಂದಾಗಲಿ ಸ್ತ್ರೀಯಿಂದಾಗಲಿ ಅಜೇಯನಾಗಿದ್ದ ಭೀಷ್ಮಾಚಾರ್ಯನನ್ನು ಸೋಲಿಸಲು ವರ ಪಡೆದು ಶಿಖಂಡಿಯಾಗಿ ಜನಿಸಿದಳು. ಈ ಶಿಖಂಡಿಯ ದೇಹ-ರಚನೆ ಹೇಗಿತ್ತು ಎಂಬುದು ಮಹಾಭಾರತದಲ್ಲಿ ಇಲ್ಲ. ಅವಳು ಅರೆ ಗಂಡಿನಂತೆ ನಪುಂಸಕಳಾಗಿದ್ದಳೋ ಇಲ್ಲವೇ ಸ್ತ್ರೀ-ಪುರುಷ-ಜನನೇಂದ್ರಿಯಗಳನ್ನೆರಡನ್ನೂ (ಎರೆಹುಳುವಿನಂತೆ!) ಪಡೆದಿದ್ದಳೋ ಎಂದು ಖಚಿತವಾಗಿ ಹೇಳಲು ಬರುವದಿಲ್ಲ. ಅವಳು ಹೇಗೆ ಇದ್ದರೂ ಶಿಖಂಡಿಯಿಂದ ಸಂತತಿ ನಿರ್ಮಾಣವಾಗಲು ಸಾಧ್ಯವೇ ಇರಲಿಲ್ಲ.

ಶಿವನು ಭೋಳೆ ಸ್ವಭಾವದವನು ಇದ್ದಂತೆ ಅತಿ ಸುಂದರನೂ ಹೌದಂತೆ. ಅಂತೆಯೇ ಅವನನ್ನು ಕಂಡ ಪರಸ್ತ್ರೀಯರೂ ಕೂಡ ಆ ಸೌಂದರ್ಯಕ್ಕೆ ಮೋಹಿತರಾಗುತ್ತಿದ್ದಿರಬೇಕು. ಲೇಪಾಕ್ಷಿಯ ಶಿಲ್ಪವೊಂದರಲ್ಲಿ ಭಿಕ್ಷಾಟನೆಗಾಗಿ ಶಿವನು ತನ್ನ ಗಣದೊಂದಿಗೆ ಹೊರಟಾಗ ಭಿಕ್ಷೆ ನೀಡಲು ಬಂದ ಋಷಿಪತ್ನಿ ಶಿವನ ರುದ್ರ ಸೌಂದರ್ಯಕ್ಕೆ ಮಾರುಹೋಗಿ ಮೈಮರೆತಾಗ ಅವಳ ಸೀರೆ ಜಾರಿಬಿದ್ದುದು ಚಿತ್ರಿತವಾಗಿದೆ. ಇಂತಹ ಅಪೂರ್ವಸೌಂದರ್ಯ ಸ್ತ್ರೀಯರಿಗೂ ಇರಬೇಕಾಗಿತ್ತೆಂದೋ ಏನೋ ಅರ್ಧನಾರೀಶ್ವರನ ಕಲ್ಪನೆ ನಮ್ಮಲ್ಲಿ ಬೆಳೆದುಬಂದಿದೆ. ಶರೀರದ ಬಲಭಾಗ ಪುರುಷನಂತೆ ಇದ್ದರೆ ಎಡಭಾಗ ಸ್ತ್ರೀಯಂತಿದೆ. ಇಲ್ಲವೇ ಧಾರ್ಮಿಕರು ಹೇಳುವಂತೆ ಬಲಭಾಗ ಮಹೇಶ್ವರನಂತೆ, ಎಡಭಾಗ ಉಮಾಳಂತೆ ಇದ್ದು, ಉಮಾಮಹೇಶ್ವರನಾದ. ಅರ್ಧನಾರೀಶ್ವರನ ಶಿಲ್ಪ ಅನೇಕ ಶಿವಾಲಯಗಳಲ್ಲಿ ಕಂಡುಬರುತ್ತದೆ. ಎಲ್ಲೋರ, ಪಟ್ಟದಕಲ್ಲುಗಳಲ್ಲಿಯವು ಭವ್ಯವಾಗಿವೆ. ಮಹಾಕೂಟದ್ದು ಅತಿಸುಂದರವಾಗಿದೆ. ಕರ್ನಾಟಕದ ಶಿಲ್ಪಿಗಳಿಗೆ ಸ್ತ್ರೀ-ಪುರುಷರ ಅಂಗವೈಶಿಷ್ಟ್ಯದ ಸಂಪೂರ್ಣ ಕಲ್ಪನೆ ಇತ್ತೆಂಬುದಕ್ಕೆ ಈ ಶಿಲ್ಪವೇ ಸಾಕ್ಷಿ. ಸ್ತ್ರೀ-ಪುರುಷರ ಅಂಗರಚನೆಗಳು ತೀರ ವಿರುದ್ಧವಾಗಿದ್ದರೂ ಒಂದಿಷ್ಟೂ ಅಸಹಜವಾಗಿ

ಕಾಣದಷ್ಟು ಸುಂದರವಾಗಿ ಜೋಡಣೆ ಮಾಡಲಾಗಿದೆ. ಅರ್ಧನಾರೀಶ್ವರ ರೂಪದಲ್ಲಿ ಹುಲಿ ಆಡಿನ ಸಹಜೀವನ ಪ್ರತೀಕರಿಸಲಾಗಿದೆ ಎಂದು ಒಂದು ಅಭಿಪ್ರಾಯವಿದೆ. ಪ್ರಾಣಿ ಜಗತ್ತಿನಲ್ಲಿ ಅರ್ಧನಾರೀಶ್ವರ ಹುಟ್ಟಿರಬಹುದು ಸಾಧ್ಯವೇ ಎಂದು ವೈಜ್ಞಾನಿಕವಾಗಿ ವಿಚಾರಿಸಬೇಕು. ಮಾನವರಲ್ಲಿ ಅಂತೂ ಹುಟ್ಟಿಬರಲಿಲ್ಲ. ಬರುವ ಸಾಧ್ಯತೆಯೂ ಇಲ್ಲ. ಕೀಟಜಗತ್ತಿನಲ್ಲಿ ಇಂತಹ ಅದ್ಭುತ ಜೀವಿಗಳಿರುವದುಂಟು! ಇಂತಹ ಪಾತರಗಿತ್ತಿಗಳಲ್ಲಿ ಬಲಭಾಗ ಸ್ತ್ರೀಯಂತೆ, ಎಡಭಾಗ ಪುರುಷನಂತೆ ಇರುತ್ತದೆ. ಕೀಟಪ್ರಪಂಚದಲ್ಲಿ ಹೆಣ್ಣಿನ ಉದ್ದಗಲ ಗಂಡು-ಕೀಟಕ್ಕಿಂತ ಹೆಚ್ಚು ಇರುತ್ತದೆ. ಇಂತಹ ಜೀವಿಗಳ ಬೆಳವಣಿಗೆಯ ಕಾಲದಲ್ಲಿ ಲಿಂಗ-ಕ್ರೊಮೊಸೋಮುಗಳು ಅಸ್ತವ್ಯಸ್ತವಾಗಿರುವದರಿಂದ ಹುಟ್ಟಿಕೊಳ್ಳುತ್ತವೆ ಎಂದು ನಂಬಲಾಗಿದೆ. ಇವು ನಪುಂಸಕವಾಗಿರುವದರಿಂದ ಅವುಗಳ ಮಕ್ಕಳು ಹೇಗಿರುತ್ತವೆ ಎಂಬ ಸಮಸ್ಯೆಯೇ ಇಲ್ಲ.

ಹನ್ನೆರಡು : ಮರುಬೆಳವಣಿಗೆ

ಮಗುವಿದ್ದಾಗಿನಿಂದ ನಮ್ಮ ಅಂಗಾಂಗಗಳು ಅಷ್ಟೇ ಪ್ರಮಾಣದಲ್ಲಿ ಬೆಳೆದಿದ್ದರೆ ನಮ್ಮ ಕಿವಿಗಳು ಹೆಣ್ಣು-ಕತ್ತೆಯ ಕಿವಿಯಂತೆ ಬೆಳೆಯುತ್ತಿತ್ತೆಂದೂ, ಮುಖ ಜಿರಾಫೆಯಂಹೆ ಮೊಳದುದ್ದ ಬೆಳೆಯುತ್ತಿತ್ತೆಂದೂ ವಿಜ್ಞಾನಿಗಳು ಲೆಕ್ಕಹಾಕಿದ್ದಾರೆ. ಅದರಂತೆ ಜೀವನದುದ್ದಕ್ಕೂ ಬೆಳೆಯುತ್ತ ಹೋಗಿದ್ದರೆ, ತೆಂಗಿನ ಎತ್ತರಕ್ಕೆ ಬೆಳೆಯಬಹುದಿತ್ತಂತೆ! ಬಾಲ್ಯಾವಸ್ಥೆಯಲ್ಲಿ ಬೆಳವಣಿಗೆ ವೇಗವಾಗಿ ನಂತರ ಕುಂಠಿತವಾಗಿ ಪ್ರೌಢಾವಸ್ಥೆಯಲ್ಲಿ ತಿರುಗಿ ವೇಗದಿಂದ ಬೆಳೆದು ನಂತರ ಸ್ಥಗಿತವಾಗುವದು ಎಲ್ಲರ ಅನುಭವ. ಹಾಗಾದರೆ ಬೆಳವಣಿಗೆಯೆಂಬುದು ವ್ಯವಸ್ಥಿತವಾಗಿ ಹೇಗೆ ನಿಯಂತ್ರಿತವಾದಿರುತ್ತದೆ ಎಂಬುದು ಕುತೂಹಲ ಕೆರಳಿಸುವ ಸಮಸ್ಯೆ. ಇದಕ್ಕಾಗಿ ವಿಜ್ಞಾನಿಗಳು ಸಾವಿರಾರು ಪ್ರಯೋಗ ನಡೆಸಿದರು. ಕೀಟ-ಕಪ್ಪೆಗಳ ಬೆಳವಣಿಗೆಯು ಸರಳ ಮತ್ತು ಶೀಘ್ರವಾಗಿದ್ದರಿಂದ ಅವುಗಳ ಮೇಲೆಯೇ ಹೆಚ್ಚು ಪ್ರಯೋಗ ಮಾಡಲಾಯಿತು.

ರೇಶಿಮೆ-ಪತಂಗದಂತಹ ಕೀಟಗಳು ತಮ್ಮ ಜೀವನವನ್ನು ಮೊಟ್ಟೆಯಿಂದಲೇ

ಪ್ರಾರಂಭಿಸುತ್ತವೆ. ಮೊಟ್ಟೆಯಿಂದ ಹೊರಬಂದ ರೇಶಿಮೆಯ ಹುಳು ಪ್ರೌಢ ಪತಂಗಕ್ಕೆ ಯಾವ ಹೋಲಿಕೆಯೂ ಇಲ್ಲ. ತನ್ನ ದೇಹದ ಶೂಕದ ಸಾವಿರ ಪಟ್ಟು ಆಹಾರವನ್ನು ತಿಂದು ಬೆಳೆಯುವದೇ ಅದರ ಗುರಿ. ಮೇದ್ದು ಮೆದ್ದು ಕೊಬ್ಬಿದಾಗ ತನ್ನ ಎಲ್ಲ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ನಿದ್ರಾವಸ್ಥೆಯನ್ನು ತಳೆಯುತ್ತದೆ. ಈ ಅವಸ್ಥೆಯಲ್ಲಿ ಅದು ವಿರಮಿಸುತ್ತಧೆ ಎಂದು ಬಾಹ್ಯಜಗತ್ತಿಗೆ ತೋರಿದರೂ ನಿಜವಾಗಿ ಅದು ಹಾರಾಡಲು ಬೇಕಾಗುವ ಎಲ್ಲ ಅವಯುವಗಳನ್ನು ರೂಪಿಸಿ ಕೊಳ್ಳುತ್ತದೆ. ನಿದ್ರಾವಸ್ಥೆಯನ್ನು ಪ್ರವೇಶಿಸಲಿರುವ ರೇಶಿಮೆ ಹುಳದ ಶರೀರದ ಮಧ್ಯದಲ್ಲಿ ನೂಲಿನಿಂದ ಕಟ್ಟಿದರೆ ಶಿರದ ಭಾಗ ನಿದ್ರಾವಸ್ಥೆಯಲ್ಲಿ ಹೋದರೂ ಬಾಲದ ಭಾಗ ಹುಳುವಾಗಿಯೇ ಇರುತ್ತದೆ. ಇದರಂತೆ ನಿದ್ರಾವಸ್ಥೆಯಲ್ಲಿಯೂ ನೂಲಿನಿಂದ ಕಟ್ಟಿದರೆ ಶಿರವಿರುವ ಭಾಗ ಪತಂಗವಾದರೂ ಬಾಲದ ಭಾಗ ಇದ್ದಂತೆ ಇರುತ್ತದೆ. ಇದರಿಂದ ವಿಜ್ಞಾನಿಗಳಿಗೆ, ಮಿದುಳಿನಿಂದ ಯಾವುದೋ ರಸಾಯನ ಶರೀರದಲ್ಲಿ ಸಂಚರಿಸುವದರಿಂದ ಬೆಳವಣಿಗೆ ಮತ್ತು ಅಂಗಾಂಗಗಳಲ್ಲಿ ಬದಲಾವಣೆ ಗಳಾಗುತ್ತವೆ ಎಂದು ಅನಿಸಿದ್ದರಿಂದ, ಇನ್ನೂ ಹೆಚ್ಚು ಪ್ರಯೋಗಗಳನ್ನು ಮಾಡಿದರು. ನಿದ್ರಾವಸ್ಥೆಯ ಹುಳುವನ್ನು ಮಧ್ಯದಲ್ಲಿ ದ್ವಿಭಾಗಿಸಿ, ಎರಡೂ ಭಾಗಗಳನ್ನು ಕೊಳವೆಯಿಂದ ಜೋಡಿಸಿದಾಗ ಶರೀರದೊಳಗಿನ ದ್ರವಗಳು ಹರಿದಾಡಲು ಅನುಕೂಲವಾಗಿ ಕೊಳವೆಯೊಂದಿಗೇ ಅದು ರೇಶಿಮೆ-ಪತಂಗವಾದ್ದ ರಿಂದ ವಿಜ್ಞಾನಿಗಳ ಊಹೆ ಖಚಿತಪಟ್ಟಿತು. ಈ ರಸಾಯನ "ಬೆಳವಣಿಗೆಯ ಆಡಳಿತಗಾರ"ನೆಂದು ಹೆಸರುಪಡೆಯಿತು.

ಮೀನನ್ನು ಹೋಲುವ ಕಪ್ಪೆ-ಮರಿಯ ಕಣ್ಣನ್ನು ಕಿತ್ತು ಬಾಲಕ್ಕೆ ಜೋಡಿಸಿ ದರೆ ಅದು ಮುಂದೆ ಬಾಲದ ರಚನೆ ತಳೆದು ಬೆಳೆಯಿತು. ಇದೇ ಪ್ರಯೋಗವನ್ನು ಬೆಳೆದ ಮರಿಯ ಮೇಲೆ ನಡೆಸಿದಾಗ, ಕಣ್ಣನ್ನು ಬಾಲಕ್ಕೆ ಜೋಡಿಸಿದರೂ ಅದು ಕಣ್ಣಾಗಿಯೇ ಬೆಳೆಯಿತು ಮತ್ತು ಬಾಲವನ್ನು ಶಿರಕ್ಕೆ ಜೋಡಿಸಿದರೆ ಅದು ಬಾಲ ವಾಗಿಯೇ ಬೆಳವಣಿಗೆ ಹೊಂದಿತು. ಇದರಿಂದ ಪ್ರತಿಯೊಂದು ಅವಯುವದ ಬೆಳವಣಿಗೆ ರಸಾಯನದಿಂದ ಪೂರ್ವನಿರ್ಧಾರಿತವಾಗಿ ನಡೆಯುತ್ತದೆ ಎಂದಾಯಿತು. ಈ ಪ್ರಯೋಗಗಳನ್ನು ನೂರಾರು ಪ್ರಾಣಿಗಳ ಮೇಲೆ ನಡೆಸಿ ಇದನ್ನು ಖಚಿತ ಪಡಿಸಿದ್ದಾರೆ. ಮಣ್ಣಿನಿಂದ ಇಟ್ಟಂಗಿಗಳನ್ನು ತಯಾರಿಸಿ, ಇಟ್ಟಂಗಿಗಳಿಂದಲೇ ಗೃಹನಿರ್ಮಾಣವಾದರೂ ಗೃಹವನ್ನು ಮೊದಲಿನ ಮಣ್ಣಿಗೆ ಪರಿವರ್ತಿಸುವದು

ಸುಲಭಸಾಧ್ಯವಾಗದಂತೆ, ಪ್ರಾಣಿಗಳಲ್ಲಿ ಎಲ್ಲ ಅವಯವಗಳು ಒಂದೇ ರೀತಿಯಲ್ಲಿ ಹುಟ್ಟಿಕೊಂಡರೂ ಒಂದನ್ನು ಇನ್ನೊಂದಕ್ಕೆ ಮಾರ್ಪಡಿಸುವದು ಸುಲಭವಲ್ಲ. ಮಣ್ಣನ್ನು ಕೆಸರುಮಾಡಿ, ಅಚ್ಚಿನಲ್ಲಿ ಹಾಕಿ, ಸುಟ್ಟು ಇಟ್ಟಿಂಗಿ ಮಾಡಿ, ಸುಣ್ಣ ಸಿಮೆಂಟ, ಕಬ್ಬಿಣದೊಂದಿಗೆ ಹೊಸ ಕಟ್ಟಡದ ನಿರ್ಮಾಣವಾದಂತೆ ವ್ಯಕ್ತಿ, ಜೀವಾಣು ವಿನಿಂದ ಬೆಳೆದುಬಂದರೂ ಪ್ರತಿಯೊಂದು ಅವಯುವ ರೂಪಿತವಾಗಬೇಕಾದರೆ ಬೆಳವಣಿಗೆಯ ರಸಾಯನದ ಮೇಲ್ವಿಚಾರಣೆಯಂತೆ ಎಲ್ಲ ಕಾರ್ಯ ಸಾಂಗವಾಗಿ ನಡೆಯುತ್ತದೆ.

ಬೆಳೆಯುವ ಮಕ್ಕಳಲ್ಲಿ ಎಲುವು ಮುರಿದರೆ, ಆಳವಾದ ಗಾಯವಾದರೆ ಅದು ಬೇಗನೆ ಗುಣವಾಗುವದು ಎಲ್ಲರ ಅನುಭವಕ್ಕೆ ಬಂದ ಮಾತು. ಅದೇ ನಡುವಯಸ್ಕರು ಎಲುವು ಮುರಿದುಕೊಂಡರೆ ಅದರ ಜೋಡಣೆಗೆ ಹೆಚ್ಚಿನ ತೊಂದರೆಯಲ್ಲದೆ ತುಂಬ ಸಮಯ ಹತ್ತುವದು. ಹಣ್ಣು ಮುದುಕರು ಜಾರಿ ಬಿದ್ದು ಕೈಕಾಲು ಮುರಿದುಕೊಂಡರೆ ಕುಂಟುತ್ತಲೇ ಸ್ವರ್ಗಲೋಕಕ್ಕೆ ನಡೆಯ ಬೇಕಾಗುತ್ತದೆ. ನಮ್ಮ ಶರೀರದಲ್ಲಿ ಸದಾಕಾಲ ಸವೆದುಹೋದ ಜೀವಾಣುಗಳನ್ನು ನಿರ್ಮಾಣಮಾಡುವ ಕಾರ್ಯ ನಡೆದೇ ಇದ್ದರೂ, ವಯಸ್ಸು ಹೆಚ್ಚಾದಂತೆ ಅದು ಕುಂಠಿತವಾಗುತ್ತದೆ. ಕಟ್ಟಡ ಕಟ್ಟುವಾಗಲೇ ಭಾರೀ ಮಳೆಗಾಳಿಗೆ ಗೋಡೆಯೊಂದು ಕುಸಿದರೆ, ತಿರುಗಿ ಕಟ್ಟಡದಲ್ಲಿ ಯಾವ ಲಯವೂ ಕಾಣದಂತೆ ಹೊಸ ಗೋಡೆ ಕಟ್ಟಬಹುದು, ನಡುವಯಸ್ಸಿನ ಕಟ್ಟಡಕ್ಕಾದರೆ ನೀರು ಒಳಸೇರದಂತೆ ಅದರ ಹೊಂದಾಣಿಕೆ ಇಲ್ಲದ ದುರಸ್ತಿ ಮಾಡುವದು. ಇಳಿವಯಸ್ಸಿನ ಕಟ್ಟಡಕ್ಕೆ ಇದೇ ಸ್ಥಿತಿ ಬಂದಳೆ ಅದನ್ನು ಅಲಕ್ಷಿಸುವಂತೆ ಶರೀರವೂ ವರ್ತಿಸುತ್ತದೆ.

ಪ್ರಾಣಿ-ವಿಕಾಸವನ್ನು ತಿರುವು-ಮುರುವು ಮಾಡಲಾಗದಂತೆ ವ್ಯಕ್ತಿಯ ಬೆಳವಣಿಗೆಯನ್ನೂ ತಿರುವು-ಮುರುವು ಮಾಡಲಾಗುವದಿಲ್ಲ. ಅಂತೆಯೇ ಒಮ್ಮೆ ಕೈ-ಕಾಲು, ಕಿವಿ-ಕಣ್ಣುಗಳು ಬೆಳೆಯಲಾರಂಭಿಸಿದವೆಂದರೆ ಕಿವಿಗಳನ್ನು ಕಣ್ಣನ್ನಾಗಿ, ಕೈಗಳನ್ನು ಕಿವಿಗಳನ್ನಾಗಿ ಮಾಡಲಾಗುವದಿಲ್ಲ. ಹಾಗೆ ಮಾಡಲು ಬಂದಿದ್ದರೆ ಕುರುಡ ಒಂದು ಕಿವಿಯನ್ನಾದರೂ ಕಳೆದುಕೊಂಡು ಒಂದು ಕಣ್ಣನ್ನು ಪಡೆಯು ತ್ತಿದ್ದ. ಕಿವುಡ ಒಂದು ಕೈಯ ಬದಲಾಗಿ ಕೇಳುವ ಕಿವಿ ಪಡೆಯಲು ಹಾತೊರೆಯು ತ್ತಿದ್ದ. ಮಾನವನ ಭಾಷೆ ಹಕ್ಕಿಗಳ ಭಾಷೆಯಂತೆ ಹುಟ್ಟಾ ಬಾರದೇ ಕೇಳಿ ಕಲಿಯು ಬೇಕಾಗುತ್ತದೆ. ಆದ್ದರಿಂದ ಕಿವುಡರು ಮೂಕರೂ ಆಗಿರುತ್ತಾರೆ.

ಸಸ್ತನ-ವರ್ಗದ ಪ್ರಾಣಿಗಳ ಅಂಗಾಂಗಗಳು ಪರಿಣತವಾಗಿ ಬೆಳೆದಿದ್ದರಿಂದ ಕೈ-ಕಾಲು ಕತ್ತರಿಸಿಹೋದರೆ ತಿರುಗಿ ಬೆಳೆಯುವದಿಲ್ಲ. ಅದೇ ನಿಮ್ನ ವರ್ಗದ ಪ್ರಾಣಿಗಳ ಅವಯವಗಳು ಮನೆಯನ್ನು ಕಟ್ಟಲು ಬಳಸುವ ಮಣ್ಣಿನ ಇಟ್ಟಂಗಿಗಳಂತೆ ಇರುವದರಿಂದ ಅವನ್ನು ಬಳಸಿ ಗುಡಿಸಲನ್ನಾದರೂ ಕಟ್ಟಬಹುದು. ಅರಮನೆಯನ್ನೂ ನಿರ್ಮಿಸಬಹುದು. ಕಡಲಿನಲ್ಲಿ ವಾಸಿಸುವ ಸ್ಪಂಜಗಳನ್ನು ದ್ವಿಭಾಗಮಾಡಿದರೆ ಅದರ ಪ್ರತಿಯೊಂದು ತುಂಡು ಒಂದೊಂದು ಸ್ಪಂಜ ಆಗಿ ಬೆಳೆಯುವದು. ಹತ್ತು ಭಾಗಗಳಲ್ಲಿ ವಿಂಗಡಿಸಿದರೆ ಹತ್ತು ಪ್ರಾಣಿಗಳಾಗುವವು. ಒಂದು ಸ್ಪಂಜನ್ನು ಸೋಣಿಸಿ ಪ್ರತಿಯೊಂದು ಜೀವಾಣುವನ್ನು ಬೇರ್ಪಡಿಸಿದರೂ ತಿರುಗಿ ಜೋಡಿಸಿದಾಗ ಅವು ಒಂದಾಗಿಬಿಡುವವು. ಅಬ್ಬಾ ಎಂತಹ ಅದ್ಭುತ ಶಕ್ತಿ! ನಮ್ಮ ಪುರಾಣಗಳಲ್ಲಿ ದೇಹ ತಿರುಗಿ ಹೊಂದುವ, ಶಿರ ತುಂಡರಿಸಿದರೂ ತಿರುಗಿ ಜೋಡಿಸಲ್ಪಡುವ ಶಕ್ತಿಯ ರಾಕ್ಷಸರ ಕಥೆಗಳಿವೆಯಷ್ಟೇ!

ಹೈಡ್ರಾ ಪ್ರಾಣಿಯನ್ನು ಎರಡು, ಮೂರು, ನಾಲ್ಕು ತುಂಡುಗಳನ್ನಾಗಿ ವಿಂಗಡಿಸಿದಾಗಲೂ ಪ್ರತಿ ತುಣುಕು ಒಂದು ಪ್ರಾಣಿಯಾಗಿ ಬೆಳವಣಿಗೆ ಹೊಂದುತ್ತದೆ. ಒಂದು ಹೈಡ್ರಾವನ್ನು ಅತಿ ಹೆಚ್ಚು ತುಂಡು ಮಾಡಿದಾಗ ಪ್ರತಿಯೊಂದು ತುಂಡಿನಿಂದ ಪ್ರಾಣಿ ಬೆಳೆಯಲಾರದಾದಾಗ ಅವನ್ನು ಒಂದನ್ನೊಂದು ಜೋಡಣೆ ಮಾಡಿದರೆ ಮಾತ್ರ ಒಂದು ಹೈಡ್ರಾ ಆಗಿ ಬೆಳೆಯುತ್ತದೆ. ಈ ಪ್ರಾಣಿಯ ಶಿರೋಭಾಗವನ್ನು ಅರ್ಧ ಕತ್ತರಿಸಿಬಿಟ್ಟರೆ, ಜೋಡುತಲೆಯ ಹೈಡ್ರಾ ಬೆಳೆಯುತ್ತದೆ. ಜೋಡುತಲೆಯ ಗಂಡ-ಭೇರುಂಡ ನಮ್ಮಲ್ಲಿ ತೀರ ಪ್ರಾಚೀನ ಕಾಲದಿಂದ ಪ್ರಚಲಿತವಿದೆ. ಹೈಡ್ರಾದಲ್ಲಿ ಇದ್ದ ಮರುಬೆಳವಣಿಗೆಯ ಶಕ್ತಿ ಪಕ್ಷಿಗಳಿಗೆ ಇಲ್ಲದ್ದರಿಂದ ಗಂಡ-ಭೇರುಂಡ ಪಕ್ಷಿಯು ಬಾಳಿ ಬದುಕುವದು ಸಾಧ್ಯವಿಲ್ಲದಿದ್ದರೂ ಜೋಡುತಲೆಯ ಪಕ್ಷಿಯ ಸಾಧ್ಯತೆಯನ್ನು ಪೂರ್ವಜರು ಕಲ್ಪಿಸಿಕೊಂಡಿದ್ದರು.

ಜಂತುವರ್ಗಕ್ಕೆ ಸೇರಿದ, ಹೊಂಡದಲ್ಲಿ ವಾಸಿಸುವ ಪ್ಲೇನೇರಿಯಾಕ್ಕೆ ಮರುಬೆಳವಣಿಗೆಯ ಚಮತ್ಕಾರಿಕ ಶಕ್ತಿ ಇದೆ. ಈ ಪ್ರಾಣಿಯಲ್ಲಿ ಎರೆಹುಳುಗಳಂತೆ ಶಿರ ಮತ್ತು ಬಾಲದಭಾಗಗಳನ್ನು ಗುರುತಿಸಬಹುದು. ಪ್ಲೇನೇರಿಯವನ್ನು ಇಬ್ಭಾಗ ಮಾಡಿದರೆ ಶಿರೋಭಾಗ ಬಾಲವನ್ನು ಬಲಭಾಗ ಶಿರವನ್ನು ಬೆಳೆಸಿಕೊಂಡು ಎರಡು ಪ್ರಾಣಿಗಳಾಗಿ ಬೆಳೆಯುವವು. ಮೂರು ಭಾಗ ಮಾಡಿದರೆ ನಡುವಿನ ಭಾಗ, ಬಾಲ, ಶಿರಗಳೆರಡನ್ನೂ ಬೆಳೆಸಿಕೊಂಡು ಮೂರು ಪ್ರಾಣಿಗಳಾಗಿಬಿಡುತ್ತದೆ. ನಮಗೂ

ಈ ಶಕ್ತಿ ಇದ್ದಿದ್ದರೆ ಮೋಟಾರ ಅಪಘಾತದಲ್ಲಿ ಕಾಲು ಕಳೆದುಕೊಂಡವನು ತಿರುಗಿ ಅವನ್ನು ಬೆಳೆಸಿಕೊಳ್ಳುತ್ತಿದ್ದ. ಅಪಘಾತದಲ್ಲಿ ಸಾಯುವ ಬದಲಾಗಿ ಒಂದೇ ಹೆಸರಿನ ಇಬ್ಬರು ಮೂವರು ನಾಲ್ವರು ಬಾಳಿ ಬದುಕುವಂತಾಗುತ್ತಿತ್ತು!

ಪ್ಲೇನೇರಿಯಾದ ಶಿರೋಭಾಗವನ್ನು ಸೀಳಿದರೆ ದ್ವಿಶಿರ-ಪ್ರಾಣಿಯಾಗಿ ಬೆಳೆಯುತ್ತದೆ. ಅದರಂತೆ ನಾಲ್ಕು, ಐದು, ಏಳು ಶಿರಗಳುಳ್ಳ ಪ್ಲೇನೇರಿಯ ಬದುಕಬಲ್ಲವು. ಕಾಳಿಂಗ, ಶೇಷಗಳಂತಹ ಮೂರು, ಐದು, ಏಳು ಶಿರಗಳುಳ್ಳ ಸರ್ಪಗಳು ಪುರಾಣಗಳಲ್ಲಿ ನಮೂದಿತವಾಗಿವೆ. ಉರಗವರ್ಗದಲ್ಲಿ ಒಂದಕ್ಕಿಂತ ಹೆಚ್ಚು ಹೆಡೆಗಳಿದ್ದರೆ ಅದೇ ಪ್ರಮಾಣದಲ್ಲಿ ಮಿದುಳು ಇದ್ದು, ಅವು ಸ್ವತಂತ್ರವಾಗಿ ವರ್ತಿಸುವದರಿಂದ ಅಂತಹ ಪ್ರಾಣಿ ಜೀವಿಸುವದು ಅಸಾಧ್ಯವಾದ ಮಾತಾದರೂ ಬಹುಶಿರದ ಪ್ರಾಣಿಗಳು ಇರಬಲ್ಲವೆಂದು ವಿಜ್ಞಾನ ಸಿದ್ಧಪಡಿಸಿದೆ. ಪ್ಲೇನೇರಿಯದ ಹತ್ತಿರದ ಸಂಬಂಧಿ "ಐಮಾರ್ಟಿಯಾ" ಅನೇಕ ಶಿರಗಳು ಬೆಳೆಯುವ ಸಾಧ್ಯತೆಯಿದ್ದು, ಅಂತಹ ಪ್ರಾಣಿ ನಮ್ಮ ಪುರಾಣದ ಕಾಲ್ಪನಿಕ ಸರ್ಪಗಳನ್ನು ಹೋಲುತ್ತದೆ.

ದೇವದೇವತೆಗಳು ಮಾನವನಿಗಿಂತ ಭಿನ್ನ ಎಂದು ಜನಸಾಮಾನ್ಯರಿಗೆ ತಿಳಿವಳಿಕೆ ಮೂಡಿಸುವಂತೆ, ಅವರನ್ನು ಅನೇಕಾಂಗಿಳನ್ನಾಗಿ ರೂಪಿಸಲಾಗಿದೆ. ಶಿವ, ವಿಷ್ಣು ಮುಂತಾದ ದೇವತೆಗಳಿಗೆ ನಾಲ್ಕು ಕೈಗಳಿದ್ದರೆ, ಆರು ಎಂಟು, ಹತ್ತು ಕೈಗಳಿದ್ದ ದೇವ-ರಾಕ್ಷಸರಿದ್ದಾರೆ. ತ್ರಿಮೂರ್ತಿ, ಷಣ್ಮುಖ, ದಶಾನನರಿದ್ದಾರೆ. ರಾವಣನ ಯಾವ ಶಿರದ ಮಿದುಳಿನ ಅಂಕಿತದಲ್ಲಿ ಅಂಗಾಂಗಗಳು ಕೆಲಸ ಮಾಡುತ್ತಿದ್ದವು, ಯಾವ ಬಾಯಿಂದ ಆತ ಸುಗ್ರಾಸ-ಭೋಜನ ಮಾಡುತ್ತಿದ್ದ, ಯಾವ ಬಾಯಿಂದ ಸೋಮರಸ ಕುಡಿಯುತ್ತಿದ್ದ, ಒಂದೇ ಶಿರಕ್ಕೆ ನಿದ್ರೆ ಬಂದು ಇನ್ನೊಂದಕ್ಕೆ ಬಾರದಿದ್ದರೆ ಅವನು ಏನು ಮಾಡುತ್ತಿದ್ದ, ಎಂದು ಕೇಳುವವರಿಗೆ ರಾವಣನಂತಹ ವ್ಯಕ್ತಿ ಜೀವಿಸುವದು ಸಾಧ್ಯವಿಲ್ಲ ಎಂದು ಹೊಳೆಯಬೇಕು. ಇದು ಪೂರ್ವಜರಿಗೂ ತಿಳಿದಿರಬೇಕು.

ಆಕಸ್ಮಿಕವಾಗಿ ಎರೆಹುಳ ತುಂಡಾದರೆ ಶಿರೋಭಾಗ ಬಾಲವನ್ನೂ ಬಾಲಭಾಗ ಶಿರವನ್ನೂ ತಳೆದು ಎರಡು ಎರೆಹುಳುಗಳಾಗುತ್ತವೆ ಎಂಬ ಮಾತು ಪ್ರತಿಯೊಬ್ಬ ಕೃಷಿಗಾರನೂ ಅನುಭವದಿಂದ ಅರಿತಿದ್ದಾನೆ. ಆದರಂತೆ ಶಿರ-ಬಾಲಗಳನ್ನು ಅದಲು ಬದಲು ಮಾಡಿದರೂ ಅವುಗಳನ್ನು ಹೊಂದಿಸಿಕೊಂಡು ಅವೆಲ್ಲ ತನ್ನದೇ ದೇಹ ಭಾಗ ಎಂಬಂತೆ ಎರೆಹುಳ ನಡೆಮುಕೊಳ್ಳುತ್ತದೆ. ಎರಡು ಬಾಲಗಳನ್ನು ಜೋಡಿ

ಸಿದರೂ ಬೆಳವಣಿಗೆಯಾಗುತ್ತದೆ. ಆದರೆ ಆಹಾರ ಸೇವಿಸಲಾರದೆ ಹಸಿವೆಯಿಂದ ಸಾಯಬೇಕಾಗುತ್ತದೆ. ಪ್ರಾಯೋಗಿಕವಾಗಿ ನಾಲ್ಕು-ಐದು ಎರೆಹುಳಗಳ ವಿವಿಧ ಭಾಗಗಳನ್ನು ಜೋಡಿಸಿ ಎರೆಹುಳುವಿನ 'ರೇಲು' ನಿರ್ಮಿಸುವದು ಸಾಧ್ಯವಿದೆ. ಆದರೆ ಅಂತಹ ಪ್ರಾಣಿಗಳು ಹೆಚ್ಚು ಕಾಲ ಬದುಕಲಾರವು. ಒಂದು ಪ್ರಾಣಿಯ ದೇಹ, ಇನ್ನೊಂದು ಪ್ರಾಣಿಯ ಶಿರ ಧರಿಸಿದ ವ್ಯಕ್ತಿಗಳು ನಮ್ಮ ಪುರಾಣ ಮತ್ತು ಶಿಲ್ಪಗಳಲ್ಲಿ ಸಾಕಷ್ಟು ಸಿಗುತ್ತವೆ. ಗಂಧರ್ವ-ಕಿನ್ನರರು, ಮಹಿಷಾಸುರ, ಗಣಪತಿ, ಋಷ್ಯಶೃಂಗರೆಂಬ ವಿಲಕ್ಷಣ ವ್ಯಕ್ತಿಗಳು ಹೇಗೆ ಬಂದರೆಂದು ಮೋಜಿನ ಕಥೆಗಳು ಇದ್ದರೂ, ಮಹತ್ವದ ಮಾತೆಂದರೆ ಪ್ರಾಣಿ-ಜಗತ್ತಿನ ಹೆಚ್ಚಿನ ಪರಿಚಯ ಇಲ್ಲದವರೂ ಆಗಾಧವಾದ ಊಹೆಯಿಂದ ಇಂತಹ ಪ್ರಾಣಿಗಳನ್ನು ನಿರ್ಮಿಸಿದ್ದು. ಹಯವದನನು ಕುದುರೆಯಂತೆ ಹುಲ್ಲು ತಿನುತ್ತಿದ್ದನೋ ಇಲ್ಲವೆ ಮಾನವನಂತೆ ನರ್ತಿಸುತ್ತಿದ್ದನೋ, ಋಷ್ಯಶೃಂಗನ ಕೋಡು ಪ್ರತಿವರ್ಷ ಉದುರಿ ಹಿಂತಿರುಗಿ ಬೆಳೆಯುತ್ತಿತ್ತೋ ಎಂಬುದು ಊಹೆಗೆ ಬಿಟ್ಟ ವಿಷಯ.

ನಕ್ಷತ್ರ-ಮೀನುಗಳಲ್ಲಿಯೂ ಮರುಬೆಳವಣಿಗೆಯ ಸಾಮರ್ಥ್ಯ ಹೆಚ್ಚಾಗಿದೆ. ಅದನ್ನು ನಾಲ್ಕು-ಐದು ತುಂಡು ಮಾಡಿ ಒಗೆದರೆ ಪ್ರತಿ ತುಂಡೂ ನಕ್ಷತ್ರ-ಮೀನಾಗಿ ಬೆಳೆಯುತ್ತದೆ. ಅದರಂತೆ ಸೀಳಿದ ಅವಯವ ಎರಡಾಗಿ ಬೆಳೆಯುತ್ತದೆ. ಅಪಘಾತಕ್ಕೆ ಈಡಾದ, ಕಳೆದುಕೊಂಡ ಅವಯವಗಳು ತಿರುಗಿ ಬೆಳೆದುಕೊಳ್ಳುತ್ತವೆ. ಇದೇ ವರ್ಗಕ್ಕೆ ಸೇರಿದ ಕಡಲಸವತೆಗೆ ಇನ್ನೂ ವಿಚಿತ್ರವಾದ ಮರುಬೆಳವಣಿಗೆ ಇದೆ. ವೈರಿಗಳು ದಾಳಿ ಮಾಡಿದಾಗ ತನ್ನ ಶರೀರದೊಳಗಿನ ಎಲ್ಲ ಅವಯವಗಳನ್ನು ಅದರ ಮೇಲೆ ತೂರಿ ತಾನು ಸಂಕಟದಿಂದ ಪಾರಾದ ನಂತರ ತಿರುಗಿ ತನ್ನ ಅನ್ನ-ನಳಿಕೆಗಳನ್ನು ಬೆಳೆಸಿಕೊಳ್ಳುತ್ತದೆ. ಏಡಿಯ ವರ್ಗದಲ್ಲಿ ಒಂದು ತುಂಡಿನಿಂದ ಸಂಪೂರ್ಣವಾಗಿ ಬೆಳೆಯುವ ಏಡಿಯ ಸಾಮರ್ಥ್ಯ ಕುಂಠಿತವಾದರೂ ಕಳೆದುಕೊಂಡ ಅವಯವ ಸುಲಭವಾಗಿ ಬೆಳೆಯುತ್ತದೆ. ಅಂತೆಯೇ ಕಡಲತೀರದಲ್ಲಿ ವಿಚಿತ್ರ ಏಡಿಗಳೆಲ್ಲ ಕಾಣಸಿಗುತ್ತವೆ. ಮುರಿದುಹೋದ ಕಾಲು ಬೆಳೆಯುವ ಏಡಿಯಲ್ಲಿ ತೀರ ಚಿಕ್ಕದಾಗಿ ಕಂಡರೆ, ಕೆಲವು ಏಡಿಗಳಲ್ಲಿ ನಂತರ ಬೆಳೆದ ಕಾಲು ಅತಿ ದೊಡ್ಡದಾಗಿ ಬೆಳೆಯುವ ವಾಡಿಕೆ ಇದೆ. ಕೀಟವರ್ಗಗಳಲ್ಲಿಯೂ ಮುರಿದುಹೋದ, ಕಳೆದುಕೊಂಡ ಕಾಲು, ಸ್ಪರ್ಶ, ಮೀಸೆಗಳು ತಿರುಗಿ ಬೆಳೆಯುತ್ತವೆ.

ಕಪ್ಪೆ-ಮರಿಗಳು ನೀರಿನಲ್ಲಿ ಜೀವಿಸುವಾಗ ಅವುಗಳ ಅಂಗಾಂಗಗಳಿಗೆ ಹಾನಿ

ತಟ್ಟಿದರೆ ಅವನ್ನು ಬೆಳೆಸುವ ಶಕ್ತಿ ಅವಕ್ಕೆ ಇದ್ದರೂ ಪ್ರೌಢ ಕಪ್ಪೆಗಳಲ್ಲಿ ಇಂತಹ ಶಕ್ತಿ ಕುಂಠಿತವಾದಿರುತ್ತದೆ. ಅಂತೆಯೇ ಹಾವಿನ ಬಾಯಿಯಿಂದ ತಪ್ಪಿಸಿಕೊಂಡು ಬಂದ ಕಪ್ಪೆ ತಿರುಗಿ ಕಾಲನ್ನು ಬೆಳೆಸಿಕೊಳ್ಳಲಾರದು. ಹಲ್ಲಿಗಳಲ್ಲಿ ವೈರಿಗಳಿಂದ ಪಾರಾಗಲು ತನ್ನ ಬಾಲವನ್ನು ತುಂಡರಿಸುವ ಶಕ್ತಿ ಇದೆ. ಬೇರ್ಪಡಿಸಿದ ಬಾಲ ಪುಟಿಯುಲು ಪ್ರಾರಂಭಿಸುವದರಿಂದ ವೈರಿಯ ಲಕ್ಷ್ಯ ಅದರ ಕಡೆಗೆ ಸೆಳೆದಾಗ ಹಲ್ಲಿ ಸುರಕ್ಷಿತ ಸ್ಥಳಕ್ಕೆ ಪಾರಾಗಿ ಬದುಕಿಕೊಳ್ಳುವದು. ಕಳೆದುಕೊಂಡ ಬಾಲ ಕಾಲಾಂತರ ದಲ್ಲಿ ತಿರುಗಿ ಬೆಳೆಯುವದು.

ಹಕ್ಕಿಗಳ ಅವಯವಗಳು ತಮ್ಮ ವಿಶಿಷ್ಟಕಾರ್ಯಗಳನ್ನು ನಿರ್ವಹಿಸಲು ಪಕ್ವವಾದಿಯೇ ಬೆಳೆದಿರುವದರಿಂದ ಕಳೆದುಕೊಂಡರೆ ತಿರುಗಿ ಅವು ಬೆಳೆಯಲಾರವು. ಅಂತೆಯೆ ಒಂಟಿಕಾಲಿನ ಕಾಗೆ, ಪಾರಿವಾಳ, ಗುಬ್ಬಚ್ಚಿಗಳಲ್ಲಿ ಮುರಿದ ಚುಂಚಿನ ಹಕ್ಕಿಗಳನ್ನು ಪ್ರತಿದಿನ ನೋಡುತ್ತಿರುತ್ತೇವೆ. ಖುರ, ಕೋಡು, ಉಗುರು, ಕೂದಲುಗಳಂತೆ ಹಕ್ಕಿಗಳ ಗರಿಗಳು ಮಾತ್ರ ಬೆಳೆಯುತ್ತಿರುತ್ತವೆ. ಸಸ್ತನ-ವರ್ಗ ದಲ್ಲಿ ಮರುಬೆಳವಣಿಗೆ ಅತಿ ಸೀಮಿತವಾದಿದೆ. ಅಂತೆಯೇ ದನಕರುಗಳು, ಮಂಗ ಗಳು ಕಳೆದುಕೊಂಡ ಬಾಲವನ್ನು ಮರಳಿ ಪಡೆಯಲಾರವು. ಒಂದೇ ಗುಂಪಿಗೆ ಸೇರಿದ ಜೀವಾಣುಗಳು ನಾಶಹೊಂದಿದರೆ ಮಾತ್ರ ಬೆಳೆದುಕೊಳ್ಳುವವು. ಉದಾಹರಣೆಗೆ ಅಡಿಗೆ ಮಾಡುವಾಗ ಕೈಗೆ ಗಾಯಮಾಡಿಕೊಂಡರೆ, ಅದು ಚರ್ಮಕ್ಕೆ ಮಾತ್ರ ಸೀಮಿತವಾದರೆ, ಹೊಸ ಚರ್ಮ ಬೆಳೆದುಕೊಂಡು ಬಿಡುವದು. ಅದೇ ಮಾಂಸಖಂಡಕ್ಕೂ ತಗಲಿದರೆ ಗಾಯದ ಕಲೆ ಉಳಿದುಕೊಳ್ಳುವದು. ರಕ್ತನಾಳ, ಎಲುವುಗಳ ಸಮೇತವಾಗಿ ಗಾಯವಾಗಿದ್ದರೆ ಆ ಅವಯವ ಶಾಶ್ವತವಾದಿ ಊನ ಆದಿಬಿಡುವದು. ಇದಕ್ಕೆ ಮುಖ್ಯ ಕಾರಣವೆಂದರೆ ಚರ್ಮ, ಮಾಂಸಖಂಡ, ರಕ್ತನಾಳ, ಎಲವುಗಳ ಬೆಳವಣಿಗೆಯ ಕೇಂದ್ರಗಳು ಬೇರೆಬೇರೆಯಾಗಿದ್ದು ಅವು ಒಂದರೊಂದಿಗೆ ಇನ್ನೊಂದು ಸಹಕರಿಸದೇ ಸ್ವತಂತ್ರವಾಗಿ ವರ್ತಿಸುವವು. ಅವು ಗಳನ್ನೆಲ್ಲ ಮಾನವನು ಕೃತ್ರಿಮವಾಗಿ ನಿಯಂತ್ರಿಸುವದನ್ನು ಕಲಿತರೆ ಮುರಿದ ಕೈ-ಕಾಲು, ಕಳೆದುಕೊಂಡ ಕಿವಿ-ಕಣ್ಣುಗಳು ತನ್ನಷ್ಟಕ್ಕೆ ಬೆಳೆದುಕೊಳ್ಳುವವು. ಅಂತಹ ದಿನಗಳು ಬರುವ ತನಕ ದೇವದತ್ತವಾಗಿ ಬಂದ ಅಂಗಾಂಗಗಳನ್ನು ಸಂರಕ್ಷಿಸಿ ಕೊಳ್ಳುವದೇ ಜಾಣತನ.

ಹದಿಮೂರು : ಸರ್ವವ್ಯಾಪಿಗಳು

ಧನಿಕರು ನಿಸರ್ಗದಲ್ಲಿಯೇ ಪ್ರಾಣಿಗಳನ್ನು ನೋಡುವದಕ್ಕಾಗಿ ಆಫ್ರಿಕಾದ ಸಫಾರಿಗೆ ಹೋಗಿ ಅವನ್ನು ಕಂಡು ಆನಂದಿಸಿ ಚಿತ್ರಗಳನ್ನು ಸಂಗ್ರಹಿಸಿ ತರುವರು. ಬೇಟೆಗಾರರಾದವರು ಆಸಾಮಕ್ಕೆ ಆನೆ, ಜೀಪಗಳ ಮೇಲೆ ಹೋಗಿ ಪ್ರಾಣಿಗಳನ್ನು ಕೊಂದು, ವಿವಿಧರೂಪಗಳಲ್ಲಿ ಗೃಹಗಳಲ್ಲಿ ಕಾದಿರಿಸಿ ಆನಂದಿಸುವರು. ಸಿಂಹ-ಸಿಂಹಿಣಿಯರನ್ನು ನೋಡಲು ಗಿರನಾರಕ್ಕೆ ಹೋದರೆ, ಹಕ್ಕಿಗಳನ್ನು ನೋಡಲು ರಂಗನ ತಿಟ್ಟಿಗೆ ಧಾವಿಸುವರು. ದಾಂಡೇಲಿಗೂ ಹೋಗುವರು. ಕಾಡುಗಳಲ್ಲಿಯೇ ಪ್ರಾಣಿಗಳನ್ನು ನೋಡುವ ಸಾಹಸಮಾಡಲಾರದವರು ಮೈಸೂರಿನ ಪ್ರಾಣಿ ಸಂಗ್ರಹಾಲಯದಲ್ಲಿ ಬಂಧಿಸಿಟ್ಟ ಪ್ರಾಣಿಗಳಿಗೆ ಭೆಟ್ಟಿ ಕೊಟ್ಟು ಮಯೂರ-ನೃತ್ಯ ಮಂಗ-ಚೇಷ್ಟೆಗಳನ್ನು ನೋಡಿ ಆನಂದಿಸುವರು. ಆದರೆ ನಮ್ಮಲ್ಲಿ ಬಹುಸಂಖ್ಯಾಕರಿಗೆ ಪ್ರಾಣಿಗಳೆಂದರೆ ಭೀತಿ, ಏನೋ ಜಿಗುಪ್ಸೆ. ಮನೆಯಲ್ಲಿ ಕಂಬಳಿ-ಹುಳು, ಚೇಳು, ಜೊಂಡಿಂಗ ಏನೇ ಬರಲಿ ಚಿಟ್ಟನೆ ಚೀರಿ ಹೊರಗೆ ಓಡುವವರೇ ಹೆಚ್ಚು. ಯಾವ ಹಾವು ಹಿತ್ತಲಲ್ಲಿ ಕಂಡರೂ ಅದು ವಿಷಸರ್ಪವೆಂದೇ ನಿರ್ಧರಿಸಿ ಅದನ್ನು

ಯಮಸದನಕ್ಕೆ ಅಟ್ಟುವ ತನಕ ಶಾಂತಿಯೇ ದೊರೆಯದು. ಕಾಲೇಜು, ವಿಶ್ವವಿದ್ಯಾಲಯಗಳಲ್ಲಿಯ ಪ್ರಾಣಿಸಂಗ್ರಹಾಲಯಗಳಲ್ಲಿಯ ಎಲುವುಗಳನ್ನು, ಫೋರಮೆಲಿನದಲ್ಲಿ ಕಾದಿಟ್ಟ ಪ್ರಾಣಿ-ಶರೀರಗಳನ್ನು ಕಂಡು ಹೆದರಿ ಓಡಿಹೋಗು ವವರಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಅವುಗಳ ಬಗ್ಗೆ ನಮಗಿರುವ ಅಜ್ಞಾನ, ಭಯ. ಕಪ್ಪೆ ಮುಟ್ಟಿದರೆ ಅದರ ಉಚ್ಚೆಯಿಂದ ಕಜ್ಜಿಯಾಗುತ್ತದೆ. ಓತಿಕಾಟ ಕಡಿದರೆ ವಿಷವೇರಿ ಸಾಯುತ್ತೇವೆ. ಇತ್ಯಾದಿ ದಂತಕತೆಗಳನ್ನು ಮಕ್ಕಳಿಗೆ ಹೇಳಿ ಅವೂ ಪ್ರಾಣಿಗಳ ಬಗ್ಗೆ ಜಿಗುಪ್ಸೆ ತಾಳುವಂತೆ ನೋಡಿಕೊಳ್ಳುತ್ತೇವೆ. ಆದರೆ ಅವುಗಳ ನಿತ್ಯಜೀವನದ ಆಗು-ಹೋಗುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಕಥೆ-ಕಾದಂಬರಿ ಓದಿದ್ದಕ್ಕಿಂತ, ಉತ್ತಮ ಚಲಚ್ಚಿತ್ರ ನೋಡಿದ್ದಕ್ಕಿಂತ, ಹೆಚ್ಚಿನ ಆನಂದ ನಮ್ಮದಾಗುತ್ತದೆ.

ಸಾವಿರಾರು ಪ್ರಾಣಿಗಳನ್ನು ಬೇಟೆಯಾಡಿದ ವಿದೇಶೀಯ ಹೆಸರಾಂತ ಬೇಟೆ ಗಾರನೊಬ್ಬ ಗುರಿ ಇಟ್ಟು ಹೆಣ್ಣು-ಚಿಗರೆಯೊಂದನ್ನು ಕೆಡವಿ, ತರಲು ಓಡಿದಾಗ, ಮರಣಶಯ್ಯೆಯಲ್ಲಿದ್ದ ಚಿಗರೆ-ಮಾತೆಯ, "ನನ್ನ ಕೊಲೆಯಿಂದ ಆನಂದ ನಿನ್ನ ದೊಬ್ಬನದೇ ಆಯಿತು. ನನ್ನನ್ನು ಬದುಕಬಿಟ್ಟಿದ್ದರೆ ಆನಂದ ನಮ್ಮಿಬ್ಬರದೂ ಆಗುತ್ತಿರಲಿಲ್ಲವೇ" ಎಂಬ ವೇದನೆಯ ಭಾವನೆ ತುಂಬಿದ ಕಣ್ಣುಗಳು ಕೇಳಿದಂತೆ ಭಾಸವಾಯಿತಂತೆ. ತುಂಬಿದ ಕಣ್ಣುಗಳಿಂದ ಅದರ ಬೆನ್ನು ನೇವರಿಸುತ್ತ ತಾನು ಇನ್ನೆಂದೂ ಬೇಟೆಯಾಡುವದಿಲ್ಲವೆಂದು ಪ್ರತಿಜ್ಞೆಮಾಡಿ ಹಾಗೆಯೇ ನಡೆದು ಕೊಂಡ. ಪ್ರಾಣಿಗಳ ಬಗೆಗಿನ ಈ ಮರುಕ ನಮ್ಮದಾಗಬೇಕು.

ತೆರದ ಕಣ್ಣು, ತೆರೆದ ಮನಸ್ಸಿನಿಂದ ನಮ್ಮ ಪರಿಸರದ ಆಗು-ಹೋಗು ಗಳನ್ನು ನಿರೀಕ್ಷಿಸಿದಾಗ ಸಾವಿರಾರು ಜೀವಿಗಳು ಪ್ರತಿ ನಿಮಿಷಕ್ಕೂ ಜೀವನದ ಆಟ ನಡೆಸಿರುವದು ಲಕ್ಷ್ಯಕ್ಕೆ ಬಾರದೇ ಇರದು. ಗೃಹಿಣಿ ಅಡಿಗೆಯಲ್ಲಿ ತೊಡಗಿದಾಗ ಸುತ್ತಮುತ್ತಲಿನ ಜೀವಿಗಳು ತಮ್ಮ ಕೆಲಸದಲ್ಲಿ ಮೈಮರೆತಿರುತ್ತವೆ. ನೊಣ ಒಂದು ಎಲ್ಲಿಂದಲೋ ಹಾರುತ್ತ ಬಂದು ಗೃಹಿಣಿ ಕೆಡವಿದ ಸಕ್ಕರೆಯ ಹರಳನ್ನು ತನ್ನ ಎಂಜಲಿನಲ್ಲಿ ಕರಗಿಸಿ ಸೇವಿಸಿ, ತೊಳೆದಿಟ್ಟ ಪಾತ್ರೆಯ ಮೇಲೆ ವಿರಾಜಿಸಿ, ಕಾಲು ಗಳಿಂದ ಮುಖ ಒರೆಸಿ ಕುಡಿಮೀಸೆಗಳನ್ನು ತಿರುವಿ, ರೆಕ್ಕೆಗಳನ್ನು ಬಡಿಯುವಾಗ ನೊಣ-ಕವಾರಿಯನ್ನು ಕಂಡು ಹಿಂಬಾಲಿಸಿ ಕಣ್ಮರೆಯಾಗುವದು. ಹೆಣ್ಣು-ಜಿರಳೆ ಯೊಂದು ತತ್ತಿ-ಚೀಲ ಹೊತ್ತು ಅದನ್ನು ಯಾರಿಗೂ ಕಾಣದಂತೆ ಸಂಗ್ರಹಿಸಲು

ಸ್ಥಳವನ್ನು ಅರಸುತ್ತ ಹೋಗುವದು. ಗಂಡು-ಜಿರಳೆಯೊಂದು ರೆಕ್ಕೆಗಳನ್ನು ಬಡಿದು ಹೆಣ್ಣನ್ನು ಕರೆದರೂ ಬಾರದಿದ್ದಾಗ ಅದನ್ನು ಬೆನ್ನಟ್ಟಿ ಹಾರುವದು. ನೂರಾರು ಇರುವೆಗಳು ಸೈನಿಕ ಶಿಸ್ತಿನಿಂದ ತೇರನ್ನು ಎಳೆಯುವಂತೆ ಸತ್ತ ಕೀಟವೊಂದನ್ನು ತಮ್ಮ ಗೂಡಿಗೆ ಒಯ್ಯುವದರಲ್ಲಿ ವ್ಯಸ್ತವಾಗಿರುತ್ತವೆ. ಅನ್ನಕ್ಕಾಗಿ ತೆಗೆದ ಅಕ್ಕಿಯೊಳಗಿನ ಸೊಂಡಿಲು-ಕೀಟ ಮಾನವ-ವೈರಿಯಿಂದ ಬದುಕಿಕೊಳ್ಳಲು ಕಾಳುಗಳಲ್ಲಿ ಕಣ್ಮರೆಯಾಗಿಬಿಡುವದು. ಗೃಹಿಣಿ ಅಕ್ಕಿಯಲ್ಲಿ ನೀರು ಸುರಿದಾಗ ಪ್ರಳಯಕಾಲ ಬಂದಂತೆ ಕೀಟ, ಕಾಳೊಳಗಿದ್ದ ಮೊಟ್ಟೆ-ಮರಿಗಳೆಲ್ಲ ನಾಶವಾಗಿಬಿಡುವವು. ಉಸುಳಿ ಮಾಡಲು ಹೆಸರು, ಉದ್ದು, ಮಸೂರಿ, ಅಲಸಂದೆಗಳ ಡಬ್ಬಿಯ ಬಾಯಿ ತೆರೆದಾಗ ಹೊರಗೆ ಬರಲಾರದೇ ಒದ್ದಾಡುವ ಧಾನ್ಯ-ಕೀಟಗಳು ದಾಸ್ಯದ ಸಂಕೋಲೆಗಳನ್ನು ಕಳೆದುಕೊಂಡು ಸ್ವಾತಂತ್ರ್ಯಗೀತ ಹಾಡುತ್ತ ಹಾರಿಬಿಡುವವು! ಅವುಗಳ ಮಕ್ಕಳು ಮರಿಗಳು ಮಾತ್ರ ಧಾನ್ಯದೊಂದಿಗೆ ಬೆಂದು ಶುದ್ಧ ಶಾಕಾಹಾರಿಗಳಿಗೂ ಮಾಂಸದ ಉಚ್ಛಿಷ್ಟವನ್ನು ಒದಗಿಸುವವು. ಮೂಲೆಯೊಂದರಲ್ಲಿ ಒಂಟಿ ಜೇಡ ವಿಶ್ವದಲ್ಲಿಯೇ ಅತಿ ಸೂಕ್ಷ್ಮ ಎಳೆಯಿಂದ ಕೂಡಿದ ಗೃಹ ಕಟ್ಟಿ ಬೇಟೆಗೆ ಹೊಂಚು ಹಾಕಿ ಕುಳಿತಾಗ ಎಲ್ಲಿಂದಲೋ ಸ್ವೇಚ್ಛಾಚಾರಿಯೊಂದು ನೊಣ ಹಾರುತ್ತ ಬಂದು ಬಲೆಯಲ್ಲಿ ಸಿಕ್ಕಿಕೊಳ್ಳುವದು. ಆರ್ತವಾಗಿ ಬಿಡುಗಡೆಗಾಗಿ ಯತ್ನಿಸುವ ಈ ಕೀಟವನ್ನು ಜೇಡ ಇನ್ನಷ್ಟು ಎಳೆಗಳಿಂದ ಬಲವಾಗಿ ಬಂಧಿಸುವದು. ಕೊನೆಯಲ್ಲಿ ನೊಣ ಸೋತು ಹೋರಾಟ ನಿಲ್ಲಿಸಿದಾಗ ಜೇಡ ಅದರ ಶರೀರದೊಳಗಿನ ದ್ರವ ಹೀರಿ ಮೃತ ಶರೀರ ಬಿಸುಟು, ಹರಿದ ಬಲೆಯನ್ನು ಸರಿಪಡಿಸಿ. "ಇನ್ನೊಂದು ಬರಲಿ" ಎಂದು ತನ್ನ ತಪಸ್ಸು ಮುಂದುವರಿಸುವದು.

ಅಡಿಗೆಮನೆಯಿಂದ ಬಚ್ಚಲಿಗೆ ಹೋದರೆ ಅಲ್ಲಿ ಒಂದು ಬೇರೆಯೇ ಜಗತ್ತು ಕಾಣಿಸುತ್ತದೆ. ಪರ್ಣಗಳನ್ನು ಚನ್ನಾಗಿ ಮೆದ್ದು ಬಂದ ಕಂಬಳಿ-ಹುಳ ಗೂಡನ್ನು ಕಟ್ಟಲು ಸ್ಥಳ ಹುಡುಕುತ್ತ ಒಳಗೆ ಬಂದಿರುತ್ತದೆ. ಪ್ರತಿ ಇಂಚು ಮುಂದವರೆದು ಈ ಸ್ಥಳ ತನ್ನ ಅರಮನೆಗೆ ಯೋಗ್ಯವಾಗಿದೆಯೇ ಎಂದು ಪರಾಮರ್ಶಿಸುತ್ತದೆ. ಕೊನೆಗೆ ಯಾರ ದೃಷ್ಟಿ, ಕೈ ಮುಟ್ಟದ ಸ್ಥಳದಲ್ಲಿ ಎಂಜಲಿನಿಂದ ನಯವಾದ ರೇಶಿಮೆ ದಾರದ ಗೃಹವನ್ನು ತನ್ನ ಸುತ್ತಲೂ ನಿರ್ಮಿಸಿ, ವಿಶ್ರಾಂತಿಸಿ, ಪತಂಗದ ರೂಪ ಪಡೆದು ನಿಸರ್ಗದಲ್ಲಿ ಕಣ್ಮರೆಯಾಗಿಬಿಡುವದು. ಜೀರುಂಡೆಗಳು ಹಂಡೆ, ಕೊಡ ಚೊಂಬು, ಹೌದುಗಳ ಸಂದಿಯಲ್ಲಿ ಅಡಗಿ ಕುಳಿತು ಕಿರ್ ಕಿರ್ ಎಂದು ತನ್ನ

ಭೈರವರಾಗ ಹಾಡಲು ಪ್ರಾರಂಭಿಸಿಬಿಡುವದು. ತಾವು ಇದ್ದ ಸ್ಥಳದಲ್ಲಿ ಸಂತೆ ಗೂಡಿದ ಕರಿನೊಣಗಳು ತಮಗಿಷ್ಟು ಸ್ಥಳ ಸಾಲದು ಎಂದು ತಮ್ಮೊಳಗೆ ಕಾದಾಡುತ್ತಿರುವವು. ಹಂಡೆ, ಹೌದುಗಳಲ್ಲಿ ಸೊಳ್ಳೆಗಳ ಮೊಟ್ಟೆಗಳೊಳಗಿಂದ ಮರಿಗಳು ಹೊರಗೆ ಬಂದು ಲೀಲಾಜಾಲವಾಗಿ ನೀರಾಟದಲ್ಲಿ ತೊಡಗಿರುತ್ತವೆ.

ಬೈಠಕ-ಖಾನೆಯಲ್ಲಿ ಇದ್ದ ಟೇಬಲಿನ ಹಸಿ ಕಟ್ಟಿಗೆಯಲ್ಲಿ ತೊಗಟೆ-ಕೀಟ ಸೇರಿಕೊಂಡು ಬುದ್ಧ-ಭಿಕ್ಷುಗಳಂತೆ ಪ್ರತಿ ಸದಸ್ಯನಿಗೂ ಒಂದೊಂದು ಕೊರಡು ಗುಹೆಯನ್ನು ದವಡೆಗಳಿಂದಲೇ ಕೊರೆದು ಹುಡಿಯನ್ನು ಹೊರಚೆಲ್ಲುವದರಲ್ಲಿ ತೊಡಗಿರುವದು. ಅರಮನೆಯಂತೆ ವಿರಾಮಕ್ಕೆ ಬೇರೆಯೇ ಮಹಲು, ಮಕ್ಕಳ ಆಟಕ್ಕೆ ಬೇರೆಯೇ ಸ್ಥಳ, ಶಯನಾಗಾರಗಳನ್ನು ನಿರ್ಮಿಸುವದು. ಕೊರಡಿನಲ್ಲಿದ್ದ ಈ ಅತಿ ಸೂಕ್ಷ್ಮ ವೈರಿ ಮಾನವರಿಗೆ ಕಾಣದ್ದರಿಂದ ಅದು ಒಳಗಿದ್ದೇ ಎಲ್ಲ ಕುಚೋದ್ಯ ನಡಿಸಿ ಟೇಬಲ್ಲು ಅರ್ಧ ನಾಶವಾದಾಗಲೇ ಮಾನವನು ಕಣ್ಣು ತೆರೆಯುವನು. ಅಲ್ಲಿಯ ತೂಗುದೀಪಕ್ಕೆ ಆಕರ್ಷಿತವಾದ ಗೆದ್ದಲು, ಪ್ರಣಯಿ-ಇರುವೆ ಪತಂಗಗಳು ಹಾರುತ್ತ ದೇವರನಾಮಸ್ಮರಣೆ ಮಾಡುವವರಂತೆ, ದೇವರ ಪ್ರದಕ್ಷಿಣೆ ಹಾಕುವವರಂತೆ ಸುತ್ತುವವು. ಇದೇ ಸುಸಂಧಿಗಾಗಿ ಕಾಯುತ್ತ ಕುಳಿತ ಹಲ್ಲಿಗಳು ಕದ್ದು ಬೇಟೆ ನಡಿಸಿ ತಮ್ಮ ಹೊಟ್ಟೆ ಹೊರಕೊಳ್ಳುವವು. ಅನ್ನದೇವರು ದರ್ಶನ ಕೊಟ್ಟ ನಂತರ ಗುಂಡು ಹೆಣ್ಣು ಮುಟ್ಟಾಟ ನಡೆಸುವವು. ಮಧ್ಯೆ ಖಳನಾಯಕನು ಪ್ರವೇಶಿಸಿ ರಮಣಿಗೆ ತನ್ನ ವಶವಾಗುವಂತೆ ಆಜ್ಞೆ ಕೊಟ್ಟಾಗ ಕೂಗಾಡಿ, ಚೀರಾಡುತ್ತ ಒಂದನ್ನೊಂದು ಆಕ್ರಮಿಸಲು ಧಾವಿಸುತ್ತವೆ. ಬಾಗಿಲು-ಸಂದಿಯಲ್ಲೊ, ಬೇರಾವ ಸಂದಿಯಲ್ಲೊ ಮನೆಮಾಡಿಕೊಂಡು ಇದ್ದ ಕಣ್ಣು-ಕಪ್ಪಡಿಗಳು ಒಮ್ಮೆ ರೆಕ್ಕೆಗಳನ್ನು ಬಡಿದುಕೊಂಡು, ನೆಳೆಹೊರೆಯವರಿಗೆ ಕೇಳುವಂತೆ ಕೂಗಿ, ಮರಿಗಳನ್ನು ಎದೆಗೆ ಅವಚಿಕೊಂಡು ವಾಯುಮಂಡಲದಲ್ಲಿ ಹಾರುತ್ತ ಹೆಣ್ಣಿನತ್ತ ಸಾಗುವವು

ಮಲಗುವ ಕೋಣೆಯಲ್ಲಿ ದಿನವೆಲ್ಲ ವಿಶ್ರಾಂತಿ ಪಡೆದು ಬೇಸತ್ತ ಸೊಳ್ಳೆಗಳು ಹಾಡನ್ನು ಗುಂಯ್‌ಗುಡುತ್ತ. ಹಾರುತ್ತ, ಕೊಡ್ರುತ್ತ ಮಾನವನ ರಕ್ತಕ್ಕೆ ಆಕರ್ಷಿವಾಗಿ, ಅವನ ಕಣ್ಣಲ್ಲಿ ಮಣ್ಣೆರಚಿ ಅವನ ಕೂದಲಿನ ಕಾಡಿನಲ್ಲಿ ಸಿಕ್ಕಿ ಹಾಕಿಕೊಳ್ಳದಂತೆ ಎಚ್ಚರ ವಹಿಸಿ ಮೆತ್ತಗೆ ಹತ್ತಿದ ದೇಹದ ಭಾಗ ಹೀರಿ ತನ್ನ ರಕ್ತದಾಹ ಪೂರೈಸಿಕೊಳ್ಳುತ್ತದೆ. ಅತಿ ಆಸೆಯಿಂದ ಅತಿ ರಕ್ತ ಹೀರಿದ ಸೊಳ್ಳೆ

ಹಾರಲಾರದೆ ಇದ್ದಲ್ಲಿಯೇ ಇದ್ದು ಅಪಘಾತಕ್ಕೆ ಗುರಿಯಾಗಿ ಸಾಯಲೂಬಹುದು. ಬಹುಸಂತಾನಿ ತಗಣಿಯಂತೂ ತನ್ನ ಮಕ್ಕಳು ಮರಿಮಕ್ಕಳೊಂದಿಗೆ ಮಾನವನು ಸದಾಕಾಲ ಬಳಸುವ ಖುರ್ಚಿ, ಟೇಬಲು, ಹಾಸಿಗೆಗಳಲ್ಲಿಯೇ ಸಂಸಾರ ಹೂಡಿ, ಅವನ ರಕ್ತದ ಮೇಲೆ ಜೀವಿಸಿದಾಗ, ಆತ ಅಸಹಾಯನಾಗಿ ಅದರ ವಂಶವನ್ನೇ ನಾಶಮಾಡುತ್ತೇನೆಂದು ಹೊರಟಾಗ ತಗಣಿಯ ಕುಟುಂಬ ಅಲ್ಲಿಯೇ ಇದ್ದು ನಗುತ್ತಿರುತ್ತದೆ!

ಮನೆಯ ಹೊರಗೆ ಕಾಲಿಟ್ಟರೂ ಪ್ರಾಣಿಗಳ ಇನ್ನೊಂದು ರಾಜ್ಯ. ತಾನು ಅರಳಿ ಜಗತ್ತಿಗೇ ಸುವಾಸನೆ ಬೀರುವ ಹೂವಿಗೆ ದುಂಬಿಯೊಂದು ಎಲ್ಲಿಂದಲೊ ಹಾರಿಬಂದು ಚಂಚಲಾಕ್ಷಿಯಾಗಿ ಅತ್ತಿತ್ತ ನೋಡಿ ಮಧುವನ್ನು ಹೀರಿ ಇನ್ನೊಂದಕ್ಕೆ ಜಿಗಿಯುವದು. ಜೇನೊಂದು ಬಂದು ಆಹಾರ ಪೂರೈಸುವ ಹೂವಿಗೆ ಪ್ರದಕ್ಷಿಣೆ ಹಾಕಿ ಪರಾಗವನ್ನು ಪ್ರಸಾದವೆಂದು ಕಾಲಿಗೆ ಸಿಕ್ಕಿಸಿಕೊಂಡು ಇನ್ನೊಂದು ಹೂವಿಗೆ ಭೆಟ್ಟಿಕೊಡುವದು. ಎಲ್ಲರ ಕಣ್ಣಿಗೆ ಮಣ್ಣೆರಚಿ ಅವಿತು ಕುಳಿತ ಪಟ್ಟೆಯೊಂದು ತನ್ನ ವರ್ಣಮಯ ರೆಕ್ಕೆಗಳನ್ನು ಪ್ರದರ್ಶಿಸುತ್ತ ಉದ್ದ ಜಿಗಿತದ ತಾಲೀಮು ಮಾಡುವದು ಯಾವ ಹೂವನ್ನು ತನ್ನದಾಗಿ ಮಾಡಿಕೊಳ್ಳಲಿ ಎಂದು ನಿರ್ಧರಿಸಿದ ಚಂಚಲ ಪಾತರಗಿತ್ತಿ ಎಲ್ಲ ಹೂಗಳನ್ನೂ ಸ್ಪರ್ಶಿಸಿ ಕಣ್ಮರೆಯಾಗುವದು. ನಟನೆಯ ಭಕ್ತನಂತೆ ಕುಳಿತ ಶಿವನ-ಕುದುರೆ ತನ್ನ ಮುಂಗಾಲುಗಳಿಂದ ಒಂದೊಂದೇ ಹುಳದ ಬೇಟೆಯಾಡಿ, ಮಕ್ಕಳು ಕಬ್ಬು ಜಗಿದಂತೆ ತನ್ನ ಬೇಟೆಯನ್ನು ಸ್ವಾಹಾಮಾಡುವದರಲ್ಲಿ ಮೈಮರೆಯುತ್ತದೆ. ಕಣಜ ಗೂಡು ಕಟ್ಟಲು ಮಣ್ಣು ಶೇಖರಿಸುತ್ತದೆ. ಗುಬ್ಬಚ್ಚಿ ಕಸಕಡ್ಡಿಗಳನ್ನು ಕಚ್ಚಿ ಹಾರುತ್ತದೆ. ಗೂಡು ಕಟ್ಟಲು ಗಂಡ ಸಹಕರಿಸಲಿಲ್ಲವೆಂದು ಹೆಂಡತಿ ಮೂದಲಿಸಿದಳೆಂದು ಕಾಣುತ್ತದೆ. ಇಬ್ಬರಲ್ಲಿ ವಾಗ್-ಯುದ್ಧ ಪ್ರಾರಂಭವಾಯಿತು, ಕಾಗೆಯೊಂದು ಕರ್ಕಶವಾಗಿ ಕೂಗಿ ತನ್ನ ಪ್ರಾಂತದಲ್ಲಿ ಪ್ರವೇಶಿಸಿದ ಪರಕೀಯನನ್ನು ಓಡಿಸಿತು. ನೆಟ್ಟವರಿಗೂ ತಿನ್ನಲು ಲಭ್ಯವಿರದ ದಾಳಿಂಬವನ್ನು ಇಣಚಿ ಕೈ, ಹಲ್ಲುಗಳಿಂದ ಸುಲಿದು ರುಚಿ ನೋಡುತ್ತದೆ. 'ಗೊಟರ್ ಗುಕ್' ಎಂದು ಪಾರಿವಾಳ ತನ್ನ ಅರ್ಧಾಂಗಿಯನ್ನು ಪ್ರಣಯಕ್ಕೆ ಕರೆಯುತ್ತದೆ. ಹೊಸದಾಗಿ ಹುಟ್ಟಿದ ಮರಿಗಳಿಗೆ ಹುಳ-ಹುಪ್ಪಡಿ ಆರಿಸಲು ಸುಲಭವಾಗುವಂತೆ ತಾಯಿಕೋಳಿ ಮಣ್ಣನ್ನು ಕೆದಕಿ ಹರವುತ್ತವೆ. ಇಂದು "ತಂದೂರಿ ಚಿಕನ್"ದ ಭೋಜನ ಸಿಕ್ಕೀತೇ ಎಂದು ಗಗನವಿಹಾರಿ ಹದ್ದಿನ ಬಾಯಲ್ಲಿ ನೀರು ಬಿಟ್ಟಿತು. ಇದಾವದನ್ನೂ

ಲೆಕ್ಕಿಸದೆ ನೆರೆಮನೆಯು ಇಲಿಯೊಂದು ಮರಿಗಳನ್ನು ಇಡಲು ಈಚೆ ಮನೆಗೆ ಬಂದು ಸೇರಿಕೊಂಡಿತು.

ಸಾಕು-ಪ್ರಾಣಿಗಳಿಗೆ ಆಹಾರ ಒದಗಿಸುವದು, ಅವುಗಳಿಂದ ಸೇವೆ ಪಡೆಯುವದರ ಹೊರತಾಗಿ ಅವುಗಳ ಜೀವನಕ್ರಮವನ್ನು ವೀಕ್ಷಿಸಲು ನಮಗೆಲ್ಲಿ ಬಿಡುವಿದೆ? "ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ" ಎಂಬ ಗಾದೆಯ ಮಾತು ಎಲ್ಲರೂ ಬಲ್ಲವರಾದರೂ ಅದನ್ನು ನೋಡುವ ತಾಳ್ಮೆ ತೋರಿಸಿದ ಪುಣ್ಯಾತ್ಮರು ಎಷ್ಟು ಜನ ಇದ್ದಾರೆ? ಬಲೆಯಲ್ಲಿ ಇಲಿ ಹಿಡಿದು ಓಡಿಹೋಗಲು ಆಸ್ಪದವಿಲ್ಲದಲ್ಲಿ ಇಲಿ ಬೆಕ್ಕುಗಳನ್ನು ಬಿಟ್ಟು ಸಾವು-ಬದುಕುಗಳ ಎರಡು ಮುಖಗಳು ಒಂದೆಡೆಗೇ ನೋಡುವಾಗ ಅನಿಸುವ ವೈಚಿತ್ರ್ಯ ಹೇಗಿರುತ್ತದೆ? ಬೆಕ್ಕಿನ ಪ್ರಣಯಚೇಷ್ಟೆ ಕಂಡವರಿದ್ದಾರೆಯೋ? ಪ್ರಿಯತಮ ಎಲ್ಲಿಂದಲೋ ಕರೆಕೊಟ್ಟಾಗ, ಅದು ಮಂತ್ರ ಮುಗ್ಧವಾದಂತೆ ಮನೆಯಿಂದ ಜಾರಿಕೊಂಡು ಹಿಂಬಾಲಿಸುತ್ತದೆ. ಆ ಪೊದೆ ಈ ಪೊದೆ ಶೋಧಿಸಿ ಕೊನೆಗೆ ಏಕಾಂತಸ್ಥಳವೊಂದನ್ನು ಗೊತ್ತುಮಾಡಿಕೊಂಡು ಕಾಮ-ಕೇಳಿ ಮುಗಿಸಿ. ಕಳ್ಳಹೆಜ್ಜೆ ಹಾಕುತ್ತ ಮನೆಯವರಿಗೆ ಸಂಶಯ ಬಾರದಂತೆ ಹಿಂದಿರುಗುತ್ತದೆ. ಮಾರ್ಜಾಲ-ಪ್ರಣಯಿಗಳು ಸುಖಸಂಸಾರ ನಡೆಸುವಾಗ, ಇನ್ನೊಂದು 'ಕಾಮಿ'ಯ ಕಣ್ಣು ರೂಪಸಿಯ ಮೇಲೆ ಬಿದ್ದಾಗ ಒಂದನ್ನೊಂದು ಹೆದರಿಸುತ್ತ, ಬೆದರಿಸುತ್ತ ಕೊನೆಗೆ ಕಚ್ಚಾಟ-ಚೀರಾಟ ಪ್ರಾರಂಭಿಸುತ್ತವೆ. ಹೆಣ್ಣು ಗೆದ್ದವನ ಪತ್ನಿಯಾದರೆ ಸೋತವನು ಮುಖ ಮುಚ್ಚಿಕೊಂಡು ಎಂದಿಗೂ ಹಿಂದಿರುಗದೆ ಕಂಬಿಕಿತ್ತು ಬಿಡುತ್ತಾನೆ. ಬಹುಶಃ ಗಂಡು ಹೆಣ್ಣಿನಲ್ಲಿ ಪ್ರೇಮಭಿಕ್ಷೆ ಬೇಡುವದು ವಾಡಿಕೆಯಾದರೂ ಕಾವಿಗೆ ಬಂದ ಹೆಣ್ಣಾಡು 'ಆ ಭಂಯ್‌ಽಽ' ಎನ್ನುತ್ತ ಗಂಡನ್ನು ಸ್ಪರ್ಶಿಸುತ್ತ ಬೇಡಿಕೊಳ್ಳುತ್ತದೆ. ಇದನ್ನು ಸಹಿಸದ ಇನ್ನೊಂದು ಗುಡು ದ್ವಂದ್ವಕ್ಕೆ ಇಳಿಯುತ್ತದೆ. ಕೋಡಿಗೆ ಕೋಡು ಬಡಿದು, ಹಣೆಗೆ ಹಣೆ ಜಬ್ಬಿ, ಒಂದು ಇನ್ನೊಂದನ್ನು ಆಕ್ರಮಿಸುತ್ತದೆ. ಎರಡೂ ಗಂಡಾಡುಗಳು ತಮ್ಮ ಹಿಂಗಾಲುಗಳ ಮೇಲೆ ನಿಂತು ಕಾದಾಟವನ್ನು ಮುಂದುವರಿಸುವವು. ಕೊನೆಗೆ ಒಂದಕ್ಕೆ ಹೆಣ್ಣು ದೊರೆತರೆ ಇನ್ನೊಂದು ಕೋಡನ್ನು ಕಳೆದುಕೊಳ್ಳಬಹುದು. ಕುಕ್ಕುಟಗಳಲ್ಲಿಯೂ ವಶೀಕರಿಸಲು ಹಿಂಬಾಲಿಸುವ ಗಂಡುಗಳಿವೆ. ಹೆಣ್ಣು ಎಷ್ಟೇ ವಿರೋಧಿಸಿದರೂ, ಅದನ್ನು ಪುಸಲಾಯಿಸಿ, ಹೆದರಿಸಿ ಬೆದರಿಸಿ ಕೊನೆಗೆ ಹಿಂಬಾಲಿಸಿ ಕ್ಷಣಮಾತ್ರದ ಸಂಭೋಗ ನಡೆಸಿದಾಗಲೇ ಅವಕ್ಕೆ ತೃಪ್ತಿ! ಇದನ್ನು ಕಂಡು ರೊಚ್ಚಿಗೆದ್ದ ಗಂಡು

ಕೋಳಿಯೊಂದು ಮೇಲೇರಿ ಬಂದಾಗ ಕಂಠ-ಗರಿಗಳನ್ನು ಉಬ್ಬಿಸಿ ಕಾಳಗ ಪ್ರಾರಂಭವಾಗುವದು. ಸೋತು ಹಿಂದೇಟು ಹಾಕುವ ಗುಡಿಸ ಒಂದೆರಡು ಪುಚ್ಛಗಳನ್ನು ಹೊರಗೆಳೆದಾಗಲೇ ಇನ್ನೊಂದಕ್ಕೆ ಸಮಾಧಾನ. ಕೆಂಪು ಮುಖದ ಕೋತಿ ಸಾಹಸದಲ್ಲಿ ಹೆಸರುವಾಸಿ. ತಿಂಡಿಯಂತೆ ಕಂಡ ಪೊಟ್ಟಣವೊಂದನ್ನು ಎತ್ತಿಕೊಂಡು ಹೋಗಿ ಅದು ತಿಂಡಿಯಲ್ಲದಿದ್ದರೆ ಅದರಿಂದ ಆಟವಾಡಲು ಪ್ರಾರಂಭಿಸುವದು. ಇವುಗಳ ಮರಿಗಳ ಪಾಲನೆ, ಹೇನು ಹೆಕ್ಕಿಕೊಳ್ಳುವದು ಎಲ್ಲರೂ ಅರಿತ ವಿಷಯ. ಮಾನವನ ಹತ್ತಿರದ ಸಂಬಂಧಿಗಳಾದಿದ್ದರಿಂದಲೋ ಏನೋ ಅವಕ್ಕೆ ಕಾಮಚೇಷ್ಟೆ ಎಂದರೆ ಸಿಗರೇಟು ಸೇದಿದಂತೆ! ಗಂಡು ಕೇಳಿದಾಗೊಮ್ಮೆ ಹೆಣ್ಣು ವಿರೋಧವಿಲ್ಲದೆ ತನ್ನನ್ನೊಪ್ಪಿಸಿಬಿಡುವದು. ಅದರಿಂದ ಅವಕ್ಕೆ ಹೆಚ್ಚಿನ ಆನಂದವಾದಂತೆ ಅನಿಸದಿದ್ದರೂ ಜೀವನದ ಒಂದು ಅವಿಚ್ಛಿನ್ನಭಾಗವೆಂದು ಒಪ್ಪಿಕೊಂಡಂತೆ ಇದೆ! ಆದರೆ ಪರಕೋತಿ ಕೆಟ್ಟ ದೃಷ್ಟಿಯನ್ನು ಗೃಹಿಣಿ-ಕೋತಿಯ ಮೇಲೆ ಹಾಕಿದರೆ ಸಾಕು ಎರಡೂ ಬಣಗಳಲ್ಲಿ ಕಾದಾಟ ಪ್ರಾರಂಭವಾಗುತ್ತದೆ. ಅಂತಹ ಪ್ರಸಂಗದಲ್ಲಿ ಬಾಲ ತುಂಡಾಗುವದು, ಕಾಲು ಮುರಿದು ಹೋಗುವದು. ಉಳಿದ ಸಸ್ತನಿ-ಪ್ರಾಣಿಗಳಂತೆ ಆಕಳು-ಎಮ್ಮೆಗಳು ಋತುಕಾಲವನ್ನು ಅನುಭವಿಸುತ್ತವೆ. ಅವುಗಳಲ್ಲಿ ಸಂಯೋಗದ ಬಗ್ಗೆ ಕಟ್ಟುನಿಟ್ಟು ಇಲ್ಲ. ಸೂಕರ ವರ್ಗದಲ್ಲಿ ತಾಯಿಯೇ ಪ್ರೇಯಸಿಯಾಗಬಹುದು. ವರುಷಕ್ಕೊಮ್ಮೆ ಕಾವಿಗೆ ಬರುವ ನಾಯಿಗಳಿಗೆ ಹೆಣ್ಣುನಾಯಿಯನ್ನು ಹಿಂಬಾಲಿಸುವದೇ ವೃತ್ತಿಯಾಗಿಬಿಡುತ್ತದೆ. ಗಂಡಸರಲ್ಲಿ ನಾಯಿ-ಜಾತಿ ಎಂದಂತೆ ಒಂದೇ ಹೆಣ್ಣುನಾಯಿಯನ್ನು ನಂಬಿದ ಗಂಡುನಾಯಿಗೆ ಶ್ರೀರಾಮವಂಶಜ ಎಂದು ಶ್ವಾನವರ್ಗ ಸಂಬೋಧಿಸುತ್ತದೋ ಏನೋ!

ನಾವು ಎಲ್ಲಿಗೇ ಹೋಗಲಿ, ಏನೇ, ಮಾಡಲಿ, ಪ್ರಾಣಿಗಳ ಜೀವನದಾಟ ನೋಡಿ ನಲಿಯುವದು ಸಾಧ್ಯವಿದೆ. ಗುಡ್ಡ, ಕಾಡು, ಕೊಳ್ಳ, ಸರೋವರ, ಕಡಲುಗಳಲ್ಲಿ ಅವುಗಳಲ್ಲಿಯೇ ಸೀಮಿತವಾದ ಪ್ರಾಣಿಗಳು ಕಣ್ಣಿಗೆ ಬೀಳುವವು. ಮಳೆಗಾಲದಲ್ಲಿ ತಾತ್ಪೂರ್ತಿಕವಾಗಿ ನಿರ್ಮಿತವಾದ ಹೊಂಡ ಸರ್ಕಸ್ ಡೇರೆಯಂತೆ! ಹಗುರವಾದ ಉದ್ದಕಾಲಿನ ಕೀಟ ಬಂದು ನೀರ ಮೇಲೆ ಅತ್ತಿಂದಿತ್ತ ಓಡಾಡುವದು. ನೀರ ತಗಣಿಯೊಂದು ಶ್ವಾಸನಳಿಕೆಯೊಂದನ್ನು ಹೊರಚಾಚಿ ಹವೆ ಸಂಗ್ರಹಿಸಿ ನೀರಿನಾಳಕ್ಕೆ ಮುಳುಗುವದು. ಮರಿಕಪ್ಪೆಗಳು ತಮಗೆ ಭೂಖಂಡಕ್ಕೆ ಜಿಗಿಯುವ ಅವಕಾಶ ಎಂದು ಸಿಕ್ಕೀತು ಎಂದು ಆತಂತದಿಂದ ಅಲ್ಲಿ ಇಲ್ಲಿ ಓಡಾಡುವವು,

ಮೀನುಗಳು ನೀರೇ ಸ್ವರ್ಗವೆಂದು ಸತತವಾಗಿ ಈಸುವ ಸ್ಪರ್ಧೆಯಲ್ಲಿ ಭಾಗ ವಹಿಸುವವು. ನೀರಿನಲ್ಲಿ ವಾಸಿಸುವ ಕೊಡತಿ-ಕೀಟದ ಮರಿ ತನ್ನ ಉದ್ದ ನಾಲಿಗೆಯನ್ನು ಹೊರಚಾಚಿ ಮೀನದ ಬೇಟೆಯಾಡಿ ಹಸಿವು ಹಿಂಗಿಸಿಕೊಳ್ಳುವದು. ಒಂದು ದಿನ ಅಪ್ಸರೆಯಂತೆ ಹಾರಾಡುವ ಅವಕಾಶ ಸಿಕ್ಕೀತೆಂದು ಮರಿ ಮೆ-ಕೀಟ ನೀರಿನಲ್ಲಿ ಈಸಾಡುವದು; ಹಾವಿನ ಬಾಯಿಂದ ಬದುಕಿಕೊಳ್ಳಲು ಕಪ್ಪೆಯೊಂದು ನೀರಿನಲ್ಲಿ ಧುಮುಕಿ ಅಲ್ಲಿಯ ಜೀವಿಗಳಲ್ಲಿ ಅಲ್ಲೋಲಕಲ್ಲೋಲವೆಬ್ಬಿಸುವದು.

ನಾವೂ ಪ್ರಾಣಿಗಳನ್ನು ಪ್ರೀತಿಸಿ, ಅವುಗಳ ಜೀವನದ ಬಗ್ಗೆ ಆಸ್ಥೆಯನ್ನು ತಳೆದು ನಮ್ಮ ಮಕ್ಕಳಿಗೂ ಅವುಗಳ ಬಗ್ಗೆ ಆದರ ಆಸಕ್ತಿ ಬರುವಂತೆ ಮಾಡಿದರೆ ಈಗ ನಡೆದಿರುವ ಪ್ರಾಣಿಗಳ ಸಂಹಾರ ಮತ್ತು ಹತ್ಯಾಕಾಂಡ ನಿಂತು, ಅವುಗಳಿಗೆ ಹೆಚ್ಚಿನ ರಕ್ಷಣೆ ದೊರೆತಂತೆ ನಮ್ಮ ಜೀವನವೂ ಹೆಚ್ಚಿಗೆ ಅರ್ಥಪೂರ್ಣವಾದೀತು. ಮಾನವ-ಪರಿವಾರವೊಂದೇ ಪೃಥ್ವಿಯ ಮೇಲೆ ಜೀವಿಸುವ ದಿನ ಬಂದರೆ ಹೇಗಿರುತ್ತದೆ ಎಂಬುದನ್ನು ಕಲ್ಪಿಸಿದರೇ ನಡುಕ ಬರುವಂತಾಗುತ್ತದೆ.

ಮನೋಹರ ಗ್ರಂಥಮಾಲಾ

* ೧೫-೮-೧೯೩೩ರಂದು ಈ ಗ್ರಂಥಮಾಲೆ ಪ್ರಾರಂಭವಾಗಿದೆ,

* ಕನ್ನಡ ಸ್ವತಂತ್ರ-ಕೃತಿ-ಪ್ರಕಟನೆಗೇ ಮೀಸಲಾಗಿದೆ.

* ಈ ವರೆಗೆ – ನಲವತ್ತಾರು ವರ್ಷಗಳ ವರೆಗೆ – ಅವಿಚ್ಛಿನ್ನವಾದಿ ಈ ಪ್ರಕಟನೆಯು ಕೆಲಸ ಮಾಡುತ್ತ ಬಂದಿದೆ.

* ಬೇಂದ್ರೆ, ಗೋಕಾಕ, ಮುಗಳಿ ಇವರು ಅನೇಕ ವರ್ಷಗಳ ವರೆಗೆ ಈ ಮಾಲೆಯ ಸಾಹಿತ್ಯ-ಸಲಹೆಗಾರರಾಗಿ ಕೆಲಸ ಮಾಡಿ ಈ ಮಾಲೆಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದ್ದಾರೆ.

* ಸದ್ಯಕ್ಕೆ ಶ್ರೀ. ಕೀರ್ತಿನಾಥ ಕುರ್ತಕೋಟಿಯುವರು ಈ ಮಾಲೆಯ ಸಾಹಿತ್ಯ ಸಲಹೆಗಾರರಾಗಿದ್ದಾರೆ.

* ಕಾದಂಬರಿ, ಸಣ್ಣಕತೆ, ಏಕಾಂಕ, ನಾಟಕ, ಹರಟೆ, ಪ್ರವಾಸಕಥನ ದಿನಚರಿ, ಪತ್ರಸಾಹಿತ್ಯ, ಜೀವನಚರಿತ್ರೆ, ಆತ್ಮಚರಿತ್ರೆ ಮೊದಲಾದ ಅನೇಕ ಸಾಹಿತ್ಯ ಪ್ರಕಾರಗಳಲ್ಲಿಯೂ ಗ್ರಾಹಕರಾದವರಿಗೆ ಗ್ರಂಥಗಳನ್ನು ಒದಗಿಸಿಕೊಟ್ಟಿದೆ.

* ೨೫ವರ್ಷಗಳ ಸವಿನೆನಪಿಗೆಂದು "ನಡೆದು ಬಂದ ದಾರಿ" ಎಂಬ ಮೂರು ಸಂಪುಟಗಳ (ಒಟ್ಟು ೨೫೦೦ ಪುಟ) ಹೊತ್ತಿಗೆಯನ್ನು ಹೊರತಂದು ಕನ್ನಡ ಸಾಹಿತ್ಯೇತಿಹಾಸಕ್ಕೆ ನೆರವಾಗಿದೆ.

* ಚಂದಾದಾರರಾದವರಿಗೆ ಒಂದು ವರ್ಷದಲ್ಲಿ ಸುಮಾರು ೬೫೦ ಪುಟಗಳನ್ನು ಗ್ರಂಥರೂಪದಲ್ಲಿ ಮಾಲೆಯು ಸಲ್ಲಿಸುತ್ತದೆ.

* ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ)
ಸಾದಾ ಪ್ರತಿಗಳಿಗೆ ಇಪ್ಪತ್ತೈದು ರೂ. (೨೫/-)
ಕ್ಯಾಲಿಕೊ ಪ್ರತಿಗಳಿಗೆ ಮೂವತ್ತೈದು ರೂ. (೩೫/-)

* ಚಂದಾಹಣವನ್ನು 'ಮನಿಯಾರ್ಡರ್' ಮೂಲಕವಾಗಲಿ, ಬ್ಯಾಂಕ ಚೆಕ್ ಮೂಲಕವಾಗಿಯಾಗಲಿ ಸಲ್ಲಿಸಬಹುದು. ವ್ಹಿ. ಪಿ. ಕಳಿಸಲಾಗುವದಿಲ್ಲ.

* ಚೆಕ್ಕುಗಳನ್ನು ಕಳಿಸುವಾಗ ದಯವಿಟ್ಟು 'ಬ್ಯಾಂಕ್' ಕಮಿಶನ್ ಸೇರಿಸಿ ಕಳುಹಿಸಬೇಕು.

* ಗ್ರಂಥಮಾಲೆಗೆ ಒಂದೇ ಸಲಕ್ಕೆ ೫೦೦ ರೂಪಾಯಿಗಳನ್ನು ಸಲ್ಲಿಸಿ ಆಜೀವ ಚಂದಾದಾರರಾಗಬಹುದು. ಅಂಥವರಿಗೆ ಹಣ ಸಲ್ಲಿಸಿದಂದಿನಿಂದ ಅವರ ಆಜೀವಪರ್ಯಂತ ಈ ಮಾಲೆಯ ಗ್ರಂಥಗಳನ್ನು ಹಾಗೆಯೇ ಸಲ್ಲಿಸಲಾಗುವದು.

ಪ್ರಾಣಿ ಪರಿಸರ

ಕೃಷ್ಣಾನಂದ ಕಾಮತ

